ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 14
ಏಪ್ರಿಲ್ 01, 2012

ಪುಟ 16 ರೂ. 5/-




Blog :janashakthi.wordpress.com e-mail : js_weekly@yahoo.com

ಜನದ್ರೋಹಿ ಬಜೆಟ್‌ಗಳು

ಬಿಜೆಪಿ ಬಜೆಟ್


ಕರ್ನಾಟಕದ
ಕೊರಳಿಗೆ
ಎಳೆದ ಉರುಳು



ಕೇಂದ್ರ ಬಜೆಟ್

ಸಬ್ಸಿಡಿ ಕಡಿತ
ಸುರುಳಿ ಬೆಲೆ ಏರಿಕೆ
ಹೊಡೆತ





ಯುಪಿಎ ಸರ್ಕಾರ : ಉಸಿರು ಉಳಿಸಿಕೊಳ್ಳುವ ತೇಪೆ 'ವ್ಯವಹಾರ'

ಎಣೆಯಿಲ್ಲದ ಕಿತ್ತಾಟಕ್ಕೆ ಕೊನೆಯೆಂತು?

ಗದಗ : ಗೋಶಾಲೆಯಲ್ಲಿ ಸೊರಗುತ್ತಿವೆ ಜಾನುವಾರುಗಳು




ಬಡವರ ಸಂಖ್ಯೆ ಕುಗ್ಗಿಸಿ ಹೇಳುವ ಯುಪಿಎ ವಂಚನೆ

ಗೋಶಾಲೆಯಲ್ಲಿ ಮೂಲ ಸೌಕರ್ಯಗಳ ಕೊರತೆ : ಸೊರಗುತ್ತಿವೆ ಇಲ್ಲಿ ಜಾನುವಾರುಗಳು!

ರಾಜ್ಯದಲ್ಲಿ ಬರಗಾಲದ ಕ್ರೂರ ನರ್ತನ ನಡೆದಿದೆ. ಸುಮಾರು 120 ತಾಲ್ಲೂಕುಗಳ ಜನ ನೀರು, ನೆರಳು ಕಾಣದೇ ಪರಿತಪಿಸುತ್ತಿದ್ದಾರೆ. ನಮ್ಮನ್ನು ಆಳುವವರು ರೆಸಾರ್ಟ್ ಯಾತ್ರೆಯಲ್ಲಿ ಮೈ ಮರೆತಿದ್ದಾರೆ. ಆಡಳಿತವು ಕಾಟಾಚಾರಕ್ಕೆ, ತೋರಿಕೆಗೆಂಬಂತೆ ಅಲ್ಲಲ್ಲಿ ಕೈಗೊಂಡಿರುವ ಬರ ಪರಿಹಾರ ಕಾಮಗಾಮಗಾರಿಗಳ 'ಗಾಂಭಿರ್ಯ" ಏನು ? ಗದಗ್ ಜಿಲ್ಲೆಯ ರೋಣ ತಾಲ್ಲೂಕಿನ ನಾಗೇಂದ್ರಗಡ ಗ್ರಾಮದಲ್ಲಿರುವ ತಾಲ್ಲೂಕಿನ ಗೋಶಾಲೆ ಸ್ಥಿತಿ ಹೇಗಿದೆ. ಓದಿ.

ರವೀಂದ್ರ ಹೊನವಾಡ



ಬರಗಾಲದ ಹಿನ್ನೆಲೆಯಲ್ಲಿ, ರೋಣ ತಾಲ್ಲೂಕಿನ ನಾಗೇಂದ್ರಗಡ ಗ್ರಾಮದ 54 ಎಕರೆ ವಿಸ್ತಾರದ ಕೆರೆಯ ದಡದ ಸುಂದರ ಪರಿಸರದಲ್ಲಿ, ರೈತರ ಜಾನುವಾರುಗಳ ರಕ್ಷಣೆ, ಪಾಲನೆ, ಪೋಷಣೆಗೆಂದು ತೆರೆದಿರುವ ಗೋಶಾಲೆ ಹಲವಾರು ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿದೆ. ಹೀಗಾಗಿ ಅಲ್ಲಿಗೆ ಬಂದು ಸೇರಿರುವ ಜಾನುವಾರುಗಳು ಸೊರಗುತ್ತ ಸಾಗಿವೆ.

ಒಣ ಭತ್ತದ ಹುಲ್ಲು ಮಾತ್ರ

ಕಂದಾಯ ಇಲಾಖೆ, ತಾಲ್ಲೂಕಾ ಪಂಚಾಯತ್ ಮತ್ತು ಪಶುಸಂಗೋಪನಾ ಇಲಾಖೆ ಸಂಯುಕ್ತಾಶ್ರಯದಲ್ಲಿ 30, ಡಿಸೆಂಬರ್, 2011 ರಂದು ಸಂಸದರಾದ ಶಿವಕುಮಾರ ಉದಾಸಿ ಹಾಗೂ ಶಾಸಕರಾದ ಕಳಕಪ್ಪ ಬಂಡಿ ಇವರಿಂದ ಪ್ರಾರಂಭಗೊಂಡ ಗೋಶಾಲೆಗೆ ಎತ್ತು, ಆಕಳು, ಎಮ್ಮೆ, ಹೋರಿ, ಮಣಕ, ಕರುಗಳು ಸೇರಿದಂತೆ ಒಟ್ಟು 100 ಜಾನುವಾರುಗಳು ಇಲ್ಲಿಯವರೆಗೆ ಬಂದು ಸೇರಿವೆ.

ಮುಖ್ಯವಾಗಿ ಗೋಶಾಲೆಯ ಜಾನುವಾರುಗಳ ಹೊಟ್ಟೆ ತುಂಬಲು ಅಲ್ಲಿ ಗುಣಮಟ್ಟವಲ್ಲದ ಹೈಬ್ರಿಡ್ ಜೋಳದ ಮೇವು ಒಂದಷ್ಟು ಭತ್ತದ ಹುಲ್ಲು ಬಿಟ್ಟರೆ ಬೇರೆನೂ ಪೂರೈಕೆಯಾಗಿಲ್ಲ. ಅಪೇಕ್ಷೆಯಂತೆ ಜಾನುವಾರುಗಳ ಉತ್ತಮ ಬೆಳವಣಿಗೆಗೆ ಬೇಕಾದ ಹಸಿ ಹುಲ್ಲು, ಸೇಂಗಾ ಹೊಟ್ಟು, ಹತ್ತಿಕಾಳು, ಕಾಳುನುಚ್ಚು, ಟಾನಿಕ್, ಬೆಲ್ಲದ ಅಚ್ಚು ಮತ್ತು ಉಪ್ಪಿನ ಕಲ್ಲು ಈ ಯಾವುದೊಂದನ್ನೂ ಇಲ್ಲಿಯವರೆಗೆ ಪೂರೈಕೆ ಮಾಡಿಲ್ಲ. ಹೀಗಾಗಿ ಜಾನುವಾರುಗಳು ಪೋಷಕಾಂಶಯುಕ್ತಗಳ ಕೊರತೆಯಿಂದ ನರಳಬೇಕಾದ ಪರಿಸ್ಥಿತಿ ಎದುರಾಗಿದೆ. ಇನ್ನಾದರೂ ಪೊಷಕಾಂಶಯುಕ್ತ ಆಹಾರ ಪೂರೈಕೆ ಆಗಬೇಕೆಂದು ರೈತರಾದ ಅಳೆಬಸಪ್ಪ ಬೆನಕನವಾರಿ ಹಾಗೂ ರೈತಪರ ಹೋರಾಟಗಾರ ಬಸವರಾಜ ಮಂತೂರ ಹೇಳುತ್ತಾರೆ.

ಕೆರೆಯಲ್ಲಿ ಸಾಕಷ್ಟು ನೀರಿನ ಲಭ್ಯತೆ ಇದೆ. ಪ್ರತ್ಯೇಕವಾಗಿ ಡೋಣಿಗಳನ್ನು ನಿರ್ಮಿಸಿಲ್ಲವಾದ್ದರಿಂದ ಜಾನುವಾರುಗಳಿಗೆ ನೀರು ಕುಡಿಯಲು ಮತ್ತು ಕುಡಿಸಲು ಬಹಳ ಅನಾನುಕೂಲವಾಗಿದೆ. ನೀರು ಕುಡಿಯ ಲು ನೇರ ಕೆರೆಗೆ ಇಳಿವ ಜಾನು ವಾರುಗಳು ಪೂರ್ಣ ನೀರಿನಲ್ಲಿ ಮುಳುಗೆದ್ದು ಬರುತ್ತಿರುವುದರಿಂದ ಕೆರೆಯ ನೀರು ಕಲುಷಿತಗೊಳ್ಳುತ್ತ ಹೋಗುತ್ತಿದೆ. ಆರೋಗ್ಯ ಮತ್ತು ಅನಾರೋಗ್ಯಪೀಡಿತ ಜಾನುವಾರುಗಳಿಗೆ ಪ್ರತ್ಯೇಕ ಕುಡಿಯುವ ನೀರಿನ ವ್ಯವಸ್ಥೆ ಇಲ್ಲಿ ಕೂಡ ಇಲ್ಲವಾಗಿದೆ.

ಬೋರ್ ವೆಲ್ ಮಾತ್ರ ನೀರೆತ್ತಲು ಪಂಪ್ ಇಲ್ಲ

ಗೋಶಾಲೆ ಪಕ್ಕದಲ್ಲಿ ಸರ್ಕಾರದಿಂದ ಬೋರ್‌ವೆಲ್ ಕೊರೆಯಲಾಗಿದೆ. 2 ಇಂಚು ನೀರು ಸಹ ಲಭ್ಯವಾಗಿದೆ. ತಿಂಗಳಾಗುತ್ತ ಬಂದರೂ ಅದಕ್ಕೆ ಮೋಟಾರ್ ಪಂಪ್ ಜೋಡಿಸಿಲ್ಲ. ಮೋಟಾರ್ ಪಂಪ್/ಕೈಪಂಪ್ ಜೋಡಿಸಿದರೆ ಗೋಶಾಲೆ ಸಿಬ್ಬಂದಿಗೆ ಭೇಟಿ ಕೊಡುವ ರೈತರಿಗೆ, ಕುರಿಗಾರರಿಗೆ ಕೆರೆಯ ಮೀನುಗಾರರಿಗೆ, ಕುಡಿಯಲು ನೀರು ಲಭ್ಯವಾಗುತ್ತದೆ. ಹಾಗೇ ಡೋಣಿಗಳನ್ನು ನಿರ್ಮಿಸಿ, ಡೋಣಿಯಿಂದ ಬೋರ್‌ವೆಲ್‌ಗೆ ಪೈಪ್‌ಲೈನ್ ಜೋಡಿಸಿದರೆ ಡೋಣಿಗಳಲ್ಲಿ ನೀರು ಸಂಗ್ರಹವಾಗುತ್ತದೆ. ಇದರಿಂದ ಜಾನುವಾರುಗಳಿಗೆ, ಸಿಬ್ಬಂದಿಗಳಿಗೆ ಮತ್ತಿತರರಿಗೆ ಕೆರೆಯ ಕಲುಷಿತ ನೀರಿನ ಬದಲು ಉತ್ತಮ ಕುಡಿಯುವ ನೀರು ಒದಗಿಸಿದಂತಾಗುವುದು.

ಕೆಲಸಗಾರರಿಗೆ ನಿಕೃಷ್ಟ ಕೂಲಿ

ಜಾನುವಾರುಗಳ ಪಾಲನೆ-ಪೋಷಣೆ-ರಕ್ಷಣೆ ಮಾಡಲು ನಾಲ್ಕು ಜನ ಗೋಪಾಲಕರು, ಒಬ್ಬ ಕಾವಲುಗಾರ, ದಿನದ 24 ಗಂಟೆಯೂ ಇಲ್ಲಿ



ಕಾರ್ಯ ನಿರ್ವಹಿಸುತ್ತಾರೆ. ಈ ಸಿಬ್ಬಂದಿ ಸಂಖ್ಯೆ ಹೆಚ್ಚಾದರೆ ಮಾತ್ರ ದನ-ಕರುಗಳಿಗೆ ಸೂಕ್ತ ಪಾಲನೆ, ರಕ್ಷಣೆ ದೊರಕುತ್ತದೆ. ಈ ದಿನಗೂಲಿ ಕಾರ್ಮಿಕರಿಗೆ ದಿನಕ್ಕೆ 150 ರೂ. ಕೂಲಿ ಮಾತ್ರ ನೀಡಲಾಗುತ್ತಿದ್ದು, ಅದನ್ನು ಸಹ ನಿಯಮಿತವಾಗಿ ಪಾವತಿಸುತ್ತಿಲ್ಲ. ವಾರಕ್ಕೊಮ್ಮೆ ಕೂಲಿ ಪಾವತಿ ಮಾಡುವ ಭರವಸೆ ಕೂಡ ಜಾರಿಯಾಗಿಲ್ಲ.

150ರೂ. ಕೂಲಿ ಸಾಕಾಗೋದಿಲ್ಲ ನಾವು ದಿನದ 24 ಗಂಟೆಯೂ ಇಲ್ಲಿದ್ದು ಜಾನುವಾರುಗಳ ಪಾಲನೆ, ರಕ್ಷಣೆ ಮಾಡಬೇಕಾಗಿದೆ. ಬೆಲೆ ಏರಿಕೆಯ ಬಾಧೆಗೆ ಒಳಗಾದ ನಮಗೆ ಕನಿಷ್ಠ 300 ರೂ. ಗಳಿಗೆ ಕೂಲಿ ಹೆಚ್ಚಿಸಬೇಕೆಂದು, ವಾರಕ್ಕೊಮ್ಮೆ ಕೂಲಿ ಪಾವತಿ ಆಗಬೇಕೆಂದು ಗೋಪಾಲಕ ಬಸವರಾಜ ಹಂಡಿ, ವಾಚ್‌ಮನ್ ಸೂಗೀರಪ್ಪ ಕೊಟಗಿ ಮನವಿ ಮಾಡಿಕೊಳ್ಳುತ್ತಾರೆ.

ಇಲ್ಲವಾದ ಪಶುಗಳ ಆರೋಗ್ಯ ಕಾಳಜಿ

ಜಾನುವಾರುಗಳ ಆರೋಗ್ಯ ರಕ್ಷಣೆಗೆಂದು ತಾಲ್ಲೂಕಿನ ವಿವಿಧ ಸ್ಥಳಗಳ, ಪಶುಚಿಕಿತ್ಸಾಲಯಗಳ ವೈದ್ಯರು, ಪರೀಕ್ಷಕರನ್ನು ದಿನದ ಸರದಿಯಂತೆ ಎರವಲು ಸೇವೆ ಪಡೆಯಲಾಗಿದೆ. ವೈದ್ಯರು, ಪರೀಕ್ಷಕರು ದೂರದ ತಮ್ಮ ಸ್ಥಳಗಳಿಂದ ಇಲ್ಲಿಗೆ ಬಂದು, ಹೋಗುವದು ದುಸ್ತರವಾಗುತ್ತಿದೆ. ಅವರು ಬಂದು ಸೇರುತ್ತಲೇ ಮಧ್ಯಾಹ್ನವಾಗುತ್ತದೆ. ಅವಸರದಲ್ಲಿ ಸಾಧ್ಯವಾದಷ್ಟು ಜಾನುವಾರು ಪರೀಕ್ಷೆ ಮಾಡಿ, ಚಿಕಿತ್ಸೆ ನೀಡುವುದು ನೋಡಿದರೆ ಅವುಗಳ ಆರೋಗ್ಯ ರಕ್ಷಣೆ ಕಾರ್ಯ ತೃಪ್ತಿದಾಯಕವಾಗಿಲ್ಲ ಎನಿಸುತ್ತದೆ. ಗೋಶಾಲೆ ಮೇ ತಿಂಗಳವರೆಗೂ ನಡೆಸಬೇಕಿರುವುದರಿಂದ ಖಾಯಂ ಆಗಿ ಇಬ್ಬರು ಪಶು ವೈದ್ಯರು- ವೈದ್ಯ ಸಿಬ್ಬಂದಿ ಇಲ್ಲಿದ್ದರೆ ಮಾತ್ರ ಉತ್ತಮ ಚಿಕಿತ್ಸೆ ಜಾನುವಾರುಗಳಿಗೆ ಸಿಗುತ್ತದೆ ಎನ್ನುತ್ತಾರೆ ರೈತರು. ಕಳೆದ ಬಾರಿ ಐದು ಜಾನುವಾರುಗಳು ರೋಗಬಾಧೆಯಿಂದ ಅಸುನೀಗಿದ್ದನ್ನು ಇಲ್ಲಿ ಸ್ಮರಿಸಬಹುದು.

ರಕ್ಷಣೆ ಬೇಕು

ಬೆಟ್ಟ-ಗುಡ್ಡಗಳ ಮಧ್ಯೆ ಗೋಶಾಲೆ ಇರುವುದರಿಂದ ತೋಳ, ಕಾಡು ಹಂದಿ, ಕತ್ತೆ ಕಿರುಬಗಳು ಇಲ್ಲಿ ಕಾಣಸಿಗುತ್ತವೆ. ಈ ಕಾಡು ಪ್ರಾಣಿಗಳು ಯಾವಾಗ ಬೇಕಾದರೂ ಗೋಶಾಲೆಗೆ ದಾಳಿ ಇಡಬಹುದು ಎಂಬ ಆತಂಕವನ್ನು ಸಮೀಪ ತೋಟ ಮಾಡಿಕೊಂಡಿರುವ ರೈತರು, ಗೋಶಾಲೆ ಸಿಬ್ಬಂದಿಗಳು ಆತಂಕ ವ್ಯಕ್ತಪಡಿಸುತ್ತಾರೆ. ಹೀಗಾಗಿ ಗೋಶಾಲೆ ಸುತ್ತ-ಮುತ್ತ ಇನ್ನೂ ಹೆಚ್ಚಿನ ಬೆಳಕಿನ ವ್ಯವಸ್ಥೆ, ವಾಚ್‌ಮನ್‌ಗಳ ನೇಮಕ ಆಗಬೇಕು.

ದನ-ಕರು ಕಟ್ಟಲು ಸೂಕ್ತವಾದ ಹಗ್ಗಗಳ ಪೂರೈಕೆಯಾಗಿಲ್ಲ. ಮೂಗುದಾಣಕ್ಕೆ ಬಳಸುವ ಸಣ್ಣ ಗಾತ್ರದ ಹಗ್ಗಗಳನ್ನು ತಂದು ಕೊರಳಿಗೆ ಕಟ್ಟಿದರೆ ಅವು ನಿಲ್ಲುವುದಿಲ್ಲ. ಕಳಪೆ, ಕಡಿಮೆ ದರದ ಹಗ್ಗಗಳ ಬದಲು ಉತ್ತಮ ದರ್ಜೆಯ ಹಗ್ಗ ಪೂರೈಕೆಯಾಗಬೇಕು. ಅಂದಾಗ ಎಡವಟ್ಟು ದನಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ.

ಈ ಹಿಂದೆ ಗೋಶಾಲೆ ತೆರೆದಾಗ ರಕ್ಷಣೆಗೆಂದು ಪೊಲೀಸ್ ಸಿಬ್ಬಂದಿ ನೇಮಿಸಲಾಗಿತ್ತು. ಈ ಬಾರಿಯೂ ನೇಮಿಸಿದರೆ ಉತ್ತಮ ಎನ್ನುತ್ತಾರೆ ಜಾನುವಾರುಗಳನ್ನು ಇಲ್ಲಿ ಬಿಟ್ಟ ರೈತರು.

ಇದೀಗ ಗೋಶಾಲೆಗೆ ಮತ್ತಷ್ಟು ಹೈಬ್ರಿಡ್ ಜೋಳದ ಮೇವು ಪೂರೈಕೆಯಾಗಿದೆ. ಲಾರಿಗಳ ಮುಖಾಂತರ ಬಂದ ಮೇವನ್ನು ಗೋಶಾಲೆ ಪಕ್ಕದಲ್ಲಿ ಸುರುವಲಾಗಿದೆ. ಸುರುವಿದ ಮೇವು ಅಡ್ಡಾ-ದಿಡ್ಡಿಯಾಗಿ ಬಿದ್ದಿದೆ. ಹೀಗೆ ಬಿದ್ದ ಮೇವನ್ನು ಬಣವಿ ಒಟ್ಟಿ ಸಂರಕ್ಷಿಸಬೇಕು. 15-20 ದಿನಗಳಾದರೂ ಬಣವಿ ನಿರ್ಮಾಣ ಕಾರ್ಯ ನಡೆದಿಲ್ಲ. ಹೀಗೇಕೆ ಎಂದು ವಿಚಾರಿಸಿದರೆ, ಬಣವಿ ಒಟ್ಟುವ ಕೃಷಿ ಕೂಲಿಕಾರರು ದಿನಗೂಲಿ 200 ರೂ.

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬಿಜೆಪಿ ಬಜೆಟ್ : ಕರ್ನಾಟಕದ ಕೊರಳಿಗೆ ಎಳೆದ ಉರುಳು

ಜನಪರ,ಅಭಿವೃದ್ಧಿ ಹರಿಕಾರ, ಯುವಪರ ಇತ್ಯಾದಿ ಬಜೆಟ್ ಮಂಡಿಸಲಾಗುವುದೆಂದು ಹೇಳಲಾಗುತ್ತಿದ್ದ ಹಿನ್ನೆಲೆಯಲ್ಲಿ ಸದಾನಂದಗೌಡರು ಮಂಡಿಸಿದ 2012-13ನೇ ಸಾಲಿನ ಬಜೆಟ್ ನ ಗಮನಿಸಿದರೆ ಇದೊಂದು ಬೊಗಳೆ ಬಜೆಟ್ ಎಂಬುದು ಸ್ಪಷ್ಟವಾಗುತ್ತದೆ. ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸಿ ದಾಖಲೆ ಸೃಷ್ಟಿಸಲು ಹಾಲಿ ಮತ್ತು ಮಾಜಿ ಸಿ.ಎಂ ಗಳು ನಡೆಸಿದ ಸ್ಪರ್ಧೆ ಬೇರೆಯೇ ಕಾರಣಕ್ಕೆ ಹೊರತು ರಾಜ್ಯದ ಅಭಿವೃದ್ಧಿ, ಜನ ಹಿತ ರಕ್ಷಣೆಗಲ್ಲ ಎಂಬುದೂ ನಿಚ್ಚಳ.

ಕಳೆದ ಸಾಲಿನ ರೂ.85,319 ಕೋಟಿ ಗೆ ಹೋಲಿಸಿದರೆ ಈ ಸಾಲಿನ 1ಲಕ್ಷ2ಸಾವಿರದ 742 ಕೋ.ಗಳ ಬಜೆಟ್ ಮೊತ್ತವೇನೋ ಹೆಚ್ಚಿನದು .ಆದರೆ ಇಷ್ಟು ಮೊತ್ತವನ್ನು ಸರಿದೂಗಿಸಲು ಸಂಪನ್ಮೂಲಗಳ ಕ್ರೋಢೀಕರಣ ಎಲ್ಲಿಂದ , ಹೇಗೆ ಎನ್ನುವುದಕ್ಕೆ ಸಮರ್ಪಕವಾದ ಉತ್ತರವನ್ನು ಕಂಡುಕೊಳ್ಳದೇ, ಆಂತರಿಕ ಸಂಪನ್ಮೂಲ ಸಂಗ್ರಹಕ್ಕೆ ಒತ್ತು ನೀಡದೇ ಹೋಗಿರುವುದು ಈ ಆಯ-ವ್ಯಯದ ಉದ್ದೇಶದ ಮೂಲವನ್ನೇ ಪ್ರಶ್ನಿಸುವಂತಹುದು. ಇದರಲ್ಲಿ ಸುಮಾರು ಶೇ.29ರಷ್ಟು ಹಣವನ್ನು ಸರಕಾರಿ.ಖಾಸಗಿ, ವಿದೇಶಿ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಎತ್ತುವುದರಿಂದಲೇ ಪಡೆಯಲಾಗುವುದು ಎಂಬುದು ಬೆಳೆಯುತ್ತಿರುವ ಆರ್ಥಿಕತೆಗೆ ಅತ್ಯಂತ ಅಪಾಯಕಾರಿಯಾದ ಅಂಶವಾಗಿದೆ. ಈಗಾಗಲೇ ರಾಜ್ಯ ಸರಕಾರದ ಮೇಲೆ ಸುಮಾರು 96ಸಾವಿರ ಕೋ.ರೂ ಗಳ ಸಾಲವಿದ್ದು ಈಗ ಹೊಸ ಸಾಲ 21500 ಕೋಟಿ, ಕೃಷಿ ಬಜೆಟ್‌ನ ನೀರಾವರಿ ಯೋಜನೆಗೆಂದು ಸುಮಾರು10500ಕೋ. ಒಳಗೊಂಡು ಒಟ್ಟು ಇನ್ನೂ ರೂ.33000 ಕೋಟಿಯಷ್ಟು ಹೊಸ ಸಾಲವನ್ನು ಎತ್ತಬೇಕಾಗುತ್ತದೆ.ಅಂದರೆ ವರ್ಷಾಂತ್ಯದಲ್ಲಿ 1 ಲಕ್ಷದ 40 ಸಾವಿರ ಕೋಟಿಯಷ್ಟು ಸಾಲದತ್ತ ಕರ್ನಾಟಕವನ್ನು ದೂಡುವ ನೀಲ ನಕ್ಷೆ ಇದಾಗಿದೆ. ಹೀಗಾಗಿ ಸದಾನಂದಗೌಡರ ಈ 'ಐತಿಹಾಸಿಕ ಬಜೆಟ್ಟಲ್ಲಿ' ಕೃಷಿ, ಕೈಗಾರಿಕೆ.ಶಿಕ್ಷಣ,ಆರೋಗ್ಯ,ರಸ್ತೆ, ಸೇತುವೆ ನಿರ್ಮಾಣ, ನೀರಾವರಿ ಇತ್ಯಾದಿ ಪ್ರತಿಯೊಂದು ರಂಗವನ್ನೂ ಸಾಲದ ಕುಣಿಕೆಗೆ ಸಿಲುಕಿಸುವ , ಆಮೂಲಕ ಖಾಸಗಿ ಬಂಡವಾಳದಾರರ ದವಡೆಗೆ ಕರ್ನಾಟಕವನ್ನು ತಳ್ಳುವ ಪ್ರಧಾನ ಉದ್ದೇಶವನ್ನು ಹೊಂದಿದೆ. ಇದುವರೆಗೂ ಬಿಜೆಪಿ ಅನುಸರಿಸಿಕೊಂಡು ಬಂದಿರುವ ಜಾಗತೀಕರಣ ,ಉದಾರೀಕರಣದ ಮುಕ್ತ ಆರ್ಥಿಕ ನೀತಿಗಳೇ ಈ ಬಜೆಟ್‌ನ್ನು ಎಳೆಯುವ ಎಂಜಿನ್ ಆಗಿದೆ. ಆ ಕಾರಣಗಳಿಂದಲೇ ಇಡೀ ಕೃಷಿಗೇ ಕಂಟಕವಾಗಿರುವ ಜಾಗತಿಕ ಬಂಡವಾಳ ಹೂಡಿಕೆದಾರರರ ಹಲವು ಹಂತಗಳ ಸಮಾವೇಶಗಳಿಗೆ ಪೂರ್ವ ಸಿದ್ಧತೆಯಾಗಿಯೂ ಈ ಬಜೆಟ್ ರೂಪುಗೊಂಡಿದೆ. ಹೀಗೆ ಬಿಜೆಪಿ ಹೊರಗೆ ಹೇಳುವ ಭರವಸೆಗಳು ಆರ್ಥಿಕ ,ರಾಜಕೀಯ ಇಚ್ಛಾಶಕ್ತಿ ಇಲ್ಲದೇ ಮೂಲೆಗೊರಗುತ್ತವೆ.

ರಾಜ್ಯ ಸರಕಾರವೇ ಬಿಡುಗಡೆ ಮಾಡಿರುವ ಬಜೆಟ್ ಪೂರ್ವ ಆರ್ಥಿಕ ಸಮೀಕ್ಷೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಕಳೆದ ವರುಷದ ಬಿಜೆಪಿಗೆ ಹೋಲಿಸಿದರೆ ಬೆಳವಣಿಗೆಯ ದರ ಶೇ. 16.9 ರಿಂದ ಶೇ. 15.9 ಕ್ಕೆ ಕುಸಿದಿದೆ. ಸುಮಾರು 16ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯದ ಉತ್ಪಾದನೆ ಕಡಿಮೆಯಾಗಿದೆ. ಅಂದರೆ ಪ್ರತ್ಯೇಕ ಕೃಷಿ ಬಜೆಟ್ ಎಂದು ಅಬ್ಬರದಲ್ಲಿ ಮಂಡಿಸಿದ ಬಜೆಟ್ ನಂತರವೂ ಈ ಸ್ಥಿತಿ ಯಾಕೆ? . ಕೃಷಿಯಲ್ಲಿ ಬೆಳವಣಿಗೆ ಸಾಧಿಸಲಿಲ್ಲ. ಸಾಲದ ಉರುಳಿಗೆ ಕೊರಳೊಡ್ಡುವ ರೈತರನ್ನು ರಕ್ಷಿಸಲಿಲ್ಲ, ಆತ್ಮಹತ್ಯೆ ತಡೆಯಲಿಲ್ಲ. ಫಸಲಿಗೆ ಬೆಲೆಯಿಲ್ಲವೆಂದು ನಿತ್ಯವೂ ಬೀದಿಗಳಲ್ಲಿ ನಿಂತು ಮಣ್ಣಿನ ಮಕ್ಕಳು ಬೊಬ್ಬಿಡುವುದನ್ನು ನಿಲ್ಲಿಸಲೂ ಇಲ್ಲ. ಹಾಗಾದರೆ ಕೃಷಿ ಬಜೆಟ್‌ನ ಸಾರ್ಥಕತೆ, ಅಗತ್ಯತೆಯಾದರೂ ಏನು?. ಈ ಸಲದ ಕೃಷಿ ಬಜೆಟ್ ಕಳೆದ ಬಾರಿಗೆ ಹೋಲಿಸಿದರೆ 1083 ಕೋಟಿ ರೂ ಗಳ ಹೆಚ್ಚಳ ಅಷ್ಟೇ. (19660 ಕೋಟಿ). ವಿಪರ್ಯಾಸವೆಂದರೆ 18 ಸಾವಿರ ಕೋ. ರೂಗಳ ಕೃಷಿ ಬಜೆಟ್‌ನಲ್ಲಿ ಖರ್ಚು ಮಾಡಿದ್ದು ಸುಮಾರು 243 ಕೋಟಿ ಮಾತ್ರ ಎಂಬ ಸಂಗತಿ ಸರ್ಕಾರದ ಡೊಂಗಿತನ, ದ್ರೋಹವನ್ನು ಬಿಚ್ಚಿಡುತ್ತದೆ.

ಒಟ್ಟಾರೆ ಸಾಲವನ್ನೇ ಆಧರಿಸಿದ ಬಜೆಟ್ ರಾಜ್ಯದ ಜನರನ್ನು ಇನ್ನಷ್ಟು ಹಿಂಡಲಿದೆ. ಈ ಬಜೆಟ್ ವರ್ತಮಾನದಲ್ಲಿ ರಾಜ್ಯವು ಎದುರಿಸುತ್ತಿರುವ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿಲ್ಲ. ಸಂಪನ್ಮೂಲ ಸಂಗ್ರಹಿಸಲು ತೆರಿಗೆಗಳ್ಳರು, ಕಾಳಸಂತೆಚೋರರು, ಅಕ್ರಮ ಉದ್ದಿಮೆಗಳನ್ನು ನಿಯಂತ್ರಣಕ್ಕೊಳಪಡಿಸಲು ಕ್ರಮಗಳೇ ಇಲ್ಲ. ವಿಶೇಷವಾಗಿ ಗಣಿ ಹಾಗೂ ಭೂ ಹಗರಣಗಳಿಂದ

ಪುಟ 4 ಕೆ

ಎಣೆ ಇಲ್ಲದ ಕಿತ್ತಾಟಕ್ಕೆ ಕೊನೆ ಎಂತು?

ಮತ್ತೆ ಮತ್ತೆ ಮರುಕಳಿಸುತ್ತಲೇ ಇರುವ ಈ ಸ್ಥಿತಿಗೆ ಅಂತ್ಯವೇನಾದರೂ ಇದೆಯೇ ? ಇದೆ ಎನ್ನುವುದಿದ್ದರೆ ಈ ಕೂಡಲೇ ವಿಧಾನ ಸಭೆಯನ್ನು ವಿಸರ್ಜಿಸಿ ಹೊಸತಾಗಿ ಚುನಾವಣೆಗೆ ಹೋಗಬೇಕು. ಇಲ್ಲವಾದರೆ ಈ ಕಿತ್ತಾಟ, ಹಣಾಹಣಿ, ಅದಃ 'ಪತನಗಳು ನಿಲ್ಲಲಾರವು. ಕಳೆದ ಈ ವಾರದಲ್ಲಿ ಏನೇನು ಸಂಭವಿಸಿದವು !

ಕಮಲದೊಳಗೇ ಆಪರೇಷನ್!



ಆಡಳಿತ ಪಕ್ಷದ ಶಾಸಕರು, ಸಚಿವರು, ಅದು ಮಾಜಿ ಮುಖ್ಯಮಂತ್ರಿಯ ನೇತೃತ್ವದಲ್ಲಿ ಅಪಹರಣಗೊಂಡು ರೆಸಾರ್ಟ್‌ನಲ್ಲಿ ಉಳಿದು ವಿಧಾನ ಸಭೆಯ ಕಲಾಪಗಳಿಗೆ ಬಹಿಷ್ಕಾರ ಹಾಕಿದರು. ಮಾತ್ರವಲ್ಲ ,ಬಜೆಟ್‌ನ ಅಧಿವೇಶನವನ್ನೇ ಬಹಿಷ್ಕರಿಸಿ ಕಲಾಪಗಳನ್ನೇ ಅಸ್ತವ್ಯಸ್ತಗೊಳಿಸಿ ತಮ್ಮದೇ ಸರಕಾರವನ್ನು ಪತನದಂಚಿಗೆ ತಂದು ನಿಲ್ಲಿಸಿದರು. ಇದಕ್ಕಿಂತ ಅರಾಜಕತೆ, ಅಧಿಕಾರದಾಹಕ್ಕೆ ಇನ್ನೊಂದು ಉದಾಹರಣೆ ಬೇಕೆ?

ಅಪಹರಣ

ಅಧಿಕಾರಕ್ಕೇರಲು, ಅಧಿಕಾರ ಉಳಿಸಿಕೊಳ್ಳಲು 'ಆಪರೇಷನ್ ಕಮಲ'ವೆಂಬ ವಿನೂತನ ವಿಕೃತ ಪಕ್ಷಾಂತರವನ್ನು ಜಾರಿಗೆ ತಂದ ಬಿಜೆಪಿಯೇ ಈಗ ಆ ಪಕ್ಷದ ನಾಯಕರ ಅಧಿಕಾರ ದಾಹಕ್ಕೆ ಪಕ್ಷದೊಳಗೆ ಆಪರೇಷನ್ ಕಮಲ ನಡೆಯುತ್ತಲೇ ಇದೆ. ಶಾಸಕರು, ಸಚಿವರ ಹೈಜಾಕ್-ಅಪಹರಣ ನಡೆಯುತ್ತಲೇ ಇವೆ. ತಾವು ದೋಷ ಮುಕ್ತವಾಗಿ ಬಿಟ್ಟಿರುವುದರಿಂದ ಈ ಕೂಡಲೇ ಸದಾನಂದಗೌಡ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು ಕೊಡಬೇಕೆಂದು ಪಟ್ಟುಹಿಡಿದ ಯಡಿಯೂರಪ್ಪನವರ ಬಣ ಸಾರಿದ ಬಂಡಾಯ ಹೇಸಿಗೆ ತರುವಂತಿದೆ. 67 ಶಾಸಕರು, 10 ಸಂಸದರ ಬೆಂಬಲವನ್ನು ತೋರಿಸಿದ ಯಡಿಯೂರಪ್ಪ ತನ್ನ ಬಲ ಪ್ರದರ್ಶಿಸಿ ಸೆಡ್ಡು ಹೊಡೆದದ್ದು ನೇರ ಹೈಕಮಾಂಡಿಗೆ.

ಬಿಜೆಪಿಯೊಳಗಿನ ಅಧಿಕಾರದಾಹದ ಕಿತ್ತಾಟ ಹೊಸತೇನಲ್ಲ. ಶಾಸಕರ ಅಪಹರಣ, ರೆಸಾರ್ಟ್ ರಾಜಕಾರಣದಿಂದಾಗಿ ಕಿತ್ತಾಟ-ಬಡಿದಾಟ ಉಚ್ಛ್ರಾಯಸ್ಥಿತಿ ತಲುಪಿ, ಸಂವಿಧಾನಿಕ ಬಿಕ್ಕಟ್ಟನ್ನು ಸೃಷ್ಟಿಸುವ ಹಂತದಲ್ಲಿತ್ತು. ಆಳುವ ಬಹುತೇಕ ಸದಸ್ಯರು ಕಲಾಪ ಬಹಿಷ್ಕರಿಸಿ ಬಿಟ್ಟಿದ್ದರಿಂದ ಸರ್ಕಾರವೇ ಇಲ್ಲದಂತಾಗಿತ್ತು. ಇದೆಲ್ಲಾ ನಡೆದದ್ದು ಕೇವಲ ಅಧಿಕಾರಕ್ಕಾಗಿ. ರಾಜ್ಯದ ಜನತೆ ತೀವ್ರತರ ಬರಗಾಲ , ಕುಡಿಯುವ ನೀರು, ವಿದ್ಯುತ್, ಆಹಾರದ ಕೊರತೆಯಂತಹ ಅತ್ಯಂತ ಜ್ವಲಂತ ಸಮಸ್ಯೆಗಳಲ್ಲಿ ತತ್ತರಿಸುತ್ತಿರುವುದು ಸದಾನಂದಗೌಡ, ಅನಂತಕುಮಾರ್, ಈಶ್ವರಪ್ಪ ಅಥವಾ ಯಡಿಯೂರಪ್ಪ ಶೆಟ್ಟರ್ ರವರಿಗೆ ಗಂಭೀರ ಪ್ರಶ್ನೆಗಳೇ ಅಲ್ಲವೆನ್ನುವುದು ಬಿಜೆಪಿ ತಲುಪಿರುವ ದಿವಾಳಿತನ, ಅದಃಪತನದ ಸೂಚಕವಾಗಿದೆ. ಈ ಎಲ್ಲಾ ಗುಂಪುಗಳಿಗೆ ಅಧಿಕಾರ ಬೇಕಿರುವುದೇ ಲೂಟಿ, ಹೊಡೆಯಲು, ಅಕ್ರಮಗಳನ್ನು, ಹಗರಣಗಳನ್ನು ಮುಚ್ಚಿಹಾಕಿಕೊಳ್ಳಲು.

ಹೇಸಿಗೆ

ಇಷ್ಟೆಲ್ಲಾ ಅಸಹ್ಯಕರ ಪ್ರಸಂಗಗಳು ನಡೆಯುತ್ತಿದ್ದರೂ ಬಿಜೆಪಿಯ ಹೈಕಮಾಂಡ್‌ನ ನಾಯಕರು ತೆಪ್ಪಗಿದ್ದದ್ದು ಅದು ತಲುಪಿರುವ ದುಃಸ್ಥಿತಿಯ ಸೂಚಕ. ಇಡೀ ಸಮಸ್ಯೆಯ ಭಾಗವೂ ಆಗಿರುವ ಅವರಿಂದ ಇನ್ನೇನು ಮಾಡಲಾದೀತು?. ಅವರು ನಿಷ್ಠುರ ಕ್ರಮ ವಹಿಸುವ ಮಾತನ್ನಾಡದೇ ಸಮಾಧಾನ, ರಾಜಿ ಮಾತುಕತೆಗೆ ಕರೆದದ್ದು ಯಾವ ಶಿಸ್ತು?

ಈಗೇನೋ ಒಂದು ಪರಿಹಾರ ನೀಡುವ ಭರವಸೆಯೊಂದಿಗೆ ಯಡಿಯೂರಪ್ಪನವರ ಬಣದ ಶಾಸಕರು, ಸಚಿವರು ಕಲಾಪಗಳಿಗೆ ಹಾಜರಾಗುವ ಮೂಲಕ ಬಜೆಟ್ ಮಂಡನೆಗೆ ಸದಾನಂದಗೌಡರಿಗೆ ಅವಕಾಶ ಕಲ್ಪಿಸಲಾಗಿದೆ. 'ಬಜೆಟ್ ಏನಿದ್ದರೂ ತಾನು ಮಾತ್ರವೇ ಮಂಡಿಸಬೇಕು. ಅದರ ಕೀರ್ತಿ ತನ್ನದಾಗಬೇಕು' ಎಂದು ಪಟ್ಟು ಹಿಡಿದಿದ್ದ ಯಡಿಯೂರಪ್ಪ ಬಣ ಹೈಕಮಾಂಡ್‌ನ ಭರವಸೆ ಬಳಿಕ ಅಪ್ಪರ ಮಟ್ಟಿಗೆ. ರಾಜಿಗೆ ಬಂದಿದೆ.

ಪುಟ 14 ಕ್ಕೆ

ಕಾರ್ಟೂನ್ ಕಾರ್ನರ್



ಕೃಪೆ: ಪ್ರಜಾವಾಣಿ

ಹಾಸನ : ಪ್ರಜಾಪ್ರಭುತ್ವ ವಿರೋಧಿ ಅಶ್ವಮೇಧ ಯಾಗದ ವಿರುದ್ಧ ಪ್ರತಿಭಟನೆ

ಮೊನ್ನೆ ಹಾಸನದಲ್ಲಿ 8 ಕೋಟಿ ವೆಚ್ಚದಲ್ಲಿ ಒಂದು ಯಗ್ನ ಸಂಘಟಿಸುವ ಯತ್ನ ನಡೆದಿದೆ. ಈ ಯಗ್ನದಲ್ಲಿ ಪಾಲ್ಗೊಳ್ಳುವ ಒಬ್ಬೊಬ್ಬ ಪುರೋಹಿತರಿಗೂ ತಲಾ 5 ಲಕ್ಷ ದಕ್ಷಿಣೆ ನೀಡಲಾಗಿದೆಯಂತೆ. 'ಸಮಾಜದ ಕ್ಷೇಮ'ಕ್ಕಾಗಿ ಎನ್ನಲಾಗುವ ಇಂತಹ ಯಗ್ನಗಳು ಯಾವ ಸಮಾಜದ ಕ್ಷೇಮಕ್ಕಾಗಿ ಎಂದು ಅರ್ಥ ಮಾಡಿಕೊಳ್ಳಬೇಕಿದೆ.



ಹಾಸನ ನಗರದ ಹೊರವಲಯದಲ್ಲಿ ನಡೆಸಲಾಗುತ್ತಿದ್ದ ಸಾಂಕೇತಿಕ 'ಅಶ್ವಮೇಧಯಾಗವನ್ನು' ವಿರೋಧಿಸಿ ಮಾರ್ಚ್ 3ರಂದು ಹಾಸನದ ಹೇಮಾವತಿ ಪ್ರತಿಮೆ ಎದಿರು ಸಿಪಿಐ(ಎಂ) ನೇತೃತ್ವದಲ್ಲಿ ಜನಪರ ಸಂಘಟನೆಗಳು ಪ್ರತಿಭಟನಾ ಸಭೆ ನಡೆಸಿದವು.

ಅಶ್ವಮೇಧಯಾಗ ಅತ್ಯಂತ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ವೈದಿಕ ಪುರೋಹಿತಶಾಹಿ ಪಾಳೇಗಾರೀ ಸಂಸ್ಕೃತಿಯ ವಿಕೃತ ಆಚರಣೆಯಾಗಿದೆ ಎಂದು ಸಿಪಿಐ(ಎಂ) ಸ್ಥಳೀಯ ಸಮಿತಿ ಕಾರ್ಯದರ್ಶಿ ಧರ್ಮೇಶ್ ಖಂಡಿಸಿದರು. ಪಾಳೇಗಾರೀ(ಊಳಿಗಮಾನ್ಯ) ವ್ಯವಸ್ಥೆಯ ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಸ್ಥಾಪಿಸಲು ಆರ್ಯರು ಹೂಡಿದ ತಂತ್ರವೇ ಈ ಅಶ್ವಮೇಧಯಾಗ. ವೈದಿಕ ಪುರೋಹಿತರ ವ್ಯವಸ್ಥಿತ ಕಾಮಕೇಳಿಗೆ ಈ ಅಶ್ವಮೇಧಯಾಗ ಭೂಮಿಕೆಯಾಗಿದ್ದಿತು. ಯಾಗದ ಹೆಸರಿನಲ್ಲಿ ಸಮಾಜದ ದುಡಿಮೆಯ ಸಂಪತ್ತನ್ನು ವ್ಯವಸ್ಥಿತವಾಗಿ ಲೂಟಿ ಮಾಡಲಾಗುತ್ತಿತ್ತು. ಯಜ್ಞಕ್ಕೆ ಹವಿಸ್ಸು ನೀಡಲು ಪ್ರಾಣಿಗಳ ಮಾರಣ ಹೋಮವೇ ನಡೆಯುತ್ತಿತ್ತು. ಇಂತಹ ಜನವಿರೋಧಿ, ಜೀವವಿರೋಧಿ ಹಿನ್ನೆಲೆ ಹೊಂದಿರುವ ಅಶ್ವಮೇಧಯಾಗ ಇಂದಿನ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಶ್ಯಕತೆ ಇತ್ತೇ ಎಂದು ಧರ್ಮೇಶ್ ಪ್ರಶ್ನಿಸಿದರು. ಅದೇ ಹಣವನ್ನು ಸಾರ್ವಜನಿಕ ರಸ್ತೆ ನಿರ್ಮಾಣಕ್ಕೆ, ಶಿಕ್ಷಣಕ್ಕೆ, ಕುಡಿಯುವ ನೀರಿಗೆ ಬಳಸಬಹುದಿತ್ತು. ಜನರ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಂಡು ಅವರ ದುಡಿಮೆಯ ಫಲವನ್ನು ಕಸಿದುಕೊಳ್ಳುವ ಈ ಕುತಂತ್ರವನ್ನು ಪ್ರತಿಯೊಬ್ಬ ಭಾರತೀಯನೂ ವಿರೋಧಿಸಬೇಕಿದೆ. ಇಂತಹ ಮೌಢ್ಯತೆ ಸಾರುವ ಆಚರಣೆಗಳನ್ನು ಹಾಗು ಮೂಢನಂಬಿಕೆಯ ಪ್ರಸಾರವನ್ನು ನಮ್ಮ ಸಂವಿಧಾನ ಸ್ಪಷ್ಟವಾಗಿ ನಿಷೇಧಿಸಿದೆ ಎಂದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ದಲಿತ ಮುಖಂಡ ಎಚ್.ಕೆ.ಸಂದೇಶ್‌ರವರು ಮಾತನಾಡುತ್ತಾ ಅಲ್ಲಿ ನಡೆಯುತ್ತಿರುವ ಯಾಗಕ್ಕೆ ಜನರ ದುಡ್ಡು ಬಳಕೆ ಮಾಡಿದ್ದರೂ, ಯಾಗ ಮಾಡುತ್ತಿರುವ ಪುರೋಹಿತರಿಗೆ ಒಂದು ತರಹದ ಊಟ ಹಾಗು ಅಲ್ಲಿಗೆ ಹೋಗುವ ಸಾಮಾನ್ಯ ಜನರಿಗೆ ಒಂದು ತರಹದ ಊಟದ ವ್ಯವಸ್ಥೆ ಮಾಡುವ ಮುಖಾಂತರ ಅಲ್ಲಿ ಪಂಕ್ತಿಬೇದ ಹಾಗು ಮಾನವಬೇಧ ನೀತಿ ಅನುಸರಿಸಲಾಗುತ್ತಿದೆ. ಸಮಾಜದ ಸಂಪತ್ತಿನ ಲೂಟಿಗೆ ಈ ಯಾಗ ವೇದಿಕೆಯಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇಂತಹ ಪುರೋಹಿತಶಾಹಿ ಆಚರಣೆಗಳು ಅತಿ ಹೆಚ್ಚಾಗಿ ನಡೆಯುತ್ತಿವೆ ಎಂದರು.

ಪ್ರತಿಭಟನಾ ಸಭೆಯಲ್ಲಿ ವಿಚಾರವಾದಿಗಳ ಸಂಘದ ಶ್ರೀನಿವಾಸ ನಟೇಕರ್, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ವಿಜಯಕುಮಾರ್, ಕೆಕೆಎನ್‌ಎಸ್‌ಎಸ್‌ನ ಎಚ್.ಟಿ.ರಾಮೇಗೌಡ, ಯುವ ದಲಿತ ಸಂಘರ್ಷ ಸಮಿತಿಯ ಹೆತ್ತೂರು ನಾಗರಾಜ್ ಹಾಗು ಕ್ರಾಂತಿ ತ್ಯಾಗಿ, ಡಿವೈಎಫ್‌ಐನ ಜಿಲ್ಲಾಧ್ಯಕ್ಷ ಬಿ.ಜಿ.ಗಿರೀಶ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಎಂ.ಜಿ.ಪೃಥ್ವಿ, ಸಿಐಟಿಯುವಿನ ಪ್ರಕಾಶ್, ಮಾನವ ಹಕ್ಕುಗಳ ದಲಿತ ಹೋರಾಟ ಸಮಿತಿಯ ಮರಿಜೋಸೆಫ್, ಬಿಜಿವಿಎಸ್‌ನ ಎಚ್.ಜಿ.ಮಂಜು ಭಾಗವಹಿಸಿ ಮಾತನಾಡಿದರು. ಪ್ರತಿಭಟನಾ ಸಭೆಯಲ್ಲಿ ಸಿಪಿಐ(ಎಂ) ಹಾಗೂ ಮತ್ತಿತರೆ ಜನಪರ ಸಂಘಟನೆಯ ಕಾರ್ಯಕರ್ತರು ಭಾಗವಹಿಸಿದ್ದರು.

....ಕರ್ನಾಟಕದ ಕೊರಳಿಗೆ ಎಳೆದ ಉರುಳು

ಪುಟ 3 ರಿಂದ

ಲಕ್ಷಾಂತರ ಕೋಟಿ ರೂಪಾಯಿಗಳ ಹಣ ರಾಜ್ಯಕ್ಕೆ ಸಿಗದೇ ಖಾಸಗಿಯವರ ಕೈಯಲ್ಲಿದೆ. ಇಡೀ ವರ್ಷದ ವಿದ್ಯಾಮಾನಗಳಲ್ಲಿ ಅವು ಅಲ್ಲೋಲ ಕಲ್ಲೋಲ ಎಬ್ಬಿಸಿದ ವಿದ್ಯಾಮಾನಗಳಾಗಿದ್ದರೂ ತೆರಿಗೆ, ಸುಂಕದ ವ್ಯವಸ್ಥೆ ಪುನರ್ ರೂಪಿಸಿ ,ಇನ್ನಷ್ಟು ಬಲಗೊಳಿಸಿ ಹಣ ಸಂಗ್ರಹಿಸಲು ಕಿಂಚಿತ್ತೂ ಯೋಚಿಸಿಲ್ಲ. ಕ್ರಮಗಳೇ ಇಲ್ಲ. ಭ್ರಷ್ಟಾಚಾರವನ್ನು ಮಟ್ಟ ಹಾಕದಲ್ಲಿ ಅದರಿಂದಲೂ ರಾಜ್ಯದ ಬೊಕ್ಕಸಕ್ಕೆ ಹಣ ಸೇರಲಿದ್ದು ಅದಕ್ಕೂ ಪೂರ್ಣ ಖಿಲಾಸೆ ಮಾಡಲಾಗಿದೆ. ಲೂಟಿಯನ್ನು ನಿರಾತಂಕ ಗೊಳಿಸಲಾಗಿದೆ. ಹೀಗೆ ಇದು ಗಣಿ ಹಾಗೂ ಭೂ ಮಾಫಿಯಾಗಳ ಸರ್ಕಾರವೆಂಬುದನ್ನು ಮತ್ತೇ ತೋರಿಸಿದೆ.

ರಾಜ್ಯದ 123 ತಾಲ್ಲೂಕುಗಳು ತೀವ್ರತರ ಬರಗಾಲ ಎದುರಿಸುತ್ತಿವೆ. ಪರಿಹಾರ ಕಾರ್ಯಗಳು ಗಳು ಸಮರೋಪಾಧಿಯಲ್ಲಿ ನಡೆಯಬೇಕಿದೆ.ಸಾವಿರಾರು ಕೋಟಿ ಬೇಕಾಗಿದೆ. ಆದರೆ ಇದಕ್ಕೆ ಕೇವಲ 301 ಕೋಟಿ ರೂಪಾಯಿಗಳನ್ನು ಮಾತ್ರ ಮೀಸಲಿಟ್ಟಿರುವುದು ಅದರ ನಿಷ್ಕಾಳಜಿಯ –ಪ್ರತೀಕವಾಗಿದೆ . ಹಾಗೆಯೇ ವೇತನ ಹೆಚ್ಚಳ, ಸೇವಾ ಭದ್ರತೆ, ಕನಿಷ್ಠ ಸೌಲಭ್ಯಗಳಿಗಾಗಿ ನಿರಂತರ ಹೋರಾಟದಲ್ಲಿರುವ ಅಸಂಘಟಿತ ಕಾರ್ಮಿಕರಿಗೆ, ಸರ್ಕಾರದ ಏನೊಂದೂ ಪರಿಹಾರ ಒದಗಿಸಿಲ್ಲ.ಕೃಷಿ ಕೂಲಿಕಾರರನ್ನು ಹಿಂದಿನಂತೆ ಪೂರ್ಣ ಮರೆತು ಬಿಡಲಾಗಿದೆ. ಬೆಲೆ ಏರಿಕೆಯನ್ನು ನಿಯಂತ್ರಿಸಲು, ಪಡಿತರ ಮೂಲಕ ಸುಲಭ ದರದಲ್ಲಿ ರೇಷನ್ ಸಿಗುವಂತಾಗಲು ಕ್ರಮಗಳಿಲ್ಲ. ಜನಸಾಮಾನ್ಯರು, ದುಡಿವ ವರ್ಗವನ್ನು ಪೂರ್ಣವಾಗಿ ಕಡೆಗಣಿಸಲಾಗಿದೆ. ಅಲ್ಲದೇ ಹೊಸ ಸುಂಕ, ತೆರಿಗೆಗಳ ಮೂಲಕ ಇನ್ನಷ್ಟು ದೋಚಲಾಗುತ್ತಿದೆ. ಬೀಡಿಗೆ ಹೊಸ ತೆರಿಗೆ ಹೇರಲಾಗಿದೆ, ಪ್ರಾದೇಶಿಕ ಅಸಮಾನತೆ ಪ್ರಶ್ನೆ, ಉದ್ಯೋಗ ಸೃಷ್ಟಿ, ಶಿಕ್ಷಣ ನೀಡಿಕೆ, ಸಾಮಾಜಿಕ ಕಲ್ಯಾಣ, ಪೂರ್ಣ ನಿರ್ಲಕ್ಷಿಸಲಾಗಿದೆ. ಡೀಸೆಲ್ ಮೇಲಿನ ಸುಂಕದಲ್ಲಿ ಶೇ 1ನ್ನು ಕಡಿತ ಮಾಡಲಾಗಿದೆಯೆಂದು ಸರ್ಕಾರ ಹೇಳಿಕೊಳ್ಳುವುದು ಕಣ್ಣೊರೆಸುವ ತಂತ್ರವಾಗಿದೆ. ಕರಾವಳಿಯ ದೊಡ್ಡ ಹಡಗು ಉದ್ಯಮಿಗಳು, ಸರಕುಸಾಗಣೆದಾರರಿಗೆ ಡೀಸೆಲ್ ಮೇಲೆ ಶೇ. 17 ಮತ್ತು ಶೇ 13 ರಷ್ಟು ತೆರಿಗೆ ವಿನಾಯಿತಿ ನೀಡಿದ್ದನ್ನು ಮುಚ್ಚಿಕೊಳ್ಳಲು ಈ ಶೇ. 1 ನ್ನು ತೋರಿಸಲಾಗುತ್ತಿದೆ.

ಇವೆಲ್ಲದರೊಟ್ಟಿಗೆ ಈ ಸರ್ಕಾರ ಸಾವಯವ ಕೃಷಿ, ಗೋಶಾಲೆ–ಗೋಸಂರಕ್ಷಣೆ, ಸಂಘಪರಿವಾರ ಬೆಂಬಲಿತ ಮಠ–ಸಂಸ್ಥೆಗಳಿಗೆ ನೂರಾರು ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಹಣವನ್ನೇ ನೀಡುತ್ತಿದೆ. ಮುಖ್ಯವಾಗಿ ಹಿಂದಿನ ಯಡಿಯೂರಪ್ಪನವರ ಸರ್ಕಾರ ಆರಂಭಿಸಿದ ಜಾತಿವಾರು ಮಠಾಧೀಶರಿಗೆ ಸರ್ಕಾರಿ ಹಣ ನೀಡಿಕೆಯನ್ನೇ ಸದಾನಂದಗೌಡರು ಮುಂದುವರಿಸಿದ್ದಾರೆ, ವಿಸ್ತರಿಸಿದ್ದಾರೆ.ವಿಶೇಷವಾಗಿ ಅದನ್ನು ಹಿಂದುಳಿದ ಜಾತಿಗಳ ಮಠಗಳಿಗೆ ನೀಡುವ ಮೂಲಕ ಜಾತಿ ಓಲೈಕೆಗೆ, ಬಿಜೆಪಿಯ ಮತ ಬ್ಯಾಂಕ್ ರಾಜಕಾರಣಕ್ಕೆ ಸಾರ್ವಜನಿಕ ಹಣವನ್ನು ದುರ್ಬಳಕೆ ಮಾಡಲಾಗುತ್ತಿದೆ. ಇದು ಜಾತಿ ಜಾತಿಗಳ ನಡುವೆ ತೀವ್ರತರ ವೈಷಮ್ಯವನ್ನು ಇನ್ನಷ್ಟು ಹೆಚ್ಚಿಸಲಿದೆ.

ಬಿಜೆಪಿಯೊಳಗಿನ ಅಧಿಕಾರಕ್ಕಾಗಿ ಕಿತ್ತಾಟದಿಂದ ಬಜೆಟ್ ಮಂಡನೆಯೇ ಅಸಾಧ್ಯವಾಗಿ ಹೋಗಿತ್ತು. ಸದಾ ಅತಂತ್ರ ಸ್ಥಿತಿಯಲ್ಲಿರುವ ಭ್ರಷ್ಟ ಸರ್ಕಾರ ಮಂಡಿಸಿದ ಇಂತಹ ಬಜೆಟ್ ಹೇಗಿರಬಹುದೆಂಬುದಕೆ ಇದೇ ಸಾಕ್ಷಿಯಾಗಿದೆ. ಈ ಜನದ್ರೋಹಿ, ಬಜೆಟ್‌ನ್ನು ಜನತೆ ತಿರಸ್ಕರಿಸಬೇಕು ಬದಲಾಯಿಸಲು ಒತ್ತಾಯಿಸಬೇಕು.

ಕರ್ನಾಟಕದ ಮಧ್ಯ ಭಾಗದಲ್ಲಿರುವ ಸುಮಾರು 10 ಜಿಲ್ಲೆಗಳಿಗೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ರೂಪಿಸಬೇಕೆಂದು ಆಗ್ರಹಿಸಿ ಮಾರ್ಚ್ 16, 2012 ರಂದು ತುಮಕೂರಿನಲ್ಲಿ ಶಾಶ್ವತ ನೀರಾವರಿ ಹೋರಾಟ ಸಮಿತಿಯ ನೇತೃತ್ವದಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಈ ಸಮಾವೇಶದಲ್ಲಿ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ, ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಮಂಡ್ಯ, ರಾಮನಗರ ಜಿಲ್ಲೆಗಳ ನೀರಾವರಿ ಹೋರಾಟ ಸಮಿತಿಯ ಮುಖಂಡರು, ಕಾರ್ಯಕರ್ತರು, ಮತ್ತು ರೈತರು-ಕೂಲಿಕಾರರು-ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

"ಮಧ್ಯ ಕರ್ನಾಟಕ ಜಿಲ್ಲೆಗಳು ಮರುಭೂಮಿಯಾಗುವುದನ್ನು ತಪ್ಪಿಸಿ"
ಶಾಶ್ವತ ನೀರಾವರಿ ಯೋಜನೆಗಳ ಜಾರಿಗಾಗಿ ರಾಜ್ಯಮಟ್ಟದ ಸಮಾವೇಶ

ಹೆಚ್.ಆರ್.ನವೀನ್‌ಕುಮಾರ್

ಮರುಭೂಮಿಯಾಗುವ ಹಾದಿಯಲ್ಲಿ

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿಗಳೂ, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಬಯಲುಸೀಮೆಯ 10 ಜಿಲ್ಲೆಗಳಲ್ಲಿ ಕುಡಿಯುವ ನೀರು ಮತ್ತು ನೀರಾವರಿ ಸಮಸ್ಯೆ ದಶಕಗಳಿಂದ ಇದ್ದು, ಈ ಜಿಲ್ಲೆಗಳು ಬರಪೀಡಿತ ಜಿಲ್ಲೆಗಳಾಗಿದ್ದರೂ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರಗಳನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನವನ್ನು ಆಳುವ ವರ್ಗಗಳು ಮಾಡಲಿಲ್ಲ. 1985 ರಲ್ಲೆ ಮಧ್ಯ ಕರ್ನಾಟಕದ 8 ಜಿಲ್ಲೆಗಳ ಅಂತರ್ಜಲದ ಪರಿಸ್ಥಿತಿಯ ಬಗ್ಗೆ ಉಪಗ್ರಹ ಸಮೀಕ್ಷೆ ನಡೆಸಿ ಸಕಾರಕ್ಕೆ ವರದಿ ನೀಡಲಾಗಿತ್ತು. ಈ ವರದಿಯ ಪ್ರಕಾರ ಅಂತರ್ಜಲವನ್ನು ವೃದ್ಧಿಸಲು ಬೇಕಾದ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳದಿದ್ದರೆ ಮುಂದಿನ 20 ವರ್ಷಗಳಲ್ಲಿ ಈ ಜಿಲ್ಲೆಗಳು ರಾಜಸ್ತಾನದ ಮರುಭೂಮಿಯಂತಾಗುತ್ತವೆ ಎಂದು ಎಚ್ಚರಿಸಲಾಗಿದ್ದರೂ ಯಾವ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. 4-5 ಜಿಲ್ಲೆಗಳಲ್ಲಿ ಅಂತರ್ಜಲದ ಮಟ್ಟ 1500 ಅಡಿಗೆ ಇಳಿದಿದ್ದು 40-50 ಎಕರೆ ಭೂಮಿಹೊಂದಿದ್ದರೂ ನೀರಾವರಿ ಇಲ್ಲದ ಕಾರಣ ಅವರೆಲ್ಲರೂ ಬದುಕು ಸಾಗಿಸಲು ಹಮಾಲಿ ಕೆಲಸವನ್ನು ಮಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಮಳೆ ಪ್ರಮಾಣ ಕುಸಿತ

ಈ ಭಾಗದ ಜಿಲ್ಲೆಗಳಲ್ಲಿ ಮಳೆಯ ಸರಾಸರಿ ಪ್ರಮಾಣ ಅರ್ಧಕ್ಕೆ ಕುಸಿದಿದ್ದು ಮಳೆ ಪ್ರಮಾಣ ನಿರಂತರವಾಗಿ ಕಡಿಮೆಯಾಗುತ್ತಿದೆ. ಈ ಪ್ರದೇಶಗಳಲ್ಲಿ 12,000 ಕೆರೆಗಳಿದ್ದು ಕೃಷಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಜನ ಈ ಕೆರೆಗಳನ್ನೇ ಅವಲಂಬಿಸಿದ್ದಾರೆ ಆದರೆ ಈ ಕೆರೆಗಳಲ್ಲಿ ವಿಪರೀತ ಹೂಳು ತುಂಬಿದ್ದು ನೀರಿನ ಶೇಖರಣೆಯ ಸಾಮರ್ಥ್ಯ ಕಡಿಮೆಯಾಗಿದೆ ಆದ್ದರಿಂದ ಅಂತರ್ಜಲದ ಪ್ರಮಾಣ ತೀರ್ವವಾಗಿ ಕುಸಿದಿದ್ದು ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗಿದೆ.

ಈ ಭಾಗದ ಜಿಲ್ಲೆಗಳ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿದ್ದು ಮನುಷ್ಯನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ದೇಹದ ಮೂಳೆಗಳು ದುರ್ಬಲಗೊಂಡು 20 ವರ್ಷದ ಯುವಕರು 60 ವರ್ಷದ ಮುದುಕರಂತಾಗುತ್ತಿದ್ದಾರೆ. ಈ ರೀತಿ



ಅಂತರ್ಜಲದಲ್ಲಿ ವಿಷಯುಕ್ತ ರಂಜಕ, ಗಂಧಕದ ಲವಣಗಳ ಮಿಶ್ರಣಕ್ಕೆ ಮುಖ್ಯ ಕಾರಣ ಅಂತರ್ಜಲದ ಮಟ್ಟದ ಕುಸಿತ. ಇದಕ್ಕಿರುವ ಏಕೈಕ ಪರಿಹಾರ ಭೂಮಿಯ ಮೇಲ್ಪದರದಲ್ಲಿರುವ ನೀರನ್ನು ಬಳಕೆ ಮಾಡಬೇಕು. ಅದಕ್ಕಾಗಿ ಮಳೆನೀರಿನ ಶೇಖರಣೆ, ಕೆರೆ, ನದಿ ನೀರನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಶುದ್ಧ



ಕುಡಿಯುವ ನೀರನ್ನು ಒದಗಿಸುವುದು ನಾಗರೀಕ ಸರ್ಕಾರದ ಜವಾಬ್ದಾರಿ ಎಂಬುದನ್ನ ಆಳುವವರು ಸಂಪೂರ್ಣವಾಗಿ ಮರೆತಂತಿದೆ.

ಕೃಷಿಕರ ಸಂಕಷ್ಟ

ನೀರಿನ ಸಮಸ್ಯೆ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮವನ್ನು ಬೀರಿದೆ. ಈ ಭಾಗದಲ್ಲಿ ಅಂತರ್ಜಲ 1500 ಅಡಿಗೆ ಕುಸಿದಿರುವುದರಿಂದ ಅಷ್ಟು ಆಳದಿಂದ ಬೋರ್‌ವೆಲ್‌ಗಳ ಮೂಲಕ ನೀರನ್ನು ತೆಗೆಯಲು ಕನಿಷ್ಟ 5 ಲಕ್ಷ ರೂ ಬಂಡವಾಳ ಹೂಡಬೇಕಾಗುತ್ತದೆ. ಇದನ್ನು ನಿರ್ವಹಿಸಲಾಗದ ರೈತರು ತಮ್ಮ ಜಮೀನುಗಳನ್ನು ಪಾಳುಬಿಟ್ಟು ಅಥವಾ ಮಾರಾಟಮಾಡಿ ಉದ್ಯೋಗಗಳನ್ನು ಅರಸಿಕೊಂಡು ಬೆಂಗಳೂರಿನತ್ತ ವಲಸೆ ಬರುತ್ತಿದ್ದಾರೆ. ಇದರಿಂದ ಕೆಲವು ಜಿಲ್ಲೆಗಳು ತಮ್ಮ ಅಸ್ಥಿತ್ವವನ್ನೆ ಕಳೆದುಕೊಳ್ಳುವ ಭೀತಿಯನ್ನ ಎದುರಿಸುತ್ತಿವೆ. ಮತ್ತೊಂದು ಕಡೆ ಅಭಿವೃದ್ಧಿ ಹೆಸರಿನಲ್ಲಿ ಕೃಷಿಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಉದಾ. ದೇವನಹಳ್ಳಿ ತಾಲ್ಲೂಕಿನ ಒಟ್ಟು ಕೃಷಿ ಭೂಮಿಯಲ್ಲಿ ಈಗ ಕೇವಲ ಶೇ 20 ರಷ್ಟು ಮಾತ್ರ ಉಳಿದಿದೆ. ದೊಡ್ಡಬಳ್ಳಾಪುರದಲ್ಲಿ 12,000 ಎಕರೆ ಭೂಮಿಯನ್ನ ಐಟಿ ಪಾರ್ಕಿಗೆ ವಶಪಡಿಸಿಕುಳ್ಳಲಾಗುತ್ತಿದೆ.

ಈ ರೀತಿ ನೀರಿನ ಸಮಸ್ಯೆಯಿಂದ ಬಳಲುತ್ತಿರುವ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆಗಳನ್ನು ರೂಪಿಸುವಲ್ಲಿ ನೀರಾವರಿ ತಜ್ಞರಾದ ಡಾ|ಪರಮಶಿವಯ್ಯನವರು ಸರ್ಕಾರಕ್ಕೆ ನೀಡಿರುವ ಸಮಗ್ರ ನೀರಾವರಿ ಯೋಜನಾ ವರದಿ ಅತ್ಯಂತ ವೈಜ್ಞಾನಿಕವಾಗಿದ್ದು ಈ ವರದಿಯನ್ನು ಜಾರಿಗೊಳಿಸಲು 10 ಜಿಲ್ಲೆಗಳಲ್ಲೂ ವ್ಯಾಪಕ ಜನ ಚಳುವಳಿಯನ್ನು ನಡೆಸಿ ಆಳುವ ಸರ್ಕಾರಗಳ ಮೇಲೆ ಒತ್ತಡಗಳನ್ನು ತರುವ ಮೂಲಕ ಈ ಯೋಜನೆಗಳನ್ನು ಜಾರಿಮಾಡಿಸಬೇಕು. ಆಗ ಮಾತ್ರ ಈ ಭಾಗದ ಜನರು ನೆಮ್ಮದಿಯ ಬದುಕು ಸಾಗಿಸಲು ಸಾಧ್ಯ ಎಂದರು.

" ಬರೀ ಎತ್ತಿನ ಹೊಳೆ ಯೋಜನೆಗೆ ನಾನು ಒಪ್ಪಿಲ್ಲ."- ಡಾ| ಜಿ.ಎಸ್. ಪರಮಶಿವಯ್ಯ

ಸಮಾವೇಶದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನೀರಾವರಿ ತಜ್ಞ ಡಾ|| ಪರಮಶಿವಯ್ಯ ಮಾತನಾಡಿ 1973 ರ ಡಿಸೆಂಬರ್‌ನಲ್ಲೆ ಸಮಗ್ರ ನೀರಾವರಿ ಯೋಜನೆಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಈ ಯೋಜನೆಗಳಲ್ಲಿ ಒಂದಾದ ಬಯಲು ಸೀಮೆ ಜಿಲ್ಲೆಗಳಿಗೆ ಪಶ್ಚಿಮಘಟ್ಟಗಳಲ್ಲಿ ಪೋಲಾಗಿ ಸಮುದ್ರಕ್ಕೆ ಹರಿಯುತ್ತಿರುವ ಮಳೆ ನೀರಿನ ಒಂದು ಭಾಗವನ್ನು ಪೂರ್ವಕ್ಕೆ ತಿರುಗಿಸಿದರೆ 180 ಟಿಎಂಸಿ ನೀರನ್ನು ಕೆನಾಲ್‌ಗಳ ಮೂಲಕ ಈ ಭಾಗಕ್ಕೆ ತರಬಹುದಾಗಿದೆ. ಈ ಯೋಜನೆ ಕುರಿತು ನೀರಾವರಿ ಇಲಾಖೆಯ ಮುಖ್ಯ ಇಂಜಿನೀಯರ್‌ಗಳನ್ನು ಸಭೆ ಕರೆದು ಅವರ ಅಭಿಪ್ರಾಯಗಳನ್ನು ಕೇಳಿ ಎಂದು ಹಲವು ಭಾರಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಇದುವರೆಗೂ ಅಂತಹದೊಂದು ಸಭೆಯನ್ನು ಕರೆಯುವ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಈ ಮೂಲಕ ಅತ್ಯಂತ ಕಷ್ಟಪಟ್ಟು ಎಲ್ಲ ಪ್ರದೇಶಗಳನ್ನು ನೇರವಾಗಿ ಪರಿಶಿಲಿಸಿ ನೀಡಿರುವ ವರದಿ ನೆನೆಗುದಿಗೆ ಬಿದ್ದಿದೆ.

2003 ರಲ್ಲಿ ರಾಜ್ಯ ಸರ್ಕಾರ ಎತ್ತಿನ ಹೊಳೆ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇವೆ ಎಂದು ಘೋಷಿಸುವ ಮೂಲಕ ಪರಮಶಿವಯ್ಯನವರ ವರದಿಯನ್ನು ಜಾರಿಗೆ ತರುತಿದ್ದೇವೆಂದು ಹೇಳಿದರು. ಈ ಯೋಜನೆಯಿಂದ 24 ಟಿಎಂಸಿ ನೀರನ್ನು ಮೇಲಕ್ಕೆತ್ತಲು 450 ಮೆಗಾವ್ಯಾಟ್ ವಿದ್ಯುತ್ ಖರ್ಚಾಗುತ್ತದೆ. ಎತ್ತಿನ ಹೊಳೆ ಯೋಜನೆ ವರದಿಯ ಒಂದು ಸಣ್ಣ ಭಾಗವೇ ಹೊರತು ಸಮಗ್ರ ವರದಿಯಲ್ಲ. ಇದಕ್ಕೆ ಸರ್ಕಾರ ನನ್ನಿಂದ ಯಾವ ಅಭಿಪ್ರಾಯವನ್ನೂ ತೆಗೆದುಕೊಂಡಿಲ್ಲ. ಇದರಿಂದ ಸರ್ಕಾರ ಜನರಿಗೆ ಮೋಸಮಾಡಲು ಹೊರಟಿದೆ. ಕೆಲವರು ಈ ಯೋಜನೆಯಿಂದ ಪರಿಸರ ನಾಶವಾಗುತ್ತದೆ ಎಂದು ಮಾತನಾಡುತ್ತಿದ್ದಾರೆ ಈ ಯೋಜನೆಯಿಂದ ರಾಜ್ಯದಲ್ಲಿ ಈಗಿರುವ ಶೇ 16 ರಷ್ಟು ಅರಣ್ಯ ಪ್ರದೇಶವು ಶೇ 28 ರಷ್ಟು

-ಪುಟ 14ಕ್ಕೆ

ಐಕ್ಯತೆ ಮತ್ತು ಸಂಘಟನೆಯ ಬಲವರ್ಧನೆ

ಅಭಿವ್ಯಕ್ತಿ ಗೊಂಡ ಕೇರಳ ಸಿಪಿಐ(ಎಂ) ಸಮ್ಮೇಳನ

ಗಟ್ಟಿಗೊಂಡ ಐಕ್ಯತೆ

ಕೊನೆಗೂ ಮಾಧ್ಯಮದ ಭಾರೀ ನರೀಕ್ಷೆ ಸುಳ್ಳಾಯಿತು. ಯಾವುದೇ ವಿವಾದಕ್ಕೆ ಆಸ್ಪದ ಕೊಡದೇ ಕೋಯಿಕೋಡ್‌ನಲ್ಲಿ ನಡೆದ ಕೇರಳ ರಾಜ್ಯದ ಸಿಪಿಐಎಂನ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯಗೊಂಡಿತು.


ಮೇಲಿನ ಈ ಹೇಳಿಕೆಗೆ ಕಾರಣವೂ ಇದೆ. ಪ್ರತಿಬಾರಿ ಸಮ್ಮೇಳನವಾದಾಗಲೂ ನಾಯನಾರ್ ಬಣ, ಇಎಂಎಸ್ ಬಣ, ವಿಎಸ್ ಬಣ, ಪಿಣಿರಾಯಿ ಬಣ ಎಂದು ಹಣೆಪಟ್ಟಿ ಕೊಡುತ್ತಲೇ ಬಂದ ಮಾಧ್ಯಮ, ಕಳೆದ ಚುನಾವಣೆಯ ವರೆಗೂ ಇದನ್ನು ಮುಂದುವರಿಸಿತ್ತು. ಪಿಣರಾಯಿ ಮೇಲೆ ಸಿಬಿಐ ಕೇಸು ದಾಖಲಿಸಿದಾಗ, ಚುನಾವಣಾ ಟಿಕೆಟ್ ಹಂಚಿಕೆಯಾದಾಗ ಬಣ ರಾಜಕೀಯವನ್ನು ಮುಂದಿಟ್ಟು ಪಕ್ಷದಲ್ಲಿ ಒಡಕಿದೆ ಎಂದು ಬಿಂಬಿಸಲಾಗಿತ್ತು.

ಆದರೆ, ಇದಕ್ಕೆಲ್ಲ ಪಕ್ಷ ಒಗ್ಗಟ್ಟಿನ ಮಂತ್ರದಿಂದ ಉತ್ತರ ನೀಡಿದೆ. ಯಾವುದೇ ವಿರೋಧವಿಲ್ಲದೆ ಪಿಣರಾಯಿ ವಿಜಯನ್ ಅವರನ್ನು ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ. ಪ್ರತಿಪಕ್ಷ ನಾಯಕ, ಹಿರಿಯ ಮುತ್ಸದ್ದಿ ವಿ.ಎಸ್. ಅಚ್ಯುತಾನಂದನ್ ಅವರೇ ಪಕ್ಷದ ಕಾರ್ಯದರ್ಶಿ ಸ್ಥಾನಕ್ಕೆ ಪಿಣರಾಯಿ ಹೆಸರನ್ನು ಸೂಚಿಸಿದರು.

ಪಕ್ಷದ ಸಂಘಟನೆ

19ನೇ ರಾಜ್ಯ ಸಮ್ಮೇಳನಕ್ಕೆ ಹೋಲಿಸಿದರೆ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ ಪಕ್ಷ ಸಂಘಟನೆಯಲ್ಲಿ ಮಹತ್ವದ ಪ್ರಗತಿ ದಾಖಲಾಗಿದೆ. 3,36,644ರಷ್ಟಿದ್ದ ಸದಸ್ಯತ್ವ 3,70,818ಕ್ಕೆ ತಲುಪಿದೆ. ಅಂದರೆ ಕಳೆದ ಅವಧಿಗಿಂತ 34174 ಸದಸ್ಯತ್ವದ ಏರಿಕೆ ದಾಖಲಾಗಿದೆ. ಇದೇ ವೇಳೆ, ಪಕ್ಷದ ಪ್ರಾಥಮಿಕ ಘಟಕದಲ್ಲಿ ಶೇಕಡಾ 10ಕ್ಕಿಂತಲೂ ಹೆಚ್ಚಿನ ಏರಿಕೆ ದಾಖಲಾಗಿದೆ.

ಪಕ್ಷದ ಸಂಘಟನೆಯಲ್ಲಿ ಪ್ರಾಥಮಿಕ ಘಟಕಗಳು ಮಹತ್ವದ ಪಾತ್ರ ವಹಿಸುತ್ತದೆ. ತಳಮಟ್ಟದಲ್ಲಿ ಜನರೊಂದಿಗೆ ನಿಕಟ ಸಂಬಂಧ ಇರಿಸಿ ಅವರ ಸಮಸ್ಯೆಗೆ ಸ್ಪಂದಿಸುವ ಘಟಕಗಳ ಕಾರ್ಯನಿರ್ವಹಣೆಯೂ ತೃಪ್ತಿದಾಯಕವಾಗಿದೆ.


ಅದ್ಭುತ ರ್‍ಯಾಲಿ

ಕಳೆದ ರಾಜ್ಯ ಸಮ್ಮೇಳನದ ಅವಧಿಯಲ್ಲಿದ್ದ ಪ್ರಾಥಮಿಕ ಘಟಕಗಳ ಸಂಖ್ಯೆ 26455. 20ನೇ ರಾಜ್ಯ ಸಮ್ಮೇಳವದ ಅವಧಿಗೆ ಅದು 28825ಕ್ಕೇರಿದೆ. ಅಂದರೆ 2370 ಘಟಕಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಸ್ಥಳೀಯ ಸಮಿತಿಗಳ ಸಂಖ್ಯೆಯಲ್ಲಿ 151 ಹೆಚ್ಚುವರಿ ಸೇರ್ಪಡೆಯಾಗಿದ್ದು, ಈಗ 1978ಕ್ಕೇರಿದೆ. ಇನ್ನು ಪ್ರಾದೇಶಿಕ ಸಮಿತಿಗಳ ಸಂಖ್ಯೆ 182ರಿಂದ 202ಕ್ಕೇರಿದೆ. 20 ಪ್ರಾದೇಶಿಕ ಸಮಿತಿಗಳು ಹೆಚ್ಚುವರಿಯಾಗಿ ಸೇರಿವೆ.

ಸಾಮೂಹಿಕ ಸಂಘಟನೆ

ಪಕ್ಷದ ಬಲವರ್ಧನೆಯಲ್ಲಿ ಸಾಮೂಹಿಕ ಸಂಘಟನೆಗಳ ಪಾತ್ರ ಬಹುಮುಖ್ಯವಾದದ್ದು. ಪಕ್ಷದ ಸಾಮರ್ಥ್ಯ ಮತ್ತು ಪ್ರಾಬಲ್ಯಕ್ಕೆ ಸಾಮೂಹಿಕ ಸಂಘಟನೆಗಳು ಮತ್ತು ಅದರ ನಾಯಕತ್ವದ ಕೊಡುಗೆ ಗಣನೀಯ.

ಸಿಮ್ಮಿಸಿ

ರಾಜ್ಯದಲ್ಲಿ ಸಾಮೂಹಿಕ ಸಂಘಟನೆಯ ಒಟ್ಟು ಸದಸ್ಯತ್ವದಲ್ಲೂ ದಾಖಲೆಯ ಏರಿಕೆ ಕಂಡಿದೆ. ಎಲ್ಲ ಸಂಘಟನೆ ಸೇರಿಸಿ ಸುಮಾರು 32 ಲಕ್ಷ ಸದಸ್ಯತ್ವ ಏರಿಕೆಯಾಗಿದೆ. ಕೇರಳದಲ್ಲಿ ಈಗ 1.82 ಕೋಟಿ ಮಂದಿ ಪಕ್ಷದ ವಿವಿಧ ಸಾಮೂಹಿಕ ಸಂಘಟನೆಗಳ ಸದಸ್ಯರಾಗಿದ್ದಾರೆ. ಸಂಘಟನೆ ಹೊಸ ಪ್ರದೇಶಕ್ಕೆ ವಿಸ್ತರಣೆಯಾಗಿದೆ.

ಹೊಸ ಜನವಿಭಾಗವನ್ನು ಒಳಗೊಂಡ ಸಂಘಟನೆಗಳನ್ನು ರೂಪಿಸಲಾಗಿದೆ. ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರು, ವಿಕಲ ಚೇತನರ ಸಂಘಟನೆ, ಖಾಸಗಿ ವಲಯದ ಟೀಚರ್‌ಗಳ ಸಂಘಟನೆ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ನೌಕರರ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ.

ಪಕ್ಷ ಸದಸ್ಯರಿಗೆ ಅಧ್ಯಯನ

ಸಾಮೂಹಿಕ ಸಂಘಟನೆಗಳು ಸೇರಿದಂತೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸಿಪಿಐಎಂನ ಸಿದ್ಧಾಂತ, ಮೌಲ್ಯ ಮತ್ತು ತತ್ವಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ತರಗತಿಗಳನ್ನು ನಡೆಸಲಾಗುತ್ತಿದೆ. ಇದಕ್ಕಾಗಿಯೇ ಇಎಂಎಸ್ ಅಕಾಡೆಮಿಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ರಾಜ್ಯದ ಅಭಿವೃದ್ಧಿ ಹಾಗೂ ವೈವಿಧ್ಯಮಯ ದೃಷ್ಟಿಕೋನಗಳ ಬಗ್ಗೆ ಆಳವಾದ ಅಧ್ಯಯನ ನಡೆಸುವ ಸಲುವಾಗಿ ಇತ್ತೀಚೆಗೆ ಕೇರಳದ ಅಧ್ಯಯನಕ್ಕಾಗಿನ ಅಂತಾರಾಷ್ಟ್ರೀಯ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಈ ಸಮ್ಮೇಳನದಲ್ಲಿ ರಾಜ್ಯಕ್ಕೆ ಅಗತ್ಯವಾಗಿ ಬೇಕಾದ ಪರ್ಯಾಯ ಅಭಿವೃದ್ಧಿ ಪಥ ಎಂಬ ವೈಜ್ಞಾನಿಕ ವಿಶ್ಲೇಷಣೆಯ ಪ್ರಸ್ತಾಪಗಳನ್ನು ಜನತೆಯ ಮುಂದಿಡಲಾಗಿದೆ.

ಜನನಾಯಕ ಪಿಣರಾಯಿ

ಮಾರ್ಚ್ 21, 1944ರಲ್ಲಿ ಹುಟ್ಟಿದ ಪಿಣರಾಯಿ, ಕಳೆದ ಕೆಲವು ದಶಕಗಳಿಂದ ಎಡ ಚಳವಳಿಯನ್ನು ಮುನ್ನಡೆಸಿದವರು. ಮಿತಭಾಷಿ ಎಂದೇ ಹೆಸರಾದ ಪಿಣರಾಯಿ ಐದು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು ಮಾತ್ರವಲ್ಲ, ಕಠಿಣ ಪದಗಳ ಉತ್ತಮ ಸಂಸದೀಯ ಪಟು ಎಂದು ಹೆಸರು ಪಡೆದರು.

ಪಕ್ಷದ ಚುನಾವಣೆಯಲ್ಲಿ ಯಾವುದೇ ಗುಂಪುಗಾರಿಕೆ ನಡೆದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ ಸಿಪಿಎಂ ನಾಯಕರು, ಚರ್ಚೆ ಮುಕ್ತವಾಗಿತ್ತು ಮತ್ತು ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲೇ ನಡೆಯಿತು ಎಂಬುದನ್ನು ತಿಳಿಸಿದರು.

ಇದೇ ವೇಳೆ, ಕೃತ್ರಿಮ ಹಾಗೂ ಕೆಟ್ಟ ವಿಧಾನದಿಂದ ಯು.ಡಿ.ಎಫ್. ಸರ್ಕಾರವನ್ನು ಪತನಗೊಳಿಸುವುದಿಲ್ಲ ಎಂದು ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಸ್ಪಷ್ಟಪಡಿಸಿದ್ದಾರೆ. ಆಳುವ ವರ್ಗದ ನೀತಿ ವಿರುದ್ಧ ಪ್ರಬಲ ಜನಾಂದೋಲನ ರೂಪಿಸಿ ಜನಾದೇಶ ಪಡೆದೇ ಸರ್ಕಾರವನ್ನು ಪತನಗೊಳಿಸುತ್ತೇವೆ ಎಂದು ಅವರು ಗುಡುಗಿದ್ದಾರೆ.

○

ವಿಸ್ತರಣೆ– ಬಲವರ್ಧನೆ

ಕಳೆದ ರಾಜ್ಯ ಸಮ್ಮೇಳನದ ಅವಧಿಯಲ್ಲಿದ್ದ ಪ್ರಾಥಮಿಕ ಘಟಕಗಳ ಸಂಖ್ಯೆ 26455. 20ನೇ ರಾಜ್ಯ ಸಮ್ಮೇಳನದ ಅವಧಿಗೆ ಅದು 28825ಕ್ಕೇರಿದೆ. ಅಂದರೆ 2370 ಘಟಕಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಸ್ಥಳೀಯ ಸಮಿತಿಗಳ ಸಂಖ್ಯೆಯಲ್ಲಿ 151 ಹೆಚ್ಚುವರಿ ಸೇರ್ಪಡೆಯಾಗಿದ್ದು, ಈಗ 1978ಕ್ಕೇರಿದೆ. ಇನ್ನು ಪ್ರಾದೇಶಿಕ ಸಮಿತಿಗಳ ಸಂಖ್ಯೆ 182ರಿಂದ 202ಕ್ಕೇರಿದೆ. 20 ಪ್ರಾದೇಶಿಕ ಸಮಿತಿಗಳು ಹೆಚ್ಚುವರಿಯಾಗಿ ಸೇರಿವೆ.

ಯುಗಾದಿ ಹಬ್ಬವೀಗ ಕಹಿಕಹಿ – ಬಜೆಟ್‌ಗಳ ವಿರುದ್ಧ ಪ್ರತಿಭಟನೆ

ಕೇಂದ್ರ ಸರ್ಕಾರವು ಮಂಡಿಸಿದ ಬಜೆಟ್ ಖಾಸಗಿಕರಣ ಪ್ರಕ್ರಿಯೆಯನ್ನು ಚುರುಕುಗೊಳಿಸುವುದಲ್ಲದೆ ಜನಸಾಮಾನ್ಯರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ಸಿಪಿಐ (ಎಂ) ಆಪಾದಿಸಿದೆ. ಕೇಂದ್ರದ ಬಜೆಟ್‌ನಲ್ಲಿ ಇಂದನಕ್ಕೆ ನೀಡುವ ಸಹಾಯ ಧನವನ್ನು ಕಡಿತಗೊಳಿಸಿರುವ ಕಾರಣ ಪೆಟ್ರೋಲ್, ಡೀಸೆಲ್, ಹಾಗೂ ಅಡುಗೆ ಅನಿಲ ದರಗಳು ವಿಪರೀತ ಹೆಚ್ಚಲಿದೆ ಅಲ್ಲದೆ ಸಾಗಾಣಿಕೆ ವೆಚ್ಚವು ಹೆಚ್ಚಲಿದೆ ಇದಲ್ಲದೆ ಕೃಷಿಗೆ ನೀಡುತ್ತಿದ್ದ ಸಹಾಯ ಧನವನ್ನು ಕಡಿತ ಮಾಡಿರುವ ಕಾರಣ ಆಹಾರ ಬೆಳೆಗಳು ಹೆಚ್ಚಳವಾಗಲಿದೆ. ಈಗಾಗಲೆ ಬೆಲೆ ಏರಿಕೆಯಿಂದ ತತ್ತರಿಸಲಿರುವ ಜನ ಸಾಮಾನ್ಯರಿಗೆ ಮತ್ತಷ್ಟು ಕಹಿಯಾದ ಬೆಲೆ ಏರಿಕೆಯನ್ನು ಯುಗಾದಿ ಹಬ್ಬಕ್ಕೆ ಕೇಂದ್ರ ಸರ್ಕಾರ ನೀಡಿದೆ ಎಂದು ಸಿಪಿಐ (ಎಂ) ಅಭಿಪ್ರಾಯ ಪಟ್ಟಿದೆ.

ರಾಜ್ಯ ಸರ್ಕಾರವು ಮಂಡಿಸಿರುವ ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡದ ಕಾರಣ, ಕೈಗಾರಿಕಾ ಬೆಳವಳಿಗೆ ಮತ್ತು ಕೃಷಿ ಸಂಕಷ್ಟಗಳನ್ನು ಬಗೆ ಹರಿಸುವ ಯಾವುದೇ ಮುಂದಾಲೋಚನೆ ಇಲ್ಲದ ದಿಕ್ಕು ದೆಸೆ ಇಲ್ಲದ ಬಜೆಟ್‌ನ್ನು ರಾಜ್ಯ ಸರ್ಕಾರ ಮಂಡಿಸಿದೆ ಎಂದು ಸಿಪಿಐ (ಎಂ) ಕಿಡಿಕಾರಿದೆ. ಸಂಪನ್ಮೂಲಗಳ ದೃಢೀಕರಣಕ್ಕೆ ನಿರ್ಧಿಷ್ಟ ಸೂಚನೆಗಳನ್ನು ನೀಡದೆ ಕೇವಲ ಅಂಕೆ ಸಂಖ್ಯೆಗಳ ಆಟದಲ್ಲಿ ಮುಳುಗಿದೆ



ಇದಾಗಿದೆ ಎಂದು ಸಿಪಿಐ (ಎಂ) ಆಪಾಧಿಸಿದೆ.

ಕೇಂದ್ರ, ರಾಜ್ಯ ಸರ್ಕಾರಗಳು ಬಜೆಟ್‌ನಿಂದ ಸಂಕಷ್ಟದಲ್ಲಿದ್ದ ಜನರಿಗೆ ಪರಿಹಾರ ಸಿಗುತ್ತದೆ ಎಂಬ ಭರವಸೆ ಹುಸಿಯಾಗಿದೆ. ಎಂದು ಆರೋಪಿಸಿ ಸಿಪಿಐ (ಎಂ) ಪಕ್ಷದ ಕಾರ್ಯಕರ್ತರು ಸಿಐಟಿಯು ಸಂಘಟನೆಯ ಕಾರ್ಯಕರ್ತರು ದಿನಾಂಕ 22-3-2012 ರಂದು ಮದ್ಯಾಹ್ನ 12-30 ಗಂಟೆಯಿಂದ ತುಮಕೂರು ನಗರದ ಸ್ವತಂತ್ರ ಚೌಕದಲ್ಲಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯನ್ನು ಉದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾದ ಸೈಯದ್ ಮುಜೀಬ್ ಅವರು ಮಾತನಾಡಿ ರಾಜ್ಯ ಸರ್ಕಾರದ ಬಜೆಟ್ ಅಸಂಘಟಿತ ಕಾರ್ಮಿಕರಿಗೆ ಏನೇನೂ ನೀಡದೆ ಸರಿಸುಮಾರು 2.50 ಕೋಟಿ ಅಸಂಘಟಿತ ಕಾರ್ಮಿಕರಿಗೆ ಅನ್ಯಾಯವೆಸಗಿದರು ಎಂದು ಆಪಾಧಿಸಿದರು. ಕೈಗಾರಿಕಾ ಬೆಳವಣಿಗೆಗೂ ಒತ್ತು ನೀಡದ ಕಾರಣ ಉದ್ಯೋಗ ಸೃಷ್ಟಿಯು ಬಿಸಿಲು ಕುದುರೆಯಾಗಿದೆ ಎಂದು ಆಪಾದಿಸಿದ ಅವರು ರಾಜ್ಯ ಸರ್ಕಾರ ಖಾಸಗೀಕರಣವನ್ನ ಪ್ರೋತ್ಸಾಹಿಸುವ ವಿಶ್ವ ಬಂಡವಾಳ ಹೂಡಿಕೆಗೆ ದಾರಿ ಮಾಡಿಕೊಡುವ ನಿಟ್ಟಿನಲ್ಲಿ ಪೂರಕವಾದಂತಹ ಬಜೆಟ್ ಮಂಡಿಸಿದೆ ಎಂದು ಆಪಾದಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ. ಸುಬ್ರಹ್ಮಣ್ಯ ಮಾತನಾಡಿ ಕೇಂದ್ರ ಸರ್ಕಾರ ಪಿಎಫ್‌ಮೇಲಿನ ಬಡ್ಡಿದರವನ್ನು ಕಡಿತ ಗೊಳಿಸಿರುವ ಕ್ರಮ ಕಾರ್ಮಿಕ ವಿರೋದಿ ಎಂದು ಆಪಾದಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಬಿ.ಉಮೇಶ್ ಕೃಷಿ ಬಜೆಟ್‌ಹೆಸರಿನಲ್ಲಿ ರೈತರ ಯಾವುದೇ ಸಮಸ್ಯೆಗಳಿಗೆ ಪರಿಹಾರ ಸೂಚಿಸದೆ ವಂಚಿಸಲಾಗಿದೆ ಎಂದು ದೂರಿದರು.

ಯುವ ಜನರಿಗೆ ಪೂರಕವಾದ ಬಜೆಟ್ ಮಂಡಿಸುತ್ತೇವೆಂದು ಆಸೆ ಹುಟ್ಟಿಸಿದ ಸರ್ಕಾರ ಉದ್ಯೋಗ ಸೃಷ್ಟಿಗೆ ನಿರ್ದಿಷ್ಟ ಯೋಜನೆಗಳನ್ನು ರೂಪಿಸದೆ ಯುವ ಸಮೂಹವನ್ನು ನಿರುದ್ಯೋಗದ ಕೂಪದಲ್ಲಿ ನರಳುವಂತೆ ಮಾಡಿದೆ ಎಂದು ಡಿ.ವೈ.ಎಫ್.ಐ ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಅವರು ಆಪಾದಿಸಿದರು. ಎಸ್.ಎಫ್.ಐನ ನಗರಾಧ್ಯಕ್ಷ ದರ್ಶನ್ ಅವರು ಮಾತನಾಡಿ ರಾಜ್ಯ ಸರ್ಕಾರ ಬಜೆಟ್‌ನ್ನು ಶಿಕ್ಷಣದ ಕೇಸರಿಕರಣಕ್ಕೆ ಬಳಸುತ್ತಿರುವುದು ಸಂವಿದಾನದ ಆಶಯಗಳಿಗೆ ವಿರುದ್ದವಾಗಿದೆ ಎಂದು ಆಫಾದಿಸಿದರು. ಪ್ರತಿಭಟನೆಯಲ್ಲಿ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸೈಯದ್ ಅಲ್ತಾಪ್, ಆಟೋ ಚಾಲಕ ಸಂಘಟನೆಯ ಮುಖಂಡ ಸಿದ್ದರಾಜು, ಕಾಳೇಶ್ವರಿ ರೀಪೈನರಿಸ್ ಪ್ರೈ.ಲಿ., ಕಾರ್ಮಿಕರ ಸಂಘದ ಹಾಗೂ ಬೀಡಿ ಕಾರ್ಮಿಕ ಸಂಘದ ಪದಾಧಿಕಾರಿಗಳು ಮತ್ತು ಕೆ.ಎಸ್.ಆರ್.ಟಿಸಿ. ನೌಕರ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದರು.

ಗೊತ್ತುಗುರಿ ಇಲ್ಲದ ಶಿಕ್ಷಣ ವಿರೋಧಿ ಬಜೆಟ್ – ಎಸ್.ಎಫ್.ಐ ವಿರೋಧ

ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸದಾನಂದ ಗೌಡರು ಮಂಡಿಸಿರುವ ಪ್ರಸಕ್ತ ಬಜೆಟ್ ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಸರಿಯಾದ ದಿಕ್ಕಿನಲ್ಲಿ ಅಭಿವೃದ್ಧಿಪಡಿಸುವ ಯಾವ ಭರವಸೆಗಳೂ ಕಾಣದ ಗೊತ್ತು ಗುರಿ ಇಲ್ಲದ ಶಿಕ್ಷಣ ವಿರೋಧಿ ಬಜೆಟ್ ಇದಾಗಿದೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ಇದನ್ನು ತೀವ್ರವಾಗಿ ವಿರೋಧಿಸುತ್ತದೆ.

1,02,742 ಕೋಟಿ ರೂಗಳ ಒಟ್ಟು ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೇವಲ 15,071 ಕೋಟಿ ರೂಗಳನ್ನು (ಶೇ 14)ಮಾತ್ರ ಮೀಸಲಿಟ್ಟಿದ್ದು ಇದರಿಂದ ರಾಜ್ಯದ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದಿಲ್ಲ. 15,071 ಕೋಟಿ ರೂಗಳನ್ನು ಶಿಕ್ಷಣಕ್ಕೆ ನೀಡಿರುವುದಾಗಿ ಘೋಷಿಸಿದ್ದರೂ. ಬಜೆಟ್ ಪ್ರತಿಯಲ್ಲಿ ಎಲ್ಲಿಯೂ ಅದರ ಸಂಪೂರ್ಣ ವಿವರ ಇಲ್ಲದೆ ಅಸ್ಪಷ್ಟತೆಯಿಂದ ಕೂಡಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಕೆಲವು ಯೋಜನೆಗಳನ್ನು ಪೂರ್ಣಗೊಳಿಸಲಾಗಿಲ್ಲ. ಶಿಕ್ಷಣಕ್ಕೆ ರಾಜ್ಯ ಬಜೆಟ್‌ನಲ್ಲಿ ಶೇಕಡ 30ರಷ್ಟು ಹಣ ಮೀಸಲಿಡಬೇಕೆಂಬ ಶಿಕ್ಷಣ ತಜ್ಞ ಡಾ॥ ಕೊಥಾರಿ ಆಯೋಗದ ಶಿಫಾರಸ್ಸನ್ನು ತಿರಸ್ಕರಿಸಲಾಗಿದೆ. ಬದಲಾಗಿ ಮತಬ್ಯಾಂಕ್ ರಾಜಕಾರಣಕ್ಕಾಗಿ ಜಾತಿವಾರು ಟ್ರಸ್ಟ್‌ಗಳಿಗೆ, ಮಠಗಳಿಗೆ ಕೋಟಿ ಕೋಟಿ ಜನರ ಹಣ ನೀಡುವ ಮೂಲಕ ಜಾತಿ ಆಧಾರದಲ್ಲಿ ಸಮಾಜವನ್ನು ಛಿದ್ರಗೊಳಿಸುವ ಆರ್.ಎಸ್.ಎಸ್ ಅಜೆಂಡಾವನ್ನು ಜಾರಿಗೊಳಿಸಲು ಹೊರಟಿದೆ. ಅಲ್ಲದೇ ಇದು ಕ್ರಮೇಣವಾಗಿ ಸರ್ಕಾರಿ ಇಲಾಖೆಗಳನ್ನೇ ಮುಚ್ಚುವ ಕುತಂತ್ರವಾಗಿದೆ.

ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವ ದಲಿತ-ಹಿಂದುಳಿದ-ಅಲ್ಪಸಂಖ್ಯಾತ ವರ್ಗದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆಹಾರ ಭತ್ಯೆಯನ್ನು ಕೇರಳ ರಾಜ್ಯದಲ್ಲಿ ನೀಡುತ್ತಿರುವಂತೆ 1,600 ರೂ ವರೆಗೆ ಹೆಚ್ಚಿಸುವಲ್ಲಿ ವಿಫಲವಾಗಿದೆ. ತಮಿಳುನಾಡು ಮಾದರಿಯಂತೆ ಪದವಿ ಹಂತದವರೆಗೂ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡುವ ಯಾವ ಘೋಷಣೆಯೂ ಇಲ್ಲಿ ಮಾಡಲಿಲ್ಲ. ಮೂಲಸೌಕರ್ಯಗಳ ಕೊರತೆಯಿಂದ ಗಂಭೀರ ಸಮಸ್ಯೆ ಎದುರಿಸುತ್ತಿರುವ ಸರ್ಕಾರಿ ಶಾಲಾ-ಕಾಲೇಜು-ಹಾಸ್ಟೆಲ್-ವಿಶ್ವವಿದ್ಯಾನಿಲಯಗಳಲ್ಲಿ ಸಮರ್ಪಕ ಮೂಲಸೌಕರ್ಯಗಳನ್ನು ಕಲ್ಪಿಸುವ ಯಾವ ಪ್ರಸ್ತಾಪಗಳೂ ಬಜೆಟ್‌ನಲ್ಲಿ ಹೇಳಲಾಗಲಿಲ್ಲ. ಮಕ್ಕಳ ಶಿಕ್ಷಣ ಹಕ್ಕು ಮಸೂದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅಗತ್ಯ ಹಣಕಾಸು ನೀಡಿ ನಿಯಮಗಳನ್ನು ರೂಪಿಸುವ ಬದಲಾಗಿ ಖಾಸಗೀ ಶಾಲೆಗಳ ಸಹಕಾರವನ್ನು ಕೋರಲಾಗುವುದು ಎನ್ನುವ ಮೂಲಕ ಶಿಕ್ಷಣದ ವ್ಯಾಪಾರೀಕರಣಕ್ಕೆ ಸಹಮತ ತೋರಿಸುತ್ತಿದೆ. ಕೋಮುವಾದೀ ವಿಚಾರಗಳನ್ನು ತುರುಕಲು 5 ಮತ್ತು 8ನೇ ತರಗತಿಯ ಪಠ್ಯಪುಸ್ತಕಗಳನ್ನು ಬದಲಾಯಿಸಲು ಹಿಂದೆಯೇ 14 ಕೋಟಿ ಹಣ ನೀಡಿರುವುದನ್ನು ಪುನಃ ಇಲ್ಲಿ ಹೇಳಲಾಗಿದೆ, ಆರ್ಥಿಕ ಸಂಕಷ್ಟದಲ್ಲಿರುವ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಅಗತ್ಯ ಅನುಧಾನ ನೀಡದೇ ಉನ್ನತ ಶಿಕ್ಷಣವನ್ನು ಕಡೆಗಣಿಸಲಾಗಿದೆ

ಯುವಜನರ ಆಶಯಗಳಿಗೆ ದ್ರೋಹ

ಬಿ.ಜೆ.ಪಿ. ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನಿರುದ್ಯೋಗಿ ಯುವಜನರಿಗೆ ರೂ 1,500 ಮಾಸಿಕ ನಿರುದ್ಯೋಗ ಭತ್ಯೆ ನೀಡುವುದಾಗಿ ಭರವಸೆ ನೀಡಿತ್ತು ಹಾಗೂ ಮುಖ್ಯಮಂತ್ರಿ ಸದಾನಂದ ಗೌಡರು ಹಿಂದೆ ಯುವ ಬಜೆಟ್ ಮಂಡಿಸುವುದಾಗಿ ಹೇಳಿದ್ದರು. ಆದರೆ ಯಾವುದೇ ಯುವಜನ ಪರ ಯೋಜನೆಗಳಿಲ್ಲದೇ ಇದು ಯುವಜನ ವಿರೋಧಿ ಬಜೆಟ್ಟಾಗಿದೆ. ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ 1,80,000 ಹುದ್ದೆಗಳು ಖಾಲಿ ಇವೆ. ಶೇಕಡಾ 27 ರಷ್ಟು ಉಪನ್ಯಾಸಕ ಹಾಗು ವಿ.ವಿ. ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ. 5000 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇದ್ದು ನೇಮಕಾತಿ ಕುರಿತು ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಿಲ್ಲ. ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಹೊರಗುತ್ತಿಗೆ ಶಿಕ್ಷಕರಾಗಿ ಹಾಗೂ ಅತಿಥಿ ಉಪನ್ಯಾಸಕರಾಗಿ ಕಡಿಮೆ ವೇತನದಲ್ಲಿ ಸಾವಿರಾರು ಯುವಜನರು ದುಡಿಯುತ್ತಿದ್ದರೂ ಅವರಿಗೆ ಸೇವಾ ಭದ್ರತೆ ಒದಗಿಸುವಲ್ಲಿ ಈ ಬಜೆಟ್ ಸಂಪೂರ್ಣ ವಿಫಲವಾಗಿದೆ.

ಒಟ್ಟಾರೆಯಾಗಿ ರಾಜ್ಯದ ಶಿಕ್ಷಣ ಕ್ಷೇತ್ರವನ್ನು ಇನ್ನಷ್ಟು ದಿವಾಳಿಯತ್ತ ಕೊಂಡೊಯ್ಯುವ ಹಾಗೂ ಸರ್ವರಿಗೂ ಸಮಾನ ಗುಣಮಟ್ಟದ ಶಿಕ್ಷಣ ನಿರಾಕರಿಸುವ ಮತ್ತು ವಿದ್ಯಾರ್ಥಿ-ಯುವಜನರನ್ನು ವಂಚಿಸಿರುವ ಬಜೆಟ್ ಇದಾಗಿದೆ. ರಾಜ್ಯ ಬಿ.ಜೆ.ಪಿ. ಸರ್ಕಾರದ ಶಿಕ್ಷಣ ವಿರೋಧಿ, ವಿದ್ಯಾರ್ಥಿ- ಯುವಜನ ವಿರೋಧಿ ನೀತಿಗಳ ವಿರುದ್ಧ ಹಾಗೂ ಶಿಕ್ಷಣಕ್ಕೆ ರಾಜ್ಯ ಬಜೆಟ್‌ನಲ್ಲಿ ಶೇಕಡ 30ರಷ್ಟು ಹಣ ಮೀಸಲಿಡಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ತನ್ನ ಹೋರಾಟವನ್ನು ಮುಂದುವರಿಸಲಿದೆ ಎಂದು ಸಂಘಟನೆಯ ರಾಜ್ಯ ಅಧ್ಯಕ್ಷ ಅನಂತ್ ನಾಯ್ಕ್.ಎನ್, ಕಾರ್ಯದರ್ಶಿ ಹುಳ್ಳಿ ಉಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದುಡಿಯುವ ಜನರ ಮೇಲಿನ ಹೊರೆ ಹೆಚ್ಚಿಸುವ ಬಜೆಟ್

ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ವಿಶ್ಲೇಷಣೆ

ದಮನಕಾರಿ ಮುಂಗಡಪತ್ರ ಪ್ರತಿರೋಧಿಸಲು ಕರೆ


2012–13ನೇ ಸಾಲಿನ ಕೇಂದ್ರ ಮುಂಗಡ ಪತ್ರ ದಮನಕಾರಿ ಬಜೆಟ್ ಆಗಿದ್ದು ಬೆಲೆಯೇರಿಕೆಗೆ ಹಾದಿಮಾಡಿ ಕೊಡುವಂಥದ್ದಾಗಿದೆ ಹಾಗೂ ದುಡಿಯುವ ಜನರ ಮೇಲೆ ಇನ್ನಷ್ಟು ಹೊರೆ ಹೇರುವಂಥದ್ದಾಗಿದೆ ಎಂದು ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಅಭಿಪ್ರಾಯಪಡುತ್ತದೆ. ಕಾರ್ಪೊರೇಟ್ ಕಂಪನಿಗಳು ಮತ್ತು ಶ್ರೀಮಂತರ ಪರವಾದ ಧೋರಣೆಗಳು ಈ ಬಜೆಟ್‌ನಲ್ಲಿ ಢಾಳಾಗಿ ಎದ್ದು ಕಾಣುತ್ತವೆ. ಶ್ರೀಮಂತರ ಮೇಲಿನ ನೇರ ತೆರಿಗೆಗಳಿಂದ 4,500 ಕೋಟಿ ರೂಪಾಯಿ ನಷ್ಟ ಉಂಟಾಗುತ್ತದೆ. ಆದರೆ, ಸೇವಾತೆರಿಗೆ ಮತ್ತು ಸೀಮಾಸುಂಕಗಳ ರೂಪದ ಪರೋಕ್ಷ ತೆರಿಗೆಗಳಿಂದ 45,940 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗುತ್ತದೆ ಎನ್ನುವುದೇ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಐಷಾರಾಮಿ ವಸ್ತುಗಳ ಮೇಲಿನ ತೆರಿಗೆಗಳನ್ನು ಸಿ.ಪಿ.ಐ. (ಎಂ) ಸ್ವಾಗತಿಸುವುದಾದರೂ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ಪರೋಕ್ಷ ತೆರಿಗೆಗಳ ಮೇಲಿನ ಅವಲಂಬನೆಯನ್ನು ಅದು ತೀವ್ರವಾಗಿ ವಿರೋಧಿಸುತ್ತದೆ. ಯಾಕೆಂದರೆ ಆ ರೀತಿಯ ತೆರಿಗೆಗಳು ತೀವ್ರ ಬೆಲೆಯೇರಿಕೆಗೆ ಕಾರಣವಾಗುತ್ತವೆ.

ಇಂಧನ ಮೇಲಿನ ಸಬ್ಸಿಡಿಗಳನ್ನು 25,000 ಕೋಟಿ ರೂಪಾಯಿಗಳಷ್ಟು ಕಡಿತ ಮಾಡಿರುವುದನ್ನೂ ಸಿ.ಪಿ.ಐ. (ಎಂ) ವಿರೋಧಿಸುತ್ತದೆ. ಇದರಿಂದಾಗಿ ಇಂಧನಗಳ ಬೆಲೆ ಇನ್ನಷ್ಟು ಏರಿಕೆಯಾಗುತ್ತವೆ. ರಸಗೊಬ್ಬರಗಳ ಮೇಲಿನ ಸಬ್ಸಿಡಿಗಳನ್ನು 6,000 ಕೋಟಿ ರೂಪಾಯಿಗಳಷ್ಟು ಕಡಿತ ಮಾಡಿರುವುದರಿಂದ ರೈತರ ಮೇಲಿನ ಹೊರೆ ಅಸಹನೀಯವಾಗುತ್ತದೆ.



ವಿತ್ತೀಯ ಕೊರತೆಯನ್ನು ನಿಯಂತ್ರಿಸಲಿಕ್ಕಾಗಿ ಸಬ್ಸಿಡಿಗಳಲ್ಲಿ ಕಡಿತ ಮಾಡಲಾಗಿದೆ ಎಂದು ಸರಕಾರ ಹೇಳುವುದು ಆತ್ಮವಂಚನೆಯೆಂದೇ ಹೇಳಬೇಕು. ಯಾಕೆಂದರೆ 2011–12ರಲ್ಲೇ 5.3 ಲಕ್ಷ ಕೋಟಿ ರೂಪಾಯಿ ಆದಾಯ ಸರಕಾರದ ಕೈತಪ್ಪಿ ಹೋಗಿತ್ತು. ಆ ಪೈಕಿ 50 ಸಾವಿರ ಕೋಟಿ ರೂಪಾಯಿಗಳಷ್ಟು ತೆರಿಗೆ ವಿನಾಯಿತಿಗಳನ್ನು ಕಾರ್ಪೊರೇಟ್ ಕಂಪೆನಿಗಳಿಗೆ ನೀಡಲಾಗಿತ್ತು. ಕಾರ್ಪೊರೇಟ್ ವಲಯದಿಂದ ತೆರಿಗೆ ಸಂಗ್ರಹ ವಿಚಾರದಲ್ಲಿ ಸಡಿಲಿಕೆ ತೋರಿದ್ದರಿಂದಲೇ ಬಜೆಟ್ ಅಂದಾಜಿನಲ್ಲಿ ಒಟ್ಟು ತೆರಿಗೆ ಆದಾಯ 30,000 ಕೋಟಿ ರೂಪಾಯಿಯಷ್ಟು ಕಡಿಮೆಯಾಗಿತ್ತು.

ಇದೇ ವೇಳೆ ಶೇರು ಮಾರುಕಟ್ಟೆ (ಸ್ಟಾಕ್ ಮಾರ್ಕೆಟ್) ಹೂಡಿಕೆಗಳಿಗೆ ಬಹಳಷ್ಟು ರಿಯಾಯಿತಿಗಳನ್ನು ಬಜೆಟ್ ನೀಡುತ್ತಿದೆ. ಜಾಗತಿಕವಾಗಿ ನೋಡುವುದಾದರೆ ಸರಕಾರಗಳು ಸ್ಟಾಕ್ ಮಾರ್ಕೆಟ್‌ನ ಅಪಾಯಕಾರಿ ಪ್ರವೃತ್ತಿಗಳಿಗೆ ಕಡಿವಾಣ ಹಾಕಲು ಸಟ್ಟಾಬಾಜಿತನದ ವಿರುದ್ಧ ತೆರಿಗೆಗಳನ್ನು ಹೇರಲು ಮುಂದಾಗುತ್ತಿವೆ. ಆದರೆ, ಕೇಂದ್ರ ಬಜೆಟ್ ಎಸ್‌ಟಿಟಿ (ಸೆಕ್ಯುರಿಟಿ ವ್ಯವಹಾರ ತೆರಿಗೆ) ಯನ್ನು ಶೇಕಡಾ 25ರಷ್ಟು ಕಡಿತ ಮಾಡಿದೆ ಹಾಗೂ ಚಿಲ್ಲರೆ ಸ್ಟಾಕ್ ಮಾರ್ಕೆಟ್ ಹೂಡಿಕೆದಾರರಿಗೆ ಪ್ರೋತ್ಸಾಹ ನೀಡಲು ಹೊಸ ತೆರಿಗೆ ವಿನಾಯಿತಿಗಳನ್ನು ಘೋಷಿಸಿದೆ. ಕಾರ್ಮಿಕ ಭವಿಷ್ಯ ನಿಧಿ (ಇಪಿಎಫ್) ಮೇಲಿನ ಬಡ್ಡಿಯನ್ನು ಶೇ. 9.5ರಿಂದ ಶೇ. 8.25ಕ್ಕೆ ಇಳಿಸಿರುವ ಸಂದರ್ಭದಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಸಟ್ಟಾಬಾಜಿತನವನ್ನು ತಡೆಯಲಿಕ್ಕಾಗಿ ಬಂಡವಾಳದ ಗಳಿಕೆ ಮೇಲಿನ(ಕ್ಯಾಪಿಟಲ್ ಗೇನ್ಸ್) ತೆರಿಗೆಗಳ ಅಗತ್ಯವನ್ನು ಸರಕಾರ ಮತ್ತೊಮ್ಮೆ ಕಡೆಗಣಿಸಿದೆ.



ಜನತೆಗೆ ಸಂಬಂಧಪಟ್ಟು ಹೇಳುವುದಾದರೆ, ಇನ್ನಷ್ಟು ಅನುದಾನಗಳನ್ನು ನೀಡಲಾಗಿದೆ ಎನ್ನುವುದು ತೀರಾ ಹಾಸ್ಯಾಸ್ಪದವಾದುದಾಗಿದೆ. ಯಾಕೆಂದರೆ, ನೈಜ ವೆಚ್ಚಗಳಿಗೆ ಸಂಬಂಧಿಸಿದ ದಾಖಲೆಗಳೇ ನಮ್ಮ ಮುಂದಿವೆ. ಇಂತಿಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆಯೆಂದು ಸರಕಾರ ಬಜೆಟ್‌ನಲ್ಲಿ ಎಷ್ಟೇ ಆಕರ್ಷಕ ಅಂಕಿಅಂಶಗಳನ್ನು ನೀಡಬಹುದು, ಆದರೆ ಆ ಅಂದಾಜಿನಲ್ಲಿ ನಿಜವಾಗಿ ವೆಚ್ಚ ಮಾಡುವುದು ಎಷ್ಟು ಎನ್ನುವುದು ಮುಖ್ಯವಾಗುತ್ತದೆ. ಕಳೆದ ವರ್ಷ ಬಹುತೇಕ ಎಲ್ಲಾ ಸಚಿವ ಖಾತೆಗಳಲ್ಲಿ ನೈಜವೆಚ್ಚ ಅಂದಾಜಿಗಿಂತ ತೀರಾ ಕಡಿಮೆಯಿತ್ತು ಎನ್ನುವುದು ನಾಚಿಕೆಗೇಡಿನ ಸಂಗತಿ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಯೋಜನೆ (ನರೇಗಾ) ವೆಚ್ಚದಲ್ಲಿ 9,000 ಕೋಟಿ ರೂಪಾಯಿಗಳಷ್ಟು ಅಪಾರ ಕಡಿತವಿತ್ತು; ಅಂದರೆ ಬಜೆಟ್ ಅಂದಾಜಿಗೂ ಪರಿಷ್ಕೃತ ಅಂದಾಜಿಗೂ ಇದ್ದ ಅಂತರ ಇದಾಗಿತ್ತು. ಅದೇ ರೀತಿ ಮಹಿಳಾ ಸಬಲೀಕರಣ ಬಜೆಟ್ ಕೂಡ 1,200 ಕೋಟಿ ರೂಪಾಯಿಗಳಷ್ಟು ಕಡಿತ ಕಂಡಿತ್ತು. ಕೊರತೆಯನ್ನು ನಿಯಂತ್ರಿಸಲು ಅನುಸರಿಸಲಾಗುವ ಸಾಮಾನ್ಯ ಅಘೋಷಿತ ಕ್ರಮಗಳಲ್ಲಿ ಇದೂ ಒಂದಾಗಿದೆ.

ಹಣದುಬ್ಬರವೂ ಅನುದಾನವೂ

ಹಣದುಬ್ಬರದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ, ಬಹುತೇಕ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನ ಏನೇನೂ ಸಾಲದು. ಉದಾಹರಣೆಗೆ, ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಗಳಿಗೆ ಅನುದಾನ ಹೆಚ್ಚಳವಾದರೂ ಅದು ಯೋಜನಾ ವೆಚ್ಚಕ್ಕಿಂತ, ಅಂದರೆ ಶೇಕಡಾ 16.5 ಮತ್ತು ಶೇಕಡಾ 8.2ಕ್ಕಿಂತ, ತೀರಾ ಕಡಿಮೆಯಾದುದಾಗಿದೆ. ವಾಸ್ತವವಾಗಿ ಕಳೆದ ವರ್ಷ ಅದು ಇನ್ನೂ ಕಡಿಮೆಯಾಗಿತ್ತು. ಅಂದರೆ, ಅನುಕ್ರಮವಾಗಿ ಕೇವಲ 7 ಮತ್ತು 4 ಆಗಿತ್ತು.

ನಿಧಾನಗತಿಯ ಬೆಳವಣಿಗೆಯ ಪ್ರಕ್ರಿಯೆಯನ್ನು ಬದಲಾಯಿಸಲು ಅಗತ್ಯವಾದ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವ ವಿಚಾರದಲ್ಲಿ ಈ ಬಜೆಟ್ ವಿಫಲವಾಗಿದೆ. ಇಂಧನ ಮತ್ತು ರಸಗೊಬ್ಬರ ಸಬ್ಸಿಡಿಗಳಲ್ಲಿ ತೀವ್ರ ಕಡಿತ ಮಾಡಿರುವುದು ಹಾಗೂ ಪರೋಕ್ಷ ತೆರಿಗೆಗಳಲ್ಲಿ ಏರಿಕೆ ಮಾಡಿರುವುದರಿಂದ ಹಣದುಬ್ಬರ ಇನ್ನಷ್ಟು ಹೆಚ್ಚಲಿದೆ.

ಈ ರೀತಿಯಾಗಿ, ಜನರ ಸಂಕಷ್ಟಗಳನ್ನು ಹೆಚ್ಚಿಸುವ ದಮನಕಾರಿ ಮುಂಗಡಪತ್ರವನ್ನು ವಿರೋಧಿಸುವಂತೆ ಸಿ.ಪಿ.ಐ. (ಎಂ) ದೇಶದ ಜನತೆಗೆ ಕರೆಕೊಟ್ಟಿದೆ. □

ಕಾರ್ಮಿಕರ ಮಕ್ಕಳು

ನವ-ಉದಾರವಾದಕ್ಕೆ ಬದ್ಧವಾಗಿರುವ ಮನಮೋಹನ ಸಿಂಗ್ ನೇತೃತ್ವದ ಯುಪಿಎ-2 ಸರಕಾರವೇ ಸ್ವತಃ ಒಬ್ಬ 'ದಿನಗೂಲಿ ಕೆಲಸಗಾರ'ನಂತೆ ತನ್ನ ಕೆಲಸದ ಅವಧಿಯನ್ನು ಮುಂದುವರೆಸಲು ತನ್ನ ಮೈತ್ರಿಕೂಟದ ಸದಸ್ಯರೊಂದಿಗೆ ಎಲ್ಲ ರೀತಿಯ ರಾಜಿಗಳನ್ನು ಮಾಡಿಕೊಳ್ಳುತ್ತಲೇ ಇರಬೇಕಾದ ಪರಿಸ್ಥಿತಿಗೆ ಇಳಿದಿದೆ. ಆದರೆ ಇಂತಹ ಅಭದ್ರತೆಯನ್ನೇ ಬಳಸಿಕೊಂಡು, ಈ ಯುಪಿಎ-2 ಸರಕಾರ ಮೋಸದ ವ್ಯವಹಾರಗಳನ್ನು ಮತ್ತು ರಾಜಿಗಳನ್ನು ಕುದುರಿಸಿಕೊಂಡೇ ತನ್ನ ಅಸ್ತಿತ್ವವನ್ನು ಮುಂದುವರೆಸುವ, ಮತ್ತು ಆಮೂಲಕ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಅಜೆಂಡಾವನ್ನು ಇನ್ನಷ್ಟು ಅನಾವರಣಗೊಳಿಸಲು ಅನುಕೂಲ ಮಾಡಿಕೊಳ್ಳುವ ಹಾದಿಯಲ್ಲೇ ಮುಂದುವರೆಯುವಂತೆ ಕಾಣುತ್ತಿದೆ.

ಇಂದು ಇಂದಿಗೆ-ನಾಳೆ ನಾಳೆಗೆ


ಎಂಬಂತೆ ಬದುಕುಳಿದಿರುವ ಯುಪಿಎ-2 ಸರಕಾರ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮಾರ್ಚ್ 21, 2012 ರ ಸಂಪಾದಕೀಯ

ಕಾರ್ಮಿಕರ ಉದ್ಯೋಗ ಭದ್ರತೆಯೆಂಬುದನ್ನು ಕ್ರಮೇಣ ನಾಶ ಮಾಡಬೇಕು- ಇದು ನವ-ಉದಾರವಾದ ಮತ್ತು ಅದರ ಆರ್ಥಿಕ ಸುಧಾರಣೆಗಳ ತರ್ಕದಲ್ಲೇ ಅಡಗಿರುವ ಒಂದು ಸಂಗತಿ; ಖಾಯಂ ಕಾರ್ಮಿಕರ ಸ್ಥಾನದಲ್ಲಿ ಕಾಂಟ್ರಾಕ್ಟ್, ತಾತ್ಕಾಲಿಕ ಅಥವ ಕ್ಯಾಶುವಲ್ ಕಾರ್ಮಿಕರನ್ನು ದುಡಿಸಿಕೊಳ್ಳಬೇಕು. ಉದ್ಯೋಗದ ಸ್ವರೂಪದಲ್ಲಿನ ಈ ಬದಲಾವಣೆ ದುಡಿಯುವ ಜನಗಳ ಅಭದ್ರತೆಯನ್ನು ವಿಪರೀತವಾಗಿ ಹೆಚ್ಚಿಸುತ್ತದೆ.

ಈ ತರ್ಕದ ಒಂದು ಛಾಯೆ, ಒಂದು ವಿಭಿನ್ನ ರೀತಿಯಲ್ಲಿ, ನವ-ಉದಾರವಾದಕ್ಕೆ ಬದ್ಧವಾಗಿರುವ ಮನಮೋಹನ ಸಿಂಗ್ ನೇತೃತ್ವದ ಯುಪಿಎ-2 ಸರಕಾರವನ್ನೇ ಬಾಧಿಸುವಂತೆ ಕಾಣುತ್ತಿದೆ. ಅದು ತನ್ನ ಕೆಲಸದ ಅವಧಿಯನ್ನು ಮುಂದುವರೆಸಲು (ಒಬ್ಬ 'ದಿನಗೂಲಿ ಕೆಲಸಗಾರ'ನಂತೆ) ತನ್ನ ಮೈತ್ರಿಕೂಟದ ಸದಸ್ಯರೊಂದಿಗೆ ಎಲ್ಲ ರೀತಿಯ ರಾಜಿಗಳನ್ನು ಮಾಡಿಕೊಳ್ಳುತ್ತಲೇ ಇರಬೇಕಾದ ಪರಿಸ್ಥಿತಿಗೆ ಇಳಿದಿದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸೂಚಿಸುವ ಸಾಂಪ್ರದಾಯಿಕ ಠರಾವನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದ ರೀತಿ. ಸರಕಾರ, ಡಿಎಂಕೆಯನ್ನು ತುಷ್ಟೀಕರಿಸಲು ಶ್ರೀಲಂಕಾ ತನ್ನ ತಮಿಳು ಜನಸಂಖ್ಯೆಯ ವಿರುದ್ಧ ಎಸಗಿರುವ ಅಪರಾಧಗಳಿಗೆ ಅದಕ್ಕೆ ಛೀಮಾರಿ ಹಾಕುವ ವಿಶ್ವ ಸಂಸ್ಥೆಯ ನಿರ್ಣಯದ ಪರವಾಗಿ ಮತ ಹಾಕುವ ಭರವಸೆ ಕೊಡಬೇಕಾಯಿತು; ತೃಣಮೂಲ ಕಾಂಗ್ರೆಸಿನೊಂದಿಗೆ ಒಂದು ವ್ಯವಹಾರ ಕುದುರಿಸಲು ರೈಲು ಬಜೆಟ್ ಮಂಡಿಸಿದ ಕೂಡಲೇ ಅದನ್ನು ಮಂಡಿಸಿದ ರೈಲ್ವೆ ಮಂತ್ರಿಯನ್ನೇ ಬದಲಿಸುವ ಅತ್ಯಂತ ವಿಲಕ್ಷಣ ಬೇಡಿಕೆಗೆ ಒಪ್ಪಬೇಕಾಗಿ ಬಂದಿದೆ. ಸಂಸತ್ತಿಗೆ ಬಜೆಟನ್ನು ಮಂಡಿಸಿದ ಒಬ್ಬ ಮಂತ್ರಿ ಅದಕ್ಕೆ ಉತ್ತರ ಕೊಡಲು ಮತ್ತು ಬಜೆಟ್ ಪ್ರಸ್ತಾವಗಳ ಅಂಗೀಕಾರಕ್ಕೆ ಕೇಳಲು, ಅದರ ಮೇಲಿನ ಚರ್ಚೆಗಳನ್ನು ಆಲಿಸಲು ಸಾಧ್ಯವಿರದಿರುವುದು ಬಹುಶಃ ಭಾರತೀಯ ಸಂಸದೀಯ ಇತಿಹಾಸದಲ್ಲೆ ಇದು ಮೊದಲ ಬಾರಿ.

ವಂದನಾ ಠರಾವಿನ ಮೇಲೆ ಮತದಾನದಲ್ಲಿ ಎರಡೂ ಸದನಗಳಲ್ಲಿ ಗೈರು ಹಾಜರಾಗಲು ತೃಣಮೂಲ ಕಾಂಗ್ರೆಸಿಗೆ ಅನುಕೂಲ



ಮಾಡಿಕೊಡಲು ಇಂತಹ ವ್ಯವಹಾರ ಅಗತ್ಯವಾಗಿತ್ತು. ಇಷ್ಟೆಲ್ಲಾ ಮಾಡಿದ ಮೇಲೂ ರಾಜ್ಯಸಭೆಯಲ್ಲಿ ಯುಪಿಎ ಗೆ ಬಹುಮತವಿಲ್ಲದ್ದರಿಂದ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷದೊಂದಿಗೆ ಕೂಡ ಹೊಸ ವ್ಯವಹಾರಗಳನ್ನು ಕುದುರಿಸುವುದು ಅಗತ್ಯವಾಯಿತು ಎಂಬುದು ಸ್ಪಷ್ಟ. ಸದ್ಯಕ್ಕೆ, ಇವು ಎಂತಹ ವ್ಯವಹಾರಗಳು ಎಂಬುದು ಸಾರ್ವಜನಿಕ ಅರಿವಿಗೆ ಬಂದಿಲ್ಲ. ಆದರೆ ಇವೆರಡೂ ಪಕ್ಷಗಳು ಯುಪಿಎ ಯೊಂದಿಗೆ ಮತ ನೀಡಿದ್ದರಿಂದಲೇ ರಾಜ್ಯಸಭೆಯಲ್ಲಿ ಈ ಠರಾವಿನ ಅಂಗೀಕಾರ ಸಾಧ್ಯವಾಯಿತು. ಇದಕ್ಕೆ ಮೊದಲು ಹತ್ತಿ ರಫ್ತಿನ ಮೇಲಿನ ನಿಷೇಧವನ್ನು ಅವಸರವಸರವಾಗಿ ಹಿಂತೆಗೆದುಕೊಳ್ಳಬೇಕಾಗಿ ಬಂದಿತ್ತು; ಏಕೆಂದರೆ, ಅದು ಮಹಾರಾಷ್ಟ್ರದಲ್ಲಿ ಒಂದು ದೊಡ್ಡ ವಿವಾದವಾಗಿ ಎನ್‌ಸಿಪಿ ಪಕ್ಷ ಅದಕ್ಕೆ ಬಲವಾದ ಆಕ್ಷೇಪಣೆಗಳನ್ನು ಎತ್ತಿತ್ತು.

ಟಿಎಂಸಿ ಇಬ್ಬಂದಿತನ

ಸಾಂದರ್ಭಿಕವಾಗಿ, ಈ ಸಮಸ್ತ ಪ್ರಕ್ರಿಯೆಯಲ್ಲಿ, ತೃಣಮೂಲ ಕಾಂಗ್ರೆಸಿನ ಇಬ್ಬಂದಿತನ ಕಣ್ಣಿಗೆ ರಾಚುವಂತಿದೆ. ಅದು ಕೇಂದ್ರ-ರಾಜ್ಯ ಸಂಬಂಧಗಳನ್ನು ಮತ್ತು ಭಾರತದ ಒಕ್ಕೂಟ ಸ್ವರೂಪವನ್ನು ಉಲ್ಲಂಘಿಸಿದ 'ರಾಷ್ಟ್ರೀಯ ಪ್ರತಿ-ಭಯೋತ್ಪಾದನಾ ಕೇಂದ್ರ'ದ ರಚನೆಯನ್ನು ಪ್ರಸ್ತಾಪ ಮಾಡಿದ್ದರ ವಿರುದ್ಧ ಗುಡುಗಿತ್ತು. ಆದರೆ ಈ ವಿಷಯದ ಮೇಲೆ ಮತದಾನದ ಸಂದರ್ಭ ಬಂದಾಗ ಬಾಲ ಮುದುಡಿಕೊಂಡಿತು, ಏಕೆಂದರೆ ಕಾಂಗ್ರೆಸಿನೊಂದಿಗೆ ಅದು ವ್ಯವಹಾರ ಕುದುರಿಸಿತ್ತು. ಲೋಕಪಾಲ ಮಸೂದೆಯಲ್ಲಿ ಲೋಕಾಯುಕ್ತದ ಪ್ರಶ್ನೆಯಲ್ಲೂ ಅದು ಇಂತಹುದೇ ವರ್ತನೆ ಪ್ರದರ್ಶಿಸಿತು. ಕೇಂದ್ರ ಸಂಪುಟ ರಾಷ್ಟ್ರಪತಿಗಳ ಭಾಷಣಕ್ಕೆ ಅನುಮತಿ ನೀಡಿದಾಗಲಾಗಲೀ, ಅಥವ ಲೋಕಪಾಲ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲು ಸಂಪುಟ ಅನುಮತಿ ನೀಡಿದಾಗಲಾಗಲೀ ಈ ಯಾವ ಆಕ್ಷೇಪಗಳನ್ನೂ ಅದು ಎತ್ತಿರಲಿಲ್ಲ. ನಂತರವಷ್ಟೇ ಅದಕ್ಕೆ ಜ್ಞಾನೋದಯವಾಗಿದ್ದುದು-ಇವೆಲ್ಲ ಅದರ ವ್ಯವಹಾರ ಕುದುರಿಕೆಗಳನ್ನು ಮರೆಮಾಚುವ ಕ್ಷುಲ್ಲಕ ಪರದೆಗಳಷ್ಟೇ.

ಈ ಎಲ್ಲ ಬೆಳವಣಿಗೆಗಳಿಂದಾಗಿ, ಕಷ್ಟದ ನಿರ್ಣಯಗಳನ್ನು ಕೈಗೊಳ್ಳುವುದು ಮೈತ್ರಿಕೂಟದ ಒತ್ತಡಗಳಿಂದಾಗಿ ಇನ್ನಷ್ಟು ಕಷ್ಟದಾಯಕವಾಗಿದೆ ಎಂದು ಪ್ರಧಾನ ಮಂತ್ರಿಗಳು ಉದ್ಗರಿಸುವಂತಾಗಿದೆ. ಇದಕ್ಕೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್‌ರಿಂದ ತೀಕ್ಷ್ಣ ಧಿಕ್ಕಾರವನ್ನೂ ಎದುರಿಸಬೇಕಾಯಿತು. 'ಇಂತಹ ಸಾರಾಸಗಟು ಹೇಳಿಕೆ ನಮಗೆ ಆತಂಕ ಮತ್ತು ನೋವು ಉಂಟು ಮಾಡಿದೆ' ಎಂದವರು ಪ್ರತಿಕ್ರಿಯಿಸಿದರು. ಇದು ಈ ಯುಪಿಎ-2 ಸರಕಾರ ತನ್ನ ಮಿತ್ರಪಕ್ಷಗಳ ಬೆದರಿಸುವ ತಂತ್ರಗಳಿಂದಾಗಿ ಸದಾ ಅಂಚಿನಲ್ಲೇ ಇರಬೇಕಾದ ಪರಿಸ್ಥಿತಿಯಲ್ಲಿದೆ ಎಂಬುದನ್ನು ಮತ್ತೊಮ್ಮೆ ದೃಢಪಡಿಸಿದೆ.

ಹಣಕಾಸು ಕೊರತೆಯ ಭೂತ

ಈ ಯುಪಿಎ ಸರಕಾರ ಹೆಜ್ಜೆ-ಹೆಜ್ಜೆಗೂ ಮತ್ತು ಪ್ರತಿಯೊಂದು ಇಟ್ಟಿಗೆ ಇಡುವಾಗಲೂ ವ್ಯವಹಾರಗಳನ್ನು ಮತ್ತು ರಾಜಿಗಳನ್ನು ಕುದುರಿಸಿಕೊಂಡೇ ಬದುಕುಳಿಯಬೇಕಾಗಿ ಬಂದಿದೆ. ಇದು, ಪ್ರಧಾನ ಮಂತ್ರಿಗಳು ತನ್ನ ಇನ್ನಷ್ಟು ನವ-ಉದಾರವಾದಿ ಆರ್ಥಿಕ ಸುಧಾರಣೆಯ ಅಜೆಂಡಾವನ್ನು ಮುಂದೊತ್ತಲು ದೃಢನಿರ್ಧಾರ ಮಾಡಿರುವ ಸಂದರ್ಭದಲ್ಲಿ ಇನ್ನಷ್ಟು ಕಿತ್ತಾಟಗಳತ್ತ ಒಯ್ಯುವುದು ಖಂಡಿತ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗೆ ಅವಕಾಶ ಕೊಡಬೇಕೆಂದು ಎಡಪಕ್ಷಗಳ ಬಲವಾದ ಪ್ರತಿಭಟನೆಗಳು ಮತ್ತು ವಿರೋಧದ ನಡುವೆಯೂ ಅವರು ಮಾಡಿದ ನಿರ್ಧಾರವನ್ನು ತಡೆಹಿಡಿಯಬೇಕಾದ ಬಲವಂತಕ್ಕೆ ಅವರೀಗ ಒಳಗಾಗಿದ್ದಾರೆ. ಬಜೆಟಿನಲ್ಲಿ ಹಣಕಾಸು ವಲಯದಲ್ಲಿ ಮತ್ತಷ್ಟು ಸುಧಾರಣೆಗಳ ಭರವಸೆ ನೀಡಲಾಗಿದೆ. ಏರುತ್ತಿರುವ ಹಣಕಾಸು ಕೊರತೆ ನಮ್ಮ ಆರ್ಥಿಕವನ್ನೇ ನುಂಗಿ ಹಾಕಬಹುದು ಎಂಬ ಭೀತಿ ಹುಟ್ಟಿಸುವಂತೆ ಚಿತ್ರಿಸಲಾಗುತ್ತಿದೆ. ಆದರೂ, ಕಳೆದ ಹಣಕಾಸು ವರ್ಷದಲ್ಲಿ ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತರಿಗೆ ಕೊಡಮಾಡಿದ ರಿಯಾಯ್ತಿಗಳ ಮೊತ್ತ ಸುಮಾರು 5.28 ಲಕ್ಷ ಕೋಟಿ ರೂ. ಆಗಿದ್ದರೆ, ಹಣಕಾಸು ಕೊರತೆ ಜಿಡಿಪಿಯ 5.9ಶೇ. ಎನ್ನುವುದಾದರೆ ಅದು 5.22 ಲಕ್ಷ ಕೋಟಿ ರೂ.ಗಳಷ್ಟಾಗುತ್ತದೆ ಎಂಬುದಂತೂ ವಾಸ್ತವ ಸಂಗತಿ. ಅಂದರೆ ಶ್ರೀಮಂತರಿಗೆ ಈ ರಿಯಾಯ್ತಿಗಳನ್ನು ಕೊಡದಿರುತ್ತಿದ್ದರೆ ಈ ಹಣಕಾಸು ಕೊರತೆಯೆಂಬುದೇ ಇರುತ್ತಿರಲಿಲ್ಲ ಎಂದಂತಾಯಿತು!

ಆದರೂ ಹಣಕಾಸು ಕೊರತೆಯ ಭೂತವನ್ನು ತೋರಿಸಿ ಬಜೆಟಿನಲ್ಲಿ ಸಬ್ಸಿಡಿಗಳಲ್ಲಿ ಭಾರೀ ಕಡಿತ ಮಾಡುವ ಪ್ರಸ್ತಾವಗಳನ್ನು (ಇಂಧನಮೇಲೆ ರೂ. 25,000 ಕೋಟಿ ರೂ., ರಸಗೊಬ್ಬರದ ಮೇಲೆ 600ಕೋಟಿ ರೂ.ಇತ್ಯಾದಿ) ಮಂಡಿಸಲಾಗಿದೆ. ಇವು ನೇರವಾಗಿ ಜನಗಳ ಸಂಕಷ್ಟಗಳನ್ನು ಹೆಚ್ಚಿಸುವುದಷ್ಟೇ ಅಲ್ಲ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಮತ್ತಷ್ಟು ಏರಿಸುವುದಂತೂ ಖಂಡಿತ. ಇದು ನೇರವಾಗಿಯೂ, ಪರೋಕ್ಷವಾಗಿ ಹಣದುಬ್ಬರಕ್ಕೆ ಇನ್ನಷ್ಟು ತುಪ್ಪ ಸುರಿದು- ಹೀಗೆ ಎರಡೂ ರೀತಿಗಳಲ್ಲಿ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹೇರುತ್ತದೆ.

ಸಬ್ಸಿಡಿ ಕಡಿತಕ್ಕೆ ಬೃಹತ್ ಮೋಸ

ಸಬ್ಸಿಡಿಗಳಲ್ಲಿ ಇಂತಹ ಕಡಿತವನ್ನು ಜಾರಿಗೆ

ಪುಟ 12 ಕ್ಕೆ

ಫೆಬ್ರವರಿ 28 ಮಹಾ ಮುಷ್ಕರ

ದೇಶದಾದ್ಯಂತ ಸು. ಹತ್ತು ಕೋಟಿ ದುಡಿಯುವ ಜನರು ಪಾಲ್ಗೊಂಡ ಕಾರ್ಮಿಕರ ಐತಿಹಾಸಿಕ ಹೋರಾಟ ಮೊನ್ನೆ ತಾನೆ ದಾಖಲಾಗಿದೆ. ದೇಶದ ದುಡಿವ ಜನರು ಆಳುವ ಸರ್ಕಾರಗಳಿಗೆ ಎಚ್ಚರಿಕೆ ನೀಡಿದ್ದಾರೆ. ಆದರೆ ಕೇಂದ್ರ ಯುಪಿಎ ಸರ್ಕಾರವಾಗಲಿ, ರಾಜ್ಯ ಬಿಜೆಪಿ ಸರ್ಕಾರವಾಗಲೀ ತಮ್ಮ ಬಜೆಟ್ ಮಂಡಿಸುವಾಗ ಈ ಯಾವ ಬೇಡಿಕೆ, ಒತ್ತಾಯಗಳನ್ನು ಪರಿಗಣಿಸುವುದಿಲ್ಲ ಎಂದರೆ ಏನರ್ಥ? ಎಷ್ಟೆಲ್ಲಾ ವಿಭಾಗದ ಕಾರ್ಮಿಕರನ್ನು ಒಳಗೊಂಡು ಎಷ್ಟು ದೊಡ್ಡ ಮುಷ್ಕರ ನಡೆದಿದೆ ಎಂಬುದನ್ನು ನೀವೇ ನೋಡಿ. ಹೀಗೆ ದುಡಿಯುವ ಜನತೆಯ ಬದುಕಿನ ಪ್ರಶ್ನೆಗಳ ನಿರ್ಲಕ್ಷಿಸಿದ ಎನ್.ಡಿ.ಎ. ಸರ್ಕಾರಕ್ಕೆ ಬಂದ ಗತಿ ಏನು ಎಂದು ಈ ಆಳುವ ಜನಕ್ಕೆ ನೆನಪಿಸಬೇಕಿದೆ.

ಡಾ॥ ಕೆ.ಹೇಮಲತಾ

ಫೆಬ್ರವರಿ 28ರಂದು ದೇಶಾದ್ಯಂತ ನಡೆದ ಐತಿಹಾಸಿಕ ಮಹಾಮುಷ್ಕರ ರಾಷ್ಟ್ರದ ಕಾರ್ಮಿಕ ಚಳವಳಿಯ ಇತಿಹಾಸದಲ್ಲಿಯೇ ದಾಖಲಿಸಬಹುದಾದ ಮೈಲಿಗಲ್ಲು. ದೇಶದ ಪ್ರಮುಖ 11 ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ಕೈಗಾರಿಕಾ ಒಕ್ಕೂಟಗಳು ಮಹಾ ಮುಷ್ಕರಕ್ಕೆ ನೀಡಿದ ಕರೆಗೆ ದೇಶದ ದುಡಿವ ಜನ ನೀಡಿದ ಪ್ರತಿಕ್ರಿಯೆ ಅಭೂತ ಪೂರ್ವವಾದುದು. ನಮ್ಮ ಕಾರ್ಮಿಕ ಚಳವಳಿಯ ಇತಿಹಾಸದಲ್ಲಿಯೇ ಮೊದಲಬಾರಿಗೆ ಐಎನ್‌ಟಿಯುಸಿ ಹಾಗೂ ಬಿಎಮ್‌ಎಸ್ ಸೇರಿದಂತೆ ಇತರೆ ಕಾರ್ಮಿಕ ಸಂಘಟನೆಗಳು ಹಾಗೂ ಕೈಗಾರಿಕಾ ಒಕ್ಕೂಟಗಳು ಕೂಡ ಈ ಅಖಿಲ ಭಾರತ ಮಹಾಮುಷ್ಕರಕ್ಕೆ ಬೆಂಬಿಲ ಸೂಚಿಸಿದ್ದವು. ಫೆ.28ರಂದು ನಡೆದ ಮಹಾ ಮುಷ್ಕರಕ್ಕೆ ನೀಡಿದ ಕರೆಗೆ ದುಡಿವ ಜನ ತೋರಿದ ಐಕ್ಯತೆಯನ್ನು ಹೋಲಿಸಲು ಪೂರ್ವನಿದರ್ಶನಗಳಿಲ್ಲ. ಉತ್ತರದ ಜಮ್ಮು-ಕಾಶ್ಮೀರದಿಂದ ದಕ್ಷಿಣದ ತಮಿಳುನಾಡಿನವರೆಗೆ ಹಾಗೂ ಪೂರ್ವದ ಅಸ್ಸೋಮಿನಿಂದ ಪಶ್ಚಿಮದ ಗುಜರಾತಿನವರೆಗೆ ಆಳುವ ಸರ್ಕಾರಗಳ ಜನವಿರೋಧಿ ಹಾಗೂ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಅಂದಾಜು 10 ಕೋಟಿಗೂ ಹೆಚ್ಚು ವಿವಿಧ ವಿಭಾಗಗಳ ದುಡಿವ ಜನ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ.

ಬೆಲೆ ಏರಿಕೆ ತಡೆಯಬೇಕು, ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಪರಿಹಾರ ಒದಗಿಸಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು, ಕಾರ್ಮಿಕ ಕಾನೂನುಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ಅಸಂಘಟಿತ ವಲಯದ ಕಾರ್ಮಿಕರ ಸಾರ್ವತ್ರಿಕ ಸಾಮಾಜಿಕ ಭದ್ರತೆಗಾಗಿ ರಾಷ್ಟ್ರೀಯ ಸಾಮಾಜಿಕ ಭದ್ರತಾ ನಿಧಿ ಸ್ಥಾಪಿಸಿ, ಅದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸುವುದು, ಖಾಯಂ ಕೆಲಸಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ನಿಲ್ಲಿಸುವುದು, ಅಲ್ಲಿಯವರೆಗೂ ಗುತ್ತಿಗೆ ಪದ್ಧತಿಯಡಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಖಾಯಂ ಕಾರ್ಮಿಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡುವುದು ಹಾಗೂ ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವುದು, ಸಾರ್ವತ್ರಿಕವಾಗಿ ಕನಿಷ್ಠ ಕೂಲಿ ಅಧಿನಿಯಮವನ್ನು ಅನ್ವಯಿಸಿ 10 ಸಾವಿರಕ್ಕೂ ಕಡಿಮೆ ಇಲ್ಲದಂತೆ ಮಾಸಿಕ ವೇತನ ಹಾಗೂ ಪಿಂಚಣಿ ನೀಡಬೇಕು, ಬೋನಸ್, ಭವಿಷ್ಯ ನಿಧಿ ನೀಡಲು ಅರ್ಹತೆಗಿರುವ ಷರತ್ತುಗಳನ್ನು ತೆರವುಗೊಳಿಸಬೇಕು ಮತ್ತು ಕಾರ್ಮಿಕ ಸಂಘಗಳ ಕಡ್ಡಾಯ ನೊಂದಣಿ ಕುರಿತ ನಿಯಮಗಳನ್ನು 45 ದಿನಗಳ ಒಳಗೆ ರೂಪಿಸಬೇಕು ಎಂಬುದು ಮುಷ್ಕರದ ಪ್ರಮುಖ ಆಗ್ರಹಗಳು.

ಬಂಗಾಳದ ಚುನಾವಣೆಯಲ್ಲಿ ಎಡರಂಗ ಸೋತ ನಂತರ ಆಳುವ ವರ್ಗದ ನಿರೀಕ್ಷೆಗಳು ಬಂಗಾಳದಲ್ಲಿ ಬೇರೆಯ ರೀತಿಯಲ್ಲಿದ್ದವು. ಕಾರ್ಮಿಕರ ಉತ್ಸಾಹಭಂಗ ಮಾಡುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯ ಬೆದರಿಕೆ, ಕ್ರೂರ ದಮನಕಾರಿ ಪ್ರವೃತ್ತಿಗಳು, ಬೆದರಿಕೆಗಳು ಹಾಗೂ ಭಯಹುಟ್ಟಿಸುವುದನ್ನು ನಿರ್ಲಕ್ಷಿಸಿದ ಬಂಗಾಳದ ದುಡಿಯುವ ಜನರು ಬಹು ದೊಡ್ಡಸಂಖ್ಯೆಯಲ್ಲಿ ಮುಷ್ಕರದಲ್ಲಿ ಪಾಲ್ಗೊಂಡು ಬಂಗಾಳದಲ್ಲಿ ದುಡಿವ ಜನರ ಯುಗ ಮುಗಿಯಿತು ಎಂಬ ಆಳುವ ವರ್ಗದ ನಿರೀಕ್ಷೆಗಳನ್ನೆಲ್ಲಾ ಹುಸಿ ಮಾಡಿದರು. ಮುಷ್ಕರ ವಿಫಲವಾಯಿತು ಎಂದು ನಿರೀಕ್ಷಿಸಿದ್ದ ಮಾಧ್ಯಮಗಳು ಮುಷ್ಕರ ಯಶಸ್ಸನ್ನು ನಿರ್ಲಕ್ಷಿಸಿದವು. ಇದೇ ಕೆಲಸವನ್ನು ಮಾಧ್ಯಮಗಳು ಕೇರಳದಲ್ಲಿಯೂ ಮಾಡಿದವು.

ಏನೇ ಆಗಲಿ ಪಶ್ಚಿಮ ಬಂಗಾಳ, ಕೇರಳ, ತ್ರಿಪುರವಲ್ಲದೆ ಆಸ್ಸೋಮ್, ಮಣಿಪುರ ಹಾಗೂ ಕರ್ನಾಟಕ, ರಾಜಸ್ಥಾನ, ಝಾರ್ಖಂಡ್, ಆಂಧ್ರಪ್ರದೇಶ ಮತ್ತಿತರ



ರಾಜ್ಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅಲ್ಲವಾದರೂ ಬಂದ್ ರೀತಿಯಲ್ಲಿ ಮುಷ್ಕರ ನಡೆಯಿತು. ಸಾರ್ವಜನಿಕ ಸಾರಿಗೆ ತಟಸ್ಥವಾಗಿತ್ತು. ಅಂಗಡಿ ಮುಂಗಟ್ಟುಗಳು, ಮಾರುಕಟ್ಟೆಗಳು ಮುಚ್ಚಿದ್ದವು. ಪಶ್ಚಿಮ ಬಂಗಾಲದ ಹಲವು ಕಡೆ ಪೊಲೀಸರು ಬಂಧನ ಮತ್ತು ಲಾಠಿಚಾರ್ಜ್‌ಗಳ ಮೊರೆ ಹೋಗಬೇಕಾಯಿತು. ಜಮ್ಮು-ಕಾಶ್ಮೀರದ ಶ್ರೀನಗರ, ಹರಿಯಾಣದ ಭಿವಾನಿ, ಅಸ್ಸೋಮಿನ ಗೌಹಾತಿ, ನುಮಾಲಿಗರ್‌ಗಳಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಕಾರ್ಮಿಕರನ್ನು ಪೊಲೀಸರು ಬಂಧಿಸಿದ್ದಾರೆ. ಜತೆಗೆ ಪಶ್ಚಿಮಬಂಗಾಳದಲ್ಲಿ ಮುಷ್ಕರವನ್ನು ಮುರಿಯಲು ಯತ್ನಸಿದ ಆಳುವ ಪಕ್ಷವು ಪ್ರತಿಭಟನೆ ನಿರತ ಕಾರ್ಮಿಕರ ಮೇಲೆ ದೈಹಿಕ ಹಲ್ಲೆ ಮಾಡಿ ಗಾಯಗೊಳಿಸುವ ಹೀನ ಕೆಲಸಕ್ಕೂ ಕೈಹಾಕಿತು. ಉಳಿದಂತೆ ರಾಜಧಾನಿ ದೆಹಲಿ ಸೇರಿದಂತೆ ಸಮೀಪದ ಫರೀದಾಬಾದ್ ಪ್ರದೇಶಗಳಲ್ಲಿ ಮುಷ್ಕರ ಮಾಮೂಲಿಯಾಗಿ ನಡೆಯಿತು.

ಫೆಬ್ರವರಿ 28ರ ಮಹಾ ಮುಷ್ಕರವನ್ನು ಯಶಸ್ವಿಗೊಳಿಸಿದ ರಾಷ್ಟ್ರದ ಎಲ್ಲಾ ವಿಭಾಗದ ದುಡಿವ ಜನರಿಗೆ ಸಿಐಟಿಯು ಅಭಿನಂದನೆಗಳನ್ನು ಸಲ್ಲಿಸುತ್ತದೆ. ರಾಜ್ಯ ಸರ್ಕಾರಗಳ ಬೆದರಿಕೆ, ಭಯ ಹುಟ್ಟಿಸುವಿಕೆ ಹಾಗೂ ಮುಷ್ಕರವನ್ನು ಮುರಿಯುವ ಎಲ್ಲಾ ಯತ್ನಗಳ ನಡುವೆಯೂ ಮುಷ್ಕರವನ್ನು ಯಶಸ್ವಿಗೊಳಿಸಿದ ಪಶ್ಚಿಮ ಬಂಗಾಳದ ದುಡಿಯುವ ಜನರಿಗೆ ಸಿಐಟಿಯು ಸೆಲ್ಯೂಟ್ ಮಾಡುತ್ತದೆ.

* ರಾಷ್ಟ್ರದ ಆರ್ಥಿಕ ವಲಯದ ಎಲ್ಲಾ ವಿಭಾಗಗಳಲ್ಲೂ ಮುಷ್ಕರ ಯಶಸ್ವಿಯಾಗಿ ನಡೆದಿದ್ದು, ಬ್ಯಾಂಕ್, ವಿಮಾ ವಿಭಾಗಗಳಲ್ಲಿಯೇ 20 ಲಕ್ಷಕ್ಕೂ ಅಧಿಕ ಕಾರ್ಮಿಕರು, ಉದ್ಯೋಗಿಗಳು ಭಾಗವಹಿಸಿದ್ದಾರೆ.

* ಬೆಂಗಳೂರು ಮೈಸೂರು ಮುಂತಾದ ಔದ್ಯೋಗಿಕ ಪ್ರದೇಶಗಳ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳು, ಖಾಸಗಿ ವಲಯದ ಪ್ರಮುಖ ಘಟಕಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದವು.

* ದೇಶದ ಎಲ್ಲಾ ಬಂದರುಗಳಲ್ಲೂ ಮುಷ್ಕರ ನಡೆದಿದೆ. ಪಶ್ಚಿಮ ಬಂಗಾಳದ ಹಲ್ದಿಯಾ ಬಂದರಿನಲ್ಲಿ ಆಳುವ ಪಕ್ಷವೇ ಗೂಂಡಾಗಿರಿ ನಡೆಸಿ ಸಿಕ್ಕಿಬಿದ್ದಿದೆ.

* ರಾಜ್ಯಸರ್ಕಾರಿ ನೌಕರರು, ಉದ್ಯೋಗಿಗಳು, ಶಿಕ್ಷಕರು, ರಾಜ್ಯ ಸಾರ್ವಜನಿಕ ವಲಯದ ಘಟಕಗಳು, ಮಂಡಳಿಗಳು, ನಿಗಮಗಳ 60ಲಕ್ಷಕ್ಕೂ ಅಧಿಕ ಉದ್ಯೋಗಿಗಳು ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಪಶ್ಚಿಮ ಬಂಗಾಲ ರಾಜ್ಯ ಸರ್ಕಾರವೇ ಮುಷ್ಕರದಲ್ಲಿ ಭಾಗವಹಿಸಿದ ನೌಕರರನ್ನು ಭಯಪಡಿಸಿ ಸೇವಾ ಸೌಲಭ್ಯಗಳಿಗೆ ಕತ್ತರಿ ಹಾಕುವ ಮತ್ತಿತರ ಬೆದರಿಕೆಗಳನ್ನು ಹಾಕಿದ್ದರೂ ಅದಕ್ಕೆ ನೌಕರರು ಜಗ್ಗದೆ ಭರ್ಜರಿಯಾಗಿಯೇ ಮುಷ್ಕರದಲ್ಲಿ ಭಾಗವಹಿಸಿದ್ದು ಗಮನಾರ್ಹವಾಗಿತ್ತು.

* ಪಶ್ಚಿಮ ಬಂಗಾಳವೂ ಸೇರಿದಂತೆ 2000ಕ್ಕೂ ಅಧಿಕ ಸಿಐಟಿಯು ಕಾರ್ಯಕರ್ತರನ್ನು ಬಂಧಿಸಲಾಗಿದೆ.

* ಕೇಂದ್ರ ಸರ್ಕಾರಿ ನೌಕರರು ಬಹು ದೊಡ್ಡ ಸಂಖ್ಯೆಯಲ್ಲಿ ರಾಷ್ಟ್ರಾದ್ಯಂತ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಕ್ಷಣಾ ಉತ್ಪಾದನಾ ವಲಯದ ಶೇ.80ರಷ್ಟು ನೌಕರರು ಭಾಗವಹಿಸಿದ್ದರು.

* ಸಾರ್ವಜನಿಕ ರಂಗದ ಪ್ರಮುಖ ರಕ್ಷಣಾ ಉತ್ಪಾದನಾ ಘಟಕಗಳಾದ ಬಿಇಎಲ್, ಎಚ್‌ಎಎಲ್‌ಗಳ ಬಹುತೇಕ ಎಲ್ಲಾ ಘಟಕಗಳು ಮುಷ್ಕರದಲ್ಲಿ ಭಾಗವಹಿದ್ದವು. ಬಿಎಚ್‌ಇಎಲ್‌ನ ತಿರುಚಿ, ರಾಣಿಪತ್, ಹೈದರಾಬಾದ್, ಬೆಂಗಳೂರು ನಾಲ್ಕು ಘಟಕಗಳು ಪೂರ್ಣವಾಗಿ ಮುಚ್ಚಿದ್ದವು.

* ಪ್ರಮುಖ ಒಂಭತ್ತು ಕಲ್ಲಿದ್ದಲು ಗಣಿ ಕಂಪನಿಗಳಾದ ಇಸಿಎಲ್, ಬಿಸಿಸಿಎಲ್, ಸಿಸಿಎಲ್, ಎಸ್‌ಇಸಿಸಿಲ್, ಎನ್‌ಸಿಎಲ್, ಸಿಎಮ್‌ಪಿಡಿಐಎಲ್ ಇತ್ಯಾದಿ ಕಂಪನಿಗಳು ಮುಷ್ಕರದಲ್ಲಿ ಸೇರಿಕೊಂಡಿದ್ದವು. ಝಾರ್ಖಂಡ್, ಛತ್ತೀಸ್‌ಘಡ್ ಮತ್ತು ಮಧ್ಯಪ್ರದೇಶದ ಕಲ್ಲಿದ್ದಲು ಹಾಗೂ ಕಲ್ಲಿದ್ದಲೇತರ ಗಣಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

* ಬಿಎಸ್‌ಎನ್‌ಎಲ್‌ನ ಶೇ.70ರಷ್ಟು ಕಾರ್ಮಿಕರು ಹಾಗೂ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು.

* ಶೇ.70 ರಷ್ಟು ಪೆಟ್ರೋಲಿಯಂ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ಪೂರ್ವ, ನೈಋತ್ಯ ಹಾಗೂ ದಕ್ಷಿಣ ಭಾಗದ ತೈಲ ಬಾವಿ ಕಾರ್ಮಿಕರು,ಸಂಸ್ಕರಣಾ ಮತ್ತು ಮಾರುಕಟ್ಟೆ ವಿಭಾಗದಲ್ಲಿ ಶೇ.70 ಮತ್ತು ಉತ್ತರ ಹಾಗೂ ಪಶ್ಚಿಮ ಭಾಗದಲ್ಲಿ ಮುಷ್ಕರ ಪರಿಣಾಮಕಾರಿಯಾಗಿ ಯಶಸ್ವಿಯಾಗಿ ನಡೆಯಿತು.

* ಉಕ್ಕು ಕೈಗಾರಿಕೆಯ ಪ್ರಮುಖ 8 ಉಕ್ಕು

– ಪುಟ 15ಕ್ಕೆ


ಮುಕ್ಕಾಲು ಸರ್ಕಾರ ಗೋಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ..... ಕಾಲು ಸರ್ಕಾರ ವಿಧಾನ ಸೌಧದಲ್ಲಿ.....

ಕರ್ನಾಟಕ ರಾಜ್ಯದ ಬಿಜೆಪಿ ದರ್ಬಾರ್‌ಗೆ ಸರಿ ಸುಮಾರು ನಾಲ್ಕು ವರ್ಷ ತುಂಬುವ ಹೊತ್ತಿಗೆ ಅದು ತನ್ನ ಸುವರ್ಣ ಯುಗವನ್ನು ಮುಟ್ಟುತ್ತಿರುವುದು ಬಹುತೇಕ ಸ್ಪಷ್ಟವಾಗಿದೆ.

ಒಂದು ಕಡೆ ರಾಜ್ಯದ ಮುಖ್ಯಮಂತ್ರಿ ಸದಾನಂದ ಗೌಡ ವಿಧಾನ ಸಭೆಯಲ್ಲಿ ಬಜೆಟ್ ಮಂಡಿಸಬೇಕಾದ ಹೊತ್ತಲ್ಲಿ ಅದೇ ಬಿಜೆಪಿಯ 119 ಶಾಸಕರು ಇರಬೇಕಾದ ಕಡೆ ಕೇವಲ 48 ಶಾಕರು ಮಾತ್ರ ಹಾಜರಾಗಿದ್ದಾರೆ. ಸು 65 ಶಾಸಕರು ತುಮಕೂರು ರಸ್ತೆಯ ಗೋಲ್ಡನ್ ಪಾಮ್ ಎಂಬ ರೆಸಾರ್ಟ್‌ನಲ್ಲಿ ಮಜ ಮಾಡುತ್ತಾ ಕುಳಿತುಕೊಂಡು ಸರ್ಕಾರವನ್ನು ಬ್ಲಾಕ್ ಮೇಲ್ ಮಾಡುತ್ತಾರೆ.


ರಾಜ್ಯಕ್ಕೆ ಬರದ ಬೆಂಕಿ ಬಿದ್ದಿದೆ. ಮಳೆಯಾಗಿ ಬಂದ ಕಡೆ ಫಸಲಿಗೆ ಸರಿಯಾದ ಬೆಲೆ ಇಲ್ಲ. ಒಂದು ಕಡೆ ಬಡ ರೈತರು, ಕೂಲಿಕಾರರು ಊರು ಬಿಟ್ಟು ಗುಳೆ ಹೋಗುತ್ತಿದ್ದಾರೆ. ಗಂಭೀರ ವಿದ್ಯುತ್ ಕೊರತೆ ಇದೆ. ಜನರಿಗೆ ರೇಷನ್ನು, ರೇಷನ್ ಕಾರ್ಡ್ ಸಿಗುತ್ತಿಲ್ಲ.

2 ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ನೀಡಿದ ಭರವಸೆಯನ್ನು ಸರ್ಕಾರ ಇಲ್ಲಿಯವರೆಗೆ ಈಡೇರಿಸಲಿಲ್ಲ. ಈಗಲಾದರೂ ಅದನ್ನು ಈಡೇರಿಸುವುದು ಹೇಗೆ ? ಚುನಾವಣೆ ಸಂದರ್ಭದಲ್ಲಿ ನಿರುದ್ಯೋಗಿ ಯುವಜನರಿಗೆ ಕೊಟ್ಟ ಭರವಸೆಯಂತೆ ನಿರುದ್ಯೋಗ ಭತ್ಯೆ ಕೊಡಲು ಏನು ಮಾಡಬೇಕು...ಮುಂತಾಗಿ ತಲೆಕೊಡಿಸಿಕೊಳ್ಳ ಬೇಕಾದ ಸಚಿವರು, ಆಳುವ ಪಕ್ಷದ ಶಾಸಕರು ಭ್ರಷ್ಟಾಚಾರದ ಹಲವಾರು ಗಂಭೀರ ಪ್ರಕರಣಗಳು,



ಮೊಕದ್ದಮೆಗಳು, ಆರೋಪಗಳಿದ್ದರೂ ಪರವಾಗಿಲ್ಲ. ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿ ಇಲ್ಲವಾದರೆ ನಾವು ಬಜೆಟ್ ಅಧಿವೇಶನದಲ್ಲಿ ಭಾಗವಹಿಸುವುದಿಲ್ಲ ಎಂದು ಧಮಕಿ ಹಾಕುತ್ತಾ ಭ್ರಷ್ಟತೆ, ಜಾತೀಯತೆಯನ್ನು ಮೆರೆಯುತ್ತಾರೆಂದಾದರೆ ಇದು ಬಿಜೆಪಿ ದರ್ಬಾರಿನ ಸುವರ್ಣ ಯುಗವೇ ಸರಿ.

ಹಿಂದೆ ಯಡಿಯೂರಪ್ಪನವರ ವಿರುದ್ಧ ಬಂಡಾಯವೆದ್ದು ಗಣಿ ಲೂಟಿಕೋರ ರೆಡ್ಡಿ ಗ್ಯಾಂಗಿನ ಬಾಲ ಹಿಡಿದುಕೊಂಡು ಹೈದರಾಬಾದಿನ ರೆಸಾರ್ಟ್‌ಗೆ ಹೋಗಿ ತಂಗಿದ್ದ ಶಾಸಕರ ಹಿಂಡು ಆ ರೆಸಾರ್ಟ್ ವಾಸ ಮತ್ತು ಹೈದರಾಬಾದ್ ಭೇಟಿಯು ರಾಜ್ಯದ ಅಭಿವೃದ್ಧಿಯ ಬಗೆಗೆ ಚರ್ಚೆ ಮಾಡುವುದಕ್ಕೆ ಹಾಗೂ ಗ್ರಾಮೀಣ ಪ್ರದೇಶಗಳನ್ನು ಅಧ್ಯಯನ ಮಾಡಿಕೊಂಡು ಬರುವುದಕ್ಕೆ ಅಂತ ಹೇಳಿಕೊಂಡಿತ್ತು. ಈಗ



ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ಗುಲಬರ್ಗಾ ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ, ರಾಜ್ಯ ಬಿಜೆಪಿ ಸರ್ಕಾರದ ಪಶು ಸಂಗೋಪನಾ ಸಚಿವ ರೇವು ನಾಯಕ ಬೆಳಮಗಿ ಈ ಸರಿ ಮೈ ಚಳಿ ಬಿಟ್ಟು ಇರುವ ಕಾರಣ ಇದ್ದ ಹಾಗೇ ಹೇಳಿಯೇ ಬಿಟ್ಟಿದ್ದಾರೆ. ಕ್ಷೇತ್ರದಲ್ಲಿದ್ದರೆ ಜನ ನೀರಿಲ್ಲ, ನೀರು ಕೊಡಿ. ಕರೆಂಟ್ ಇಲ್ಲ ಕರೆಂಟು ಕೊಡಿ ಅಂತೆಲ್ಲ ತಲೆ ತಿನ್ನುತ್ತಾರೆ. ಅದಕ್ಕೆ ಈಗ ರೆಸಾರ್ಟ್‌ಗೆ ಬಂದಿದ್ದೀವಿ. ಇಲ್ಲಿ ಯಾವ ಫೋನು ಇಲ್ಲ. ಆರಾಮಾಗಿದ್ದೀವಿ ಅಂತ ಅವರ ಅಂಬೋಣವಾಗಿದೆ. ಹೇಗಿದೆ ಬಿಜೆಪಿ ಸಚಿವರ ನೇರ ನಡೆ, ನುಡಿ. ?


ಕರ್ನಾಟಕ ರಾಜ್ಯದ ರಕ್ತಹೀನ ತಾಯಿ-ಮಕ್ಕಳಿಗೆ ಕೊಡುಗೆ ಒಂದು ಸಾವಿರ ಕೋಟಿ ರೂಪಾಯಿಗಳ ಹಗರಣ !!

ಕರ್ನಾಟಕ ರಾಜ್ಯದ ತಾಯಿ ಮತ್ತು ಮಕ್ಕಳ ಭಾಗ್ಯಕ್ಕೆ ಎಣೆಯೇ ಇಲ್ಲ. ಆಹಾ ! ಏನು ಸಮೃದ್ಧಿ !? ಏನು ಸಂಪತ್ತು. ಕೆ.ಜಿ.ಗಟ್ಟಲೆ ಚಿನ್ನ... ಕೋಟಿಗಳ ಮೌಲ್ಯದ ಮನೆಗಳ ಮಾಲಿಕತ್ವ, ಬ್ಯಾಂಕ್ ಖಾತೆಗಳಲ್ಲಿ ಲಕ್ಷ ಲಕ್ಷ ಮೊತ್ತದ ಹಣ... ಇದೆಲ್ಲಾ ಯಾರದ್ದು ಅಂದಿರ ? ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳದ್ದು. ಮಾಜಿ ನಿರ್ದೇಶಕಿ, ಡಾ. ಶಮ್ಲಾ ಇಕ್ಬಾಲ್, ಜಂಟಿ ನಿರ್ದೇಶಕಿ ಉಷಾ ಪಟ್ವಾರಿ, ಸಹಾಯಕ ನಿರ್ದೇಶಕ ಮುನಿರಾಜು ಅವರ ಮನೆಗಳಲ್ಲಿ ಲಭ್ಯವಾಗಿರುವ ಸಂಪತ್ತು ಇದು.

ರಾಯಚೂರು ಮತ್ತು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ತಾಯಂದಿರು, ಹಸುಗೂಸುಗಳು ಕನಿಷ್ಟ ಪೌಷ್ಟಿಕ ಆಹಾರವೂ ಇಲ್ಲದೇ ಮೈಯಲ್ಲಿ ರಕ್ತವಿಲ್ಲದೆ ದಯನೀಯ ಸ್ಥಿತಿಯಲ್ಲಿ ನರಳುತ್ತಿರುವ ಪರಿಸ್ಥಿತಿಯಲ್ಲಿ ಇಲಾಖೆಯ ಅಧಿಕಾರಿಗಳ ಬಳಿ ಏನು ಸಂಪತ್ತು. !!

ಕ್ರಿಸ್ಪಿ ಫ್ರೈಡ್ ಗ್ರಾವ್ ಎಂಬ - ತಮಿಳುನಾಡಿನಲ್ಲಿ ಸುಪ್ರಿಂ ಕೋರ್ಟ್‌ನ ನಿಷೇಧಕ್ಕೆ ಗುರಿಯಾದ ಖಾಸಗಿ ಸಂಸ್ಥೆಯೊಂದು ರಾಜ್ಯದಲ್ಲಿ ಅಕ್ರಮವಾಗಿ ಅಂಗನವಾಡಿಗಳಿಗೆ 'ಪೂರೈಕೆ ಮಾಡಿರುವ ಕಳಪೆ ಆಹಾರ, ರಾಜ್ಯದ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಜೀವನ ವೈಭವ, ನಮ್ಮ ತಾಯಿ ಮಕ್ಕಳ ತೂಕ ಹೀನ, ರಕ್ತಹೀನ ದುಸ್ಥಿತಿ ಇವುಗಳನ್ನು ಗಮನಿಸಿ. ಇವು ನೇರವಾಗಿ ಒಂದಕ್ಕೊಂದು ಸಂಬಂಧವಿದೆ.

ನಾವು ನೀವೇನೋ ಇದನ್ನೆಲ್ಲ ಗಮನಿಸಬಹುದು, ಏಕೆಂದರೆ ನಮಗೆ ನಿಮಗೆ ಅದಕ್ಕೆ ಸಮಯವಿದೆ. ಪಾಪ ಈ ವಿಷಯವನ್ನೆಲ್ಲಾ ಗಮನಿಸ ಬೇಕಾಗಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಿಗೆ ಸಮಯವೇ ಇರಲಿಲ್ಲ. ಸದನದ ಕಲಾಪ ನಡೆಯುತ್ತಿರುವಾಗಲೂ ಅವರಿಗೆ ನೀಲಿ ಚಿತ್ರಗಳನ್ನು ನೋಡಿ, ಅದನ್ನು ಅಧ್ಯಯನ ಮಾಡುವ ಆಸಕ್ತಿ. ಆಹಾ ಬಿಜೆಪಿ ದರ್ಬಾರ್‌ನಲ್ಲಿ ಯಾರ್ಯಾರು ಏನೇನು ಹೊಣೆಗಾರಿಕೆ ನಿರ್ವಹಿಸುತ್ತಿದ್ದಾರೆ ನೋಡಿ.



ಸದನದಲ್ಲಿ ಲೈಂಗಿಕ ಚಿತ್ರ ನೋಡುವುದು ಯಾವ ಮಹಾ ಅಪರಾಧ ರೀ !! ??

ಲಕ್ಷ್ಮಣ ಸವದಿ, ಕೃಷ್ಣ ಪಾಲೇಮಾರ್, ಸಿ.ಸಿ. ಪಾಟೀಲ ಈ ಮೂವರು ಬಿಜೆಪಿ ಸಚಿವರ ಹೆಸರುಗಳು ಈಗ ಲೋಕ ವಿಖ್ಯಾತ. ಯಾಕೆ ಅಂತ ನಿಮಗೆ ಗೊತ್ತೇ ಗೊತ್ತು. ರಾಜ್ಯದ ತೊಗರಿ ರೈತರ ಬವಣೆಗಳ ಬಗೆಗೆ ಸದನದಲ್ಲಿ ಚರ್ಚೆ ನಡೆಯುತ್ತಿರುವ ತಮ್ಮದೇ ಲೋಕದಲ್ಲಿ ಮೊಬೈಲ್‌ನೊಳಗಿನ ಲೈಂಗಿಕ ಚಿತ್ರ ನೋಡುತ್ತಾ ಆನಂದಿಸುತ್ತಿದ್ದರು. ನಂತರ ನಡೆದದ್ದೆಲ್ಲ ನಮಗೂ ನಿಮಗೂ ಗೊತ್ತಿದೆ. ಮೂವರು ಸಚಿವರು ರಾಜಿನಾಮೆ ಕೊಡಬೇಕಾಯ್ತು.

ಬಿಜೆಪಿ ಪಕ್ಷ, ಹಾಗು ವಿಧಾನ ಸಭೆಯ ಸ್ಪೀಕರ್ ಅವರುಗಳ ಕಡೆಯಿಂದ ಈ 'ಸನ್ಮಾನ್ಯ ಸಚಿವ'ರುಗಳ ಮೇಲೆ ಏನು ಕ್ರಮ ವಹಿಸಲಾಗುತ್ತದೋ ಎಂದು ಜನತೆ ಕುತೂಹಲದಿಂದ ಕಾದಿದ್ದರು. ಈ ಕುರಿತು ಸರ್ಕಾರ ರಚಿಸಿದ ಸದನ ಸಮಿತಿ ತನ್ನ ವಿಚಾರಣೆ ಮುಗಿಸಿ ಶಿಫಾರಸ್ಸು ಕೊಟ್ಟಿದೆ.

ಬಿಜೆಪಿ ಸರ್ಕಾರದ ಯೋಗ್ಯತೆಯನ್ನು ಬಲ್ಲವರು ಮೊದಲೇ ಹೇಳಿದಂತೆಯೇ ಆಗಿದೆ. ಕೃಷ್ಣ ಪಾಲೇಮಾರ್, ಸಿ.ಸಿ.ಪಾಟೀಲರು ನೀಲಿ ಚಿತ್ರವನ್ನೇ ನೋಡಿಲ್ಲ... ಲಕ್ಷ್ಮಣ ಸವದಿ ನೀಲಿ ಚಿತ್ರ ನೋಡಿದ್ದಾರೆ. ಅವರನ್ನು ಕರೆಸಿ ಒಮ್ಮೆ ಛೀಮಾರಿ ಹಾಕಿ ಸಾಕು ಅಂದಿದೆ ಸಮಿತಿ.

ಈ ಘನಂಧಾರಿ ಸಮಿತಿಯಲಿದ್ದವರಾದರು ಯಾರು ? ಎಲ್ಲ ದೇಶಭಕ್ತ ಬಿಜೆಪಿಗರೇ. ವಿರೋಧ ಪಕ್ಷದವರು ಸರ್ಕಾರದ ಧೋರಣೆ ಬಲ್ಲವರಾದ್ದರಿಂದ ಸಿಮಿತಿಯ ಕಲಾಪದಲ್ಲಿ ಪಾಲ್ಗೊಂಡಿಲ್ಲ. ಬಿಜೆಪಿ ದರ್ಬಾರ್‌ನಲ್ಲಿ ಆಡಳಿತದ ಗುಣಮಟ್ಟ ಹೇಗಿದೆಯೋ ಹಾಗೇ ಇದೆ, ನೀಲಿ ಚಿತ್ರ ವೀಕ್ಷಣೆ ಪ್ರಕರಣದ ತೀರ್ಪು ಕೂಡ. ಅಲ್ಲವೇ ?

ಬೆಲೆ ಏರಿಕೆಗೆ ಕಾರಣವಾಗುವ ಕೇಂದ್ರ ಬಜೆಟ್ ಪ್ರಸ್ತಾವಗಳನ್ನು ಹಿಮ್ಮೆಟ್ಟಿಸಿ.......

ಮಾರ್ಚ್ 17 ರಿಂದ 19, 2012 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯು ಈ ಕೆಳಕಂಡ ಹೇಳಿಕೆಯನ್ನು ನೀಡಿದೆ.

ಕೇಂದ್ರ ಸರ್ಕಾರ ಮಂಡಿಸಿದ 2012–13ರ ಕೇಂದ್ರ ಬಜೆಟ್ ಎಲ್ಲಾ ರೀತಿಯ ಬೆಲೆ ಏರಿಕೆಗೆ ಕಾರಣವಾಗಲಿದೆ ಹಾಗೂ ದುಡಿಯುವ ವರ್ಗದ ಮೇಲೆ ಅಪಾರವಾದ ಹೊರೆ ಹೊರಿಸಲಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತೀವ್ರವಾಗಿ ಟೀಕಿಸಿದೆ.

ಬಜೆಟ್‌ನಲ್ಲಿ ಅಬಕಾರಿ ಸುಂಕ ಹಾಗೂ ಸೇವಾ ತೆರಿಗೆಗಳನ್ನು ಏರಿಸಿರುವುದು ಹೆಚ್ಚುವರಿಯಾಗಿ 45,940 ಕೋಟಿ ರೂಗಳನ್ನು ಹೊರಿಸಿದೆ.

25,000 ಕೋಟಿ ರೂಗಳಷ್ಟು ಇಂಧನದ ಮೇಲಿನ ಸಹಾಯಧನವನ್ನು ಕಡಿತ ಮಾಡಿ ಇನ್ನಷ್ಟು ಇಂಧನಗಳ ದರ ಏರಿಕೆಗೆ ಕಾರಣವಾಗಲಿದೆ. ರಸಗೊಬ್ಬರ ಮೇಲಿನ 6,000 ಸಾವಿರ ಕೋಟಿಯಷ್ಟು ಸಹಾಯಧನ ಕಡಿತ ಮಾಡಿರುವುದು ಕೂಡ ಈಗಾಗಲೇ ಹೆಚ್ಚಾಗಿರುವ ರಸಗೊಬ್ಬರಗಳ ಬೆಲೆಯನ್ನು ಮತ್ತಷ್ಟು ಹೆಚ್ಚಿಸಲಿದ್ದು ಕೃಷಿಯನ್ನೇ ನಂಬಿರುವ ಕೋಟ್ಯಾಂತರ ರೈತರ ಜೀವನದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಅಭಿಪ್ರಾಯಪಟ್ಟಿದೆ.

ರೈಲ್ವೆ ಬಜೆಟ್‌ನಲ್ಲಿ ಎಲ್ಲಾ ದರ್ಜೆಯ ಪ್ರಯಾಣ ದರವನ್ನು ಏರಿಸಲಾಗಿದೆ. ನಿರ್ದಿಷ್ಟವಾಗಿ ದ್ವಿತೀಯ ದರ್ಜೆ ಹಾಗೂ ಸ್ಲೀಪರ್ ದರ್ಜೆಯ ಪ್ರಯಾಣ ದರಹೆಚ್ಚಳ ಮಾಡಿರುವುದು ಬಾರಿ ಹೊರೆಯಾಗಿದೆ. ಈ ಕೂಡಲೇ ಈ ದರ ಏರಿಕೆಯನ್ನು ವಾಪಸ್ ಪಡೆಯಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಕೇಂದ್ರ ಸಮಿತಿಯು ತನ್ನ ಎಲ್ಲ ಘಟಕಗಳು ಬಜೆಟ್ ಮೂಲಕ ಹೇರಲಾಗಿರುವ ಈ ಹೊಸ ಹೊರೆಯನ್ನು ಪ್ರತಿಭಟಿಸಬೇಕೆಂದು ಹಾಗೂ ಈ ಬಜೆಟ್ ಸೂಚನೆಗಳನ್ನು ಕಿತ್ತೊಗೆಯುವಂತಹ ಹೋರಾಟಕ್ಕೆ ಜನತೆಯನ್ನು ಅಣಿನೆರೆಸಬೇಕೆಂದು ಕರೆ ನೀಡಿದೆ.

ರೈಲ್ವೆ ಸಚಿವರ ರಾಜಿನಾಮೆ ನಾಟಕ

ರೈಲ್ವೆ ಬಜೆಟ್ ಮಂಡನೆ ನಂತರ ರೈಲ್ವೆ ಸಚಿವ ದಿನೇಶ್ ತ್ರಿವೇದಿ ಅವರ ರಾಜೀನಾಮೆ ಪ್ರಹಸನವು ಯುಪಿಎ ಸರ್ಕಾರ ಹಾಗೂ ತೃಣಮೂಲ ಕಾಂಗ್ರೆಸ್ ಮೇಲೆ ಇನ್ನಷ್ಟು ಕೆಟ್ಟ ಅಭಿಪ್ರಾಯಗಳನ್ನು ಹುಟ್ಟುಹಾಕಿದೆ. ಹತ್ತು ತಿಂಗಳ ಹಿಂದೆ ತಾವೇ ರೈಲ್ವೆ ಸಚಿವೆಯಾಗಿದ್ದ ವ್ಯಕ್ತಿಯೊಬ್ಬರಿಗೆ ರೈಲ್ವೆ ಇಲಾಖೆಯ ಆರ್ಥಿಕ ದುಸ್ಥಿತಿ ಹಾಗೂ ಸುರಕ್ಷತೆಯ ಪ್ರಶ್ನೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇಲಾಖೆಯ ಅಪಾಯಕಾರಿ ಪರಿಸ್ಥಿತಿಯ ಬಗೆಗೆ ಚಿಂತೆಯೇ ಇಲ್ಲ.

ವಿದೇಶಾಂಗ ನೀತಿ

ಫೆಬ್ರವರಿಯಲ್ಲಿ ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಂಡಿಸಲಾದ ಸಿರಿಯಾದ ವಿರುದ್ಧದ ಗೊತ್ತುವಳಿ ಪರವಾಗಿ ಭಾರತ ಮತ ಚಲಾಯಿಸಿದ್ದನ್ನು ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ. ಈ ಗೊತ್ತುವಳಿಯು ಲಿಬಿಯಾದಲ್ಲಿ ಆದಂತೆ (ಸಾಮ್ರಾಜ್ಯಶಾಹಿಗಳ ಮಿಲಿಟರಿ) ಮಧ್ಯಪ್ರವೇಶಕ್ಕೆ ಅವಕಾಶ ವನ್ನು ತೆರೆದಿಡುವಂತಾಹದ್ದಾಗಿತ್ತು. ರಷ್ಯಾ ಹಾಗೂ



ಕೃಪೆ: ದಿ ಹಿಂದು

ಚೀನಾಗಳು ಈ ಗೊತ್ತುವಳಿ ವಿರುದ್ಧ ವೀಟೋ ಚಲಾಯಿಸಿ ಗೊತ್ತುವಳಿಯನ್ನು ತಡೆದಿವೆ. ಅಮೆರೀಕಾ ಮತ್ತು ಅದರ ಮಿತ್ರಕೂಟಗಳು ಸಿರಿಯಾ ಸರ್ಕಾರವನ್ನು ಅಸ್ಥಿರಗೊಳಿಸಲು ಸಿರಿಯದೊಳಗಿನ ಆಂತರಿಕ ಗಲಭೆಗಳ ಪರಿಸ್ಥಿತಿಯನ್ನು ಬಳಸುವಲ್ಲಿ ಕ್ರಿಯಾಶೀಲವಾಗಿವೆ. ಭಾರತವು ಅಮೇರಿಕಾ ಹಾಗೂ ಇಸ್ರೇಲಿನ ಕುತಂತ್ರದಾಟವನ್ನು ಬೆಂಬಲಿಸುವವರ ಸಾಲಿನಲ್ಲಿ ನಿಲ್ಲಬಾರದು.

ಅಮೇರಿಕಾದ ಆಡಳಿತವು ಇರಾನ್‌ನಿಂದ ಇಂಧನ ಖರೀದಿ ಮಾಡುವುದನ್ನು ನಿಲ್ಲಿಸಬೇಕು ಹಾಗೂ ಆ ದೇಶದ ಜತೆ ಯಾವುದೇ ರೀತಿಯ ವ್ಯಾಪಾರ ಸಂಬಂಧಗಳನ್ನು ಇಟ್ಟುಕೊಳ್ಳ ಬಾರದೆಮದು ಒತ್ತಡ ಹೇರುತ್ತಿದೆ.

ಆದರೆ ಭಾರತ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಇರಾನ್‌ನಿಂದ ಮಾಡಿಕೊಂಡಿರುವ ತೈಲ ಆಮದು ಪ್ರಮಾಣದಲ್ಲಿ ಇಳಿಕೆಯಾಗಿದೆ. ಸರ್ಕಾರವು ಇರಾನ್‌ನಿಂದ ತೈಲ ಖರೀದಿಯನ್ನು ಮುಂದುವರಿಸಲಾಗುತ್ತದೆ ಎಂಬ ತನ್ನ ಘೋಷಿತ ಅಧಿಕೃತ ನೀತಿಯಂತೆ ನಡೆದುಕೊಂಡಿಲ್ಲ. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಹಿಲೇರಿ ಕ್ಲಿಂಟನ್ ಸಂಸದೀಯ ಸಮಿತಿ (ಕಾಂಗ್ರೆಷನಲ್ ಕಮಿಟಿ)ಎದುರು ಭಾರತ ಇರಾನ್‌ನಿಂದ ಇಂಧನ ಖರೀದಿಯನ್ನು ನಿಲ್ಲಿಸುವಂತೆ ಇನ್ನು ಹೆಚ್ಚಿನ ಮಟ್ಟದಲ್ಲಿ ಒತ್ತಡ ಹಾಕುವುದಾಗಿ ಹೇಳಿದ್ದಾರೆ. ಅಲ್ಲದೆ ಅಮೆರಿಕದ ಬೇಡಿಕೆಗೆ ಭಾರತವು ಸ್ಪಂದಿಸುತ್ತಿರುವುದನ್ನು ಅವರು ಗುರುತಿಸಿದ್ದಾರೆ.

ಯುಪಿಎ ಸರ್ಕಾರವು ಇರಾನ್‌ನೊಡನೆ ವ್ಯಾಪಾರ ಸಂಬಂಧಗಳನ್ನು ಮುಂದುವರೆಸಬೇಕು ಹಾಗೂ ದೇಶದ ಪ್ರಮುಖವಾದ ಹಿತಾಸಕ್ತಿಗೆ ವಿರುದ್ಧವಾಗಿರುವ ಆಮೇರಿಕಾದ ಒತ್ತಡಗಳನ್ನು ಪ್ರತಿರೋಧಿಸಬೇಕು.

ಶ್ರೀಲಂಕಾ

ಕೇಂದ್ರ ಸಮಿತಿಯು ಶ್ರೀಲಂಕಾದಲ್ಲಿ ನಡೆದ ಅಂತಿಮ ಹಂತದ ಸಂಘರ್ಷದ ಸಂದರ್ಭದಲ್ಲಿ ನಡೆದ ನಾಗರಿಕರ ಹತ್ಯೆ ಹಾಗೂ ಗಂಭೀರ ಮಾನವ ಹಕ್ಕು ಉಲ್ಲಂಘನೆ ಕುರಿತ ತನಿಖೆಯಲ್ಲಿ ಹೆಚ್ಚೇನು ಪ್ರಗತಿ ಕಾಣದಿರುವ ಕುರಿತು ತನ್ನ ಕಳವಳ ವ್ಯಕ್ತಪಡಿಸಿದೆ.

ಶ್ರೀಲಂಕಾ ಸರ್ಕಾರವು ತಮಿಳು ಭಾಷಿಕ ಪ್ರದೇಶಗಳಿಗೆ ಸ್ವಾಯತ್ತತೆ ಹಾಗೂ ಹಂತ ಹಂತವಾಗಿ ಅಧಿಕಾರ ನೀಡುವ ನಿಟ್ಟಿನಲ್ಲಿ ರಾಜಕೀಯ ಪರಿಹಾರ ಕಂಡುಹಿಡಿಯುವ ದಿಕ್ಕಿನಲ್ಲಿ ಯಾವುದೇ ಉಪಯುಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ. ಭಾರತ ಸರ್ಕಾರವು 'ಪಾಠ ಕಲಿಯುವಿಕೆ ಮತ್ತು ಮತ್ತು ಪುನರ್ವಸತಿ ಆಯೋಗ'ವು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಸಮಿತಿಗೆ ಸಲ್ಲಿಸಿರುವ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವಂತೆ ಶ್ರೀಲಂಕ ಸರ್ಕಾರದ ಮೇಲೆ ಒತ್ತಡ ಹೇರಬೇಕು. ದೌರ್ಜನ್ಯಗಳ ಆರೋಪಗಳ ಕುರಿತು ಸ್ವತಂತ್ರವಾದ ಮತ್ತು ವಿಶ್ವಾಸಾರ್ಹವಾದ ತನಿಖೆ ನಡೆಯುವುದು ಅವಶ್ಯಕವಾಗಿದೆ ಮತ್ತು ದೌರ್ಜನ್ಯಗಳಿಗೆ ಹೊಣೆಗಾರರಾದವರನ್ನು ಶಿಕ್ಷಿಸಬೇಕಾಗಿದೆ.

ಪಕ್ಷದ ಮಹಾಧಿವೇಶನ

ಸಿಪಿಐ(ಎಂ)ನ 19ನೇ ಪಕ್ಷದ ಮಹಾ ಅಧಿವೇಶನದ ನಂತರದ ರಾಜಕೀಯ ಸಂಘಟನಾತ್ಮಕ ಕೆಲಸಗಳನ್ನು ವಿಮರ್ಶಿಸುವ- 20ನೇ ಮಹಾಧಿವೇಶನದಲ್ಲಿ ಮಂಡಿಸಲಾಗುವ ರಾಜಕೀಯ-ಸಂಘಟನಾತ್ಮಕ ವರದಿಯನ್ನು ಕೇಂದ್ರ ಸಮಿತಿಯು ಅಂತಿಮಗೊಳಿಸಿದೆ.

ಇಂದು ಇಂದಿಗೆ– ನಾಳೆ ನಾಳೆಗೆ


ಪುಟ 9 ರಿಂದ

ತರಲು ಸಾಧ್ಯವಾಗುವಂತೆ ಸರಕಾರ ಯೋಜನಾ ಆಯೋಗದ ಮೂಲಕ ಒಂದು ಬೃಹತ್ ಸ್ವರೂಪದ ವಂಚನೆಯನ್ನು ಮಾಡಿದೆ, ಬಡತನದ ನಿರೂಪಣೆಯನ್ನು ಬದಲಿಸಿ ಬಡತನದ ರೇಖೆಯ ಕೆಳಗೆ(ಬಿಪಿಎಲ್) ಬದುಕಿರುವವರ ಸಂಖ್ಯೆಯಲ್ಲಿ ಗಮನಾರ್ಹ ಇಳಿಕೆಯಾಗಿದೆಯೆಂದು ತೋರಿಸಿದೆ. ಸಬ್ಸಿಡಿಗಳನ್ನು ಸುಮಾರಾಗಿ ಬಿಪಿಎಲ್ ವಿಭಾಗಗಳಿಗೇ ಸೀಮಿತಗೊಳಿಸಿರುವುದರಿಂದ ಸಬ್ಸಿಡಿಗಳನ್ನು ತೀವ್ರವಾಗಿ ಇಳಿಸಲು ಬಡತನದ ರೇಖೆಯ ಕೆಳಗಿರುವ ಜನಸಂಖ್ಯೆಯನನೇ ಇಳಿಸುವುದು ಅದಕ್ಕೆ ಅಗತ್ಯವಾಗಿದೆ.

ಇದು, ನವ-ಉದಾರವಾದಿ ಆರ್ಥಿಕ ಸುಧಾರಣೆಗಳು ಒಂದೆಡೆ ಜನರಲ್ಲಿ ಆರ್ಥಿಕ ಅಭದ್ರತೆಯ ಭಾವನೆಯನ್ನು ಹೆಚ್ಚಿಸಿ, ಪ್ರತಿ ಹೆಜ್ಜೆಯಲ್ಲೂ ಅವರ ಜೀವನಾಧಾರಗಳಿಗೆ ಸಂಚಕಾರ ತರುತ್ತಿದ್ದರೂ, ಇಂತಹ ಒಂದು ಪ್ರಕ್ರಿಯೆಯಲ್ಲಿ ಸೂಪರ್ ಲಾಭಗಳನ್ನು ಉಬ್ಬಿಸುತ್ತಲೇ ಹೋಗುತ್ತಿದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡುತ್ತದೆ. ಇದೇ ರೀತಿಯಲ್ಲಿ ಯುಪಿಎ-2 ಸರಕಾರದ ಈ ಅಭದ್ರತೆ ಕೂಡ ಇನ್ನಷ್ಟು ಸುಧಾರಣೆಗಳಿಗೆ ಹಾದಿ ಮಾಡಿಕೊಟ್ಟು ಜನರ ಮೇಲೆ ಆರ್ಥಿಕ ಹೊರೆಗಳನ್ನು ಹೇರುತ್ತಲೇ, ಅಂತರ್ರಾಷ್ಟ್ರೀಯ ಮತ್ತು ದೇಶೀ ಬಂಡವಾಳಕ್ಕೆ ಇನ್ನಷ್ಟು, ಮತ್ತಷ್ಟು ಲಾಭಗಳನ್ನು ಉತ್ಪತ್ತಿ ಮಾಡುತ್ತದೆ. ಹೀಗೆ ಈ ಯುಪಿಎ-2 ಸರಕಾರ ಮೋಸದ ವ್ಯವಹಾರಗಳನ್ನು ಮತ್ತು ರಾಜಿಗಳನ್ನು ಕುದುರಿಸಿಕೊಂಡು ತನ್ನ ಅಸ್ತಿತ್ವವನ್ನು ಮುಂದುವರೆಸುವ, ಮತ್ತು ಆಮೂಲಕ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಅಜೆಂಡಾವನ್ನು ಇನ್ನಷ್ಟು ಅನಾವರಣಗೊಳಿಸಲು ಅನುಕೂಲ ಮಾಡಿಕೊಳ್ಳುವ ಹಾದಿಯಲ್ಲೇ ಮುಂದುವರೆಯುವಂತೆ ಕಾಣುತ್ತದೆ.

ಇದು ನಮ್ಮ ಬಹುಪಾಲು ದುಡಿಯುವ ಜನಗಳ ಬದುಕನ್ನು ಮತ್ತಷ್ಟು ಶೋಚನೀಯಗೊಳಿಸುವುದಂತೂ ಖಂಡಿತ. ಈ ಸರಕಾರ ತನ್ನ ಇಂತಹ ಧೋರಣೆಯ ದಿಕ್ಕನ್ನು ಬದಲಿಸುವಂತೆ ಮಾಡಬೇಕಾದರೆ ಅದು ದೊಡ್ಡ ಪ್ರಮಾಣದಲ್ಲಿ ಅಣಿನೆರೆಯುವ ಜನಗಳ ಶಕ್ತಿಯಿಂದ ಮಾತ್ರ ಸಾಧ್ಯ. ಆಗ ಮಾತ್ರವೇ ಜನತೆಗೆ ಸ್ವಲ್ಪ ಮಟ್ಟಿನ ಪರಿಹಾರ ಒದಗಲು ಸಾಧ್ಯ ಎಂಬುದು ದಿನೇ-ದಿನೇ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.


ಮತ್ತೊಮ್ಮೆ ಬಡತನದ ಅಂಕಿ-ಅಂಶದಲ್ಲಿ ಮೋಸ, ಅಪ್ರಾಮಾಣಿಕತೆ



ವೇದರಾಜ ಎನ್.ಕೆ.

'ದಯಾಮಯಿಯಾಗಲು ನಾನು ಕ್ರೂರಿಯಾಗಬೇಕಾಗುತ್ತದೆ' ಎಂದು ಹೇಳುತ್ತಾ ಯುಪಿಎ-2 ಸರಕಾರದ ಹಣಕಾಸು ಮಂತ್ರಿಗಳು ಮಂಡಿಸಿರುವ ಬಜೆಟ್ ವಾಸ್ತವವಾಗಿ ಕಾರ್ಮಿಕರಿಗೆ ಕ್ರೂರಿಯಾಗಿ ಶ್ರೀಮಂತರಿಗೆ ದಯಾಮಯಿಯಾಗಿದೆ ಎಂಬುದು ಅದನ್ನು ವಿಶ್ಲೇಷಿಸಿದಾಗ ಕಂಡು ಬರುವ ಸತ್ಯ(ಈ ಬಗ್ಗೆ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿಕೆಯನ್ನು ನೋಡಿ). ಇದಕ್ಕೆ ಮೊದಲು ಸಲ್ಲಿಸಿದ ರೈಲ್ವೇ ಬಜೆಟಿನಲ್ಲಿಯೂ ಬಡವರ ಮೇಲೆ ಈ ಕ್ರೂರತನವನ್ನು ತನ್ನದೇ ಪಕ್ಷದ ರೈಲ್ವೆ ಮಂತ್ರಿಗಳು ಪ್ರಕಟಿಸಿದಾಗ 'ಕೂಗಾಡಿದ' ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆಗೆ ಹಣಕಾಸು ಮಂತ್ರಿಗಳ ಬಜೆಟ್ ಕ್ರೂರತನ 'ಸಹನೀಯ'ವಾಗಿ ಕಂಡಿದೆ. ಏಕೆಂದರೆ, ಅವರ ಒತ್ತಡಕ್ಕೆ ತಲೆಬಾಗಿದ ಯುಪಿಎ-2 ಪ್ರಧಾನಿಗಳು ಒಬ್ಬ ಟಿಎಂಸಿ ರೈಲ್ವೆ ಮಂತ್ರಿಯ ರಾಜೀನಾಮೆ ಸ್ವೀಕರಿಸಿ, ಇನ್ನೊಬ್ಬ ಟಿಎಂಸಿ ರೈಲ್ವೆ ಮಂತ್ರಿಯನ್ನು ನೇಮಿಸಿದ್ದಾರೆ. ಆದರೆ ರಾಜೀನಾಮೆ ನೀಡಿದ ರೈಲ್ವೆ ಮಂತ್ರಿಗಳು, ರೈಲು ದರ ಏರಿಕೆಗಳು ತನ್ನ ಪಕ್ಷದ ಮುಖ್ಯಸ್ಥೆಗೆ ಮೊದಲೇ ಗೊತ್ತಿತ್ತು ಎಂದು ಹೇಳಿ ಯುಪಿಎ-2 ಕೂಟದ ಮೋಸದಾಟವನ್ನು ಪ್ರದರ್ಶಿಸಿದ್ದಾರೆ. ಆದರೂ ಯಾವುದೇ ಮುಜುಗರವಿಲ್ಲದೆ ಈ ಆಳುವ ಕೂಟ ತನ್ನ ಮೋಸದಾಟವನ್ನು ಮುಂದುವರೆಸಿದೆ.

ಕೆಲವೇ ತಿಂಗಳ ಹಿಂದೆ, ಸಪ್ಟಂಬರ್ 2011ರಲ್ಲಿ ಸುಪ್ರಿಂ ಕೋರ್ಟ್ ಎದುರು ಬಡತನ ರೇಖೆಯ ಅಸಂಬದ್ಧ ಲೆಕ್ಕಾಚಾರವನ್ನು ಸಲ್ಲಿಸಿ ದೇಶಾದ್ಯಂತ ಛೀ-ಥೂ ಅನ್ನಿಸಿಕೊಂಡ ಯುಪಿಎ-2 ಸರಕಾರದ ನಿವಾರಿಸುವ ಸರಕಾರದ ಕಲ್ಯಾಣ ಯೋಜನೆಗಳಿಂದ ಹೊರಗಿಡುತ್ತಿರುವುದನ್ನು ಸಮರ್ಥಿಸಿಕೊಳ್ಳಲು ಮತ್ತೆ-ಮತ್ತೆ ಪ್ರಯತ್ನಿಸುತ್ತಿರುವ ಯೋಜನಾ ಆಯೋಗ ಬಡತನ ನಿವಾರಣೆಯ ಬದಲು ಬಡತನ ಕಾಣದಂತೆ ಮಾಡುವುದರಲ್ಲಿ ತೊಡಗಿದೆ, ಇಂತಹ ದುರುದ್ದೇಶಪೂರ್ಣ ಪ್ರಯತ್ನಗಳು ವಂಚಿತ ಮತ್ತು ಅಂಚಿಗೆ ತಳ್ಳಲ್ಪಟ್ಟ ಮಹಿಳೆಯರನ್ನು ವಿಶೇಷವಾಗಿ ತಟ್ಟುತ್ತಿದ್ದು ಅವರನ್ನು ಇನ್ನಷ್ಟು ವಂಚಿತರನ್ನಾಗಿಸುತ್ತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಇದನ್ನು ತೀವ್ರವಾಗಿ ಖಂಡಿಸಿದೆ.



ಕೃಪೆ: ದಿ ಹಿಂದು

ಇತ್ತೀಚೆಗೆ ಪ್ರಕಟಗೊಂಡಿರುವ ಭಾರತದ ಜನಗಣತಿಯ ಭಾಗವಾಗಿ ನಡೆದ 'ಕುಟುಂಬ ಸೌಲಭ್ಯಗಳು ಮತ್ತು ಆಸ್ತಿಗಳ ಗಣತಿ'ಯ ಅಂಕಿ-ಅಂಶಗಳು, ಈ ಅಂಕಣದಲ್ಲಿ ಈಗಾಗಲೇ ಗಮನಿಸಿರುವಂತೆ, ದೇಶದ ಬಹುಪಾಲು ಜನಗಳ ಶೋಚನೀಯ ಪರಿಸ್ಥಿತಿಗಳನ್ನು ಬಯಲಿಗೆಳೆದಿರುವ ಸಂದರ್ಭದಲ್ಲೇ ಬಂದಿರುವ ಯೋಜನಾ ಆಯೋಗದ ಈ ಅಸಂಬದ್ಧ ಲೆಕ್ಕಾಚಾರ ನವ-ಉದಾರವಾದವನ್ನು ಆತುಕೊಂಡಿರುವ ಯುಪಿಎ-2 ಸರಕಾರದ ಅಮಾನವೀಯತೆ ಮತ್ತು ಮೋಸವನ್ನು ಮತ್ತೊಮ್ಮೆ ಬಯಲಿಗೆಳೆದಿದೆ.

ಇನ್ನೊಂದು ಆಘಾತಕಾರಿ ಸಂಗತಿಯೆಂದರೆ, ಹಸಿವಿನ ರೇಖೆಯನ್ನು ಬಡತನದ ರೇಖೆ ಎಂದು ಯೋಜನಾ ಆಯೋಗ ಈಗ ಅದನ್ನು ಇನ್ನಷ್ಟು ಕೆಳಗಿಳಿಸಿ ವಿಪರೀತ ಬೆಲೆಯೇರಿಕೆಗಳ ನಡುವೆಯೂ ದೇಶದಲ್ಲಿ ಬಡತನ 7.3 ಶೇ.ದಷ್ಟು ಇಳಿದಿದೆ ಎಂದು ಯಾವುದೇ ನಾಚಿಕೆಯಿಲ್ಲದೆ ಬೆನ್ನು ತಟ್ಟಿಕೊಂಡಿದೆ. ಸಹಜವಾಗಿಯೇ ಸಂಸತ್ತಿನಲ್ಲೂ ಸೇರಿದಂತೆ ಎಲ್ಲೆಡೆಯಿಂದಲೂ ಇದರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಗೊಂಡಿಡೆ.

ಸುಪ್ರಿಂ ಕೋರ್ಟಿನ ಎದುರು ಸಲ್ಲಿಸಿದ ಅಫಿಡವಿಟ್‌ನಲ್ಲಿ ನಗರಗಳಲ್ಲಿ ದಿನಕ್ಕೆ ತಲಾ 32ರೂ. ಮತ್ತು ಗ್ರಾಮಾಂತರದಲ್ಲಿ 26ರೂ. ಖರ್ಚು ಮಾಡಬಲ್ಲವರು ಬಡವರಲ್ಲ ಎಂದಿದ್ದ ಯೋಜನಾ ಆಯೋಗ, ಈಗ ಈ ಅಸಂಬದ್ಧ ಸಂಖ್ಯೆಗಳನ್ನು ಅನುಕ್ರಮವಾಗಿ ರೂ.28.65 ಮತ್ತು ರೂ.22.40 ಕ್ಕೆ ಇಳಿಸಿ ದೇಶದಲ್ಲಿ ಬಡತನ ಇಳಿಯುತ್ತಿದೆ ಎಂದು ಸಾರಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿರುವಂತೆ, ದೇಶದ ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿರುವ ಒಂದು ಸಂಸ್ಥೆ ಇಂತಹ ಅಸಂಬದ್ಧ ಅಂಕಿ-ಅಂಶಗಳನ್ನು ನೀಡುತ್ತದೆ ಎಂಬುದು ನಾಚಿಕೆಗೇಡಿತನದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ದೊಡ್ಡ ಸಂಖ್ಯೆಯಲ್ಲಿ ಜನರನ್ನು ಬಡತನ ಬಿಂಬಿಸುವ ಇಂತಹ ಅಸಂಬದ್ಧ ಅಂಕಿ-ಅಂಶಗಳ ಪ್ರಕಾರವೂ, ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ದಟ್ಟ-ದಾರಿದ್ರ್ಯದಲ್ಲಿ ತೊಳಲಾಡುತ್ತಿದ್ದಾರೆ; ಉತ್ತರ ಪ್ರದೇಶ, ಝಾರ್ಖಂಡ್, ಮಧ್ಯಪ್ರದೇಶ ಮತ್ತು ಒಡಿಶಾದಲ್ಲಿ 37-39ಶೇ. ಜನ ಇಂತಹ ಬಡತನದ ರೇಖೆಯ ಕೆಳಗಿದ್ದಾರೆ; ಬಿಹಾರ ಮತ್ತು ಛತ್ತೀಸಗಡದಲ್ಲಿ ಇದು 50 ಶೇ. ದಷ್ಟಿದೆ; ಅಸ್ಸಾಂ, ಮಣಿಪುರ ಮತ್ತು ನಾಗಾಲ್ಯಾಂಡಿನಲ್ಲಿ ಇದರ ಪ್ರಕಾರವೂ ಬಡತನ ಏರುತ್ತಿದೆ ಎಂಬ ಸಂಗತಿಯತ್ತ ಗಮನ ಸೆಳೆದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೋ ಇದು ಯುಪಿಎ-2 ಸರಕಾರದ 'ಎಲ್ಲರನ್ನು ಒಳಗೊಳ್ಳುವ' ಅಭಿವೃದ್ಧಿಯ ಮೋಸವನ್ನು ಬಯಲಿಗೆಳೆಯುತ್ತಿದೆ ಎಂದು ಟೀಕಿಸಿದೆ.

ವಾಸ್ತವವಾಗಿ ಯೋಜನಾ ಆಯೋಗದ ಈ ಬಡತನದ ಲೆಕ್ಕಾಚಾರ ಕಣ್ಣಿಗೆ ಹೊಡೆಯುವಂತಿರುವ ಅಸಮಾನತೆಗಳನ್ನು ಮತ್ತು ಹೆಚ್ಚುತ್ತಿರುವ ಬಡತನವನ್ನು ಮರೆಮಾಚುವ ಒಂದು ಅಪ್ರಾಮಾಣಿಕ ಪ್ರಯತ್ನ ಎಂದು ಸಿಪಿಐ(ಎಂ) ಹೇಳಿದೆ. ಇಂತಹ ಮೋಸದ ಲೆಕ್ಕಾಚಾರವನ್ನು ಬಡವರಿಗೆ ಬಿಪಿಎಲ್ ಕಾರ್ಡುಗಳನ್ನು ನಿರಾಕರಿಸಲಾಗಲೀ, ರಾಜ್ಯಗಳಿಗೆ ಕಲ್ಯಾಣ ಕ್ರಮಗಳಿಗೆ ಹಣ ಒದಗಿಸುವಲ್ಲಿ ಮಾನದಂಡವಾಗಿಯಾಗಲೀ ಬಳಸುವುದಿಲ್ಲ ಎಂದು

ಪುಟ 15 ಕ್ಕೆ

ಕಾರ್ಮಿಕರ ಮೇಲೆ ಯುಪಿಎ-2 ಕ್ರೌರ್ಯ : ಭವಿಷ್ಯನಿಧಿ ಬಡ್ಡಿದರದಲ್ಲಿ ಭಾರೀ ಕಡಿತ

ಕಾರ್ಮಿಕರ ಭವಿಷ್ಯ ನಿಧಿಯ ನಿರ್ವಹಣೆಗಾಗಿ ರಚಿಸಿರುವ 'ಕೇಂದ್ರೀಯ ಟ್ರಸ್ಟಿಗಳ ಮಂಡಳಿ' ತಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುಗುಣವಾಗಿ ರಚಿಸಿದ ಒಂದು ತ್ರಿಪಕ್ಷೀಯ ವ್ಯವಸ್ಥೆ. ಆದರೆ ಯುಪಿಎ-2 ಸರಕಾರ ಈ ತ್ರಿಪಕ್ಷೀಯತೆಗೆ ಮತ್ತೊಂದು ಹೊಡೆತ ನೀಡಿದೆ. ಈ ಮಂಡಳಿಯಲ್ಲಿ ಕಾರ್ಮಿಕರ ಪ್ರತಿನಿಧಿಗಳೆಲ್ಲರೂ, ಆಳುವ ಕೂಟಕ್ಕೆ ಸೇರಿದವರು ಕೂಡ, ಭವಿಷ್ಯ ನಿಧಿಯ ಮೇಲಿನ ಬಡ್ಡಿ ದರವನ್ನು 9.5 ಶೇ.ದಿಂದ ಕೆಳಗಿಳಿಸಬಾರದು ಎಂದು ಸರ್ವಸಮ್ಮತಿಯಿಂದ ಆಗ್ರಹಿಸಿದರೂ ಲೆಕ್ಕಿಸದೆ, ಮಾಲಕರ ಜತೆ ಶಾಮೀಲಾಗಿ 8.25ಶೇ.ಕ್ಕೆ ಇಳಿಸಿ ಕಾರ್ಮಿಕರ ಬಗ್ಗೆ ತನ್ನ ಕ್ರೂರತನವನ್ನು ಪ್ರದರ್ಶಿಸಿದೆ. ದೇಶದ ಹಣಕಾಸು ಮಂತ್ರಿಗಳು 'ದಯಾಮಯಿಯಾಗಲು ನಾನು ಕ್ರೂರಿಯಾಗಬೇಕಿದೆ' ಎಂದು ಬಜೆಟಿನಲ್ಲಿ ಉದ್ಗರಿಸುವ ಮೊದಲೇ ತಮ್ಮ ಸರಕಾರ ಯಾರ ವಿಷಯದಲ್ಲಿ ಕ್ರೂರಿಯಾಗಿರಬೇಕೆಂದಿದೆ, ಯಾರಿಗೆ ದಯಾಮಯಿಯಾಗಿರಬೇಕೆಂದಿದೆ ಎಂಬುದರ ಸಂಕೇತ ನೀಡಿದ್ದರು. ಅದನ್ನು ತಮ್ಮ ಬಜೆಟಿನಲ್ಲಿಯೂ ಚಾಚೂ ತಪ್ಪದೆ ಪಾಲಿಸಿರುವುದು ಈಗ ಜಗಜ್ಜಾಹೀರಾಗಿದೆ.

ರಿಝರ್ವ್ ಬ್ಯಾಂಕ್ ಕಳೆದ ಒಂದು ವರ್ಷದಿಂದ ಹಣದುಬ್ಬರ ತಡೆ ಕ್ರಮವಾಗಿ ಬ್ಯಾಂಕ್ ಬಡ್ಡಿ ದರಗಳನ್ನು ಏರಿಸುತ್ತಿರುವ ಸಂದರ್ಭದಲ್ಲಿ 1.25ಶೇ. ಇಳಿಕೆ ಕಾರ್ಮಿಕರ ಮೇಲೆ ಯುಪಿಎ-2 ಸರಕಾರ ದೌರ್ಜನ್ಯವಲ್ಲದೆ ಮತ್ತೇನು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಸಂಸತ್ತಿನಲ್ಲಿ ಕಾರ್ಮಿಕರ ಆಕ್ರೋಶಕ್ಕೆ ದನಿ ನೀಡಿದ್ದಾರೆ. ಇದು ದೇಶದ ಸಂಪತ್ತನ್ನು ಸೃಷ್ಟಿಸುವ, ಸರಕಾರದ ಖಜಾನೆಗೆ ಆದಾಯಗಳನ್ನು, ಮತ್ತು ಮಾಲಕರಿಗೆ ಲಾಭಗಳನ್ನು ಉತ್ಪನ್ನ ಮಾಡುವ ದೇಶದ ಐದು ಕೋಟಿಗೂ ಹೆಚ್ಚು ಕಾರ್ಮಿಕರ ವಿರುದ್ಧ ಕೈಗೊಂಡಿರುವ ಅತ್ಯಂತ ದುಷ್ಟ ಮತ್ತು ಏಕಪಕ್ಷೀಯ ಕ್ರಮ ಎಂದು ಅವರು ಖಂಡಿಸಿದ್ದಾರೆ.

ವಾಸ್ತವವಾಗಿ ಕಾರ್ಮಿಕರ ಭವಿಷ್ಯ ನಿಧಿ 20-25 ವರ್ಷಗಳಿಗಿಂತಲೂ ದೀರ್ಘಾವಧಿಯ ಠೇವಣಿಯಾದ್ದರಿಂದ, ಬಂಡವಾಳಶಾಹಿ ವ್ಯವಸ್ಥೆಯ ಬ್ಯಾಂಕ್ ನಿಯಮಗಳ ಪ್ರಕಾರವೂ ಬೇರೆ ಎಲ್ಲಕ್ಕಿಂತ ಹೆಚ್ಚಿನ ಬಡ್ಡಿದರಕ್ಕೆ ಅರ್ಹವಾಗಿದೆ. ಅದರ ಬದಲು ಅದರಲ್ಲಿ ಭಾರೀ ಕಡಿತ ಮಾಡಿರುವುದು ಕಾರ್ಮಿಕರ ಬೆವರಿನ ಹಣದ ಬಗ್ಗೆ ಯುಪಿಎ-2 ಸರಕಾರದ ದಿವ್ಯ ನಿರ್ಲಕ್ಷ್ಯವನ್ನು ತೋರಿದೆ ಎಂದು ಕಾರ್ಮಿಕ ಮುಖಂಡರು ಖೇದ, ಆಕ್ರೋಶ ವ್ಯಕ್ತಪಡಿಸಿದ್ದಾರೆ ಮತ್ತು ಈ ಕಾರ್ಮಿಕ-ವಿರೋಧಿ ಕ್ರಮವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ನೀರಾವರಿ ಯೋಜನೆಗಳ ಜಾರಿಗಾಗಿ.....

ಪುಟ 5 ರಿಂದ

ಹೆಚ್ಚಾಗುತ್ತದೆ.

1,52,00,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಈ ಯೋಜನೆಯನ್ನು ಜಾರಿಗೆ ತರಲು 22 ಸಾವಿರ ಕೋಟಿ ರೂ ಅಗತ್ಯವಿದೆ. ಮತ್ತೊಂದೆಡೆ ಈ ದೇಶದ ಸ್ವಯಂಸೇವಾ ಸಂಸ್ಥೆಗಳಿಗೆ (ಎನ್‌ಜಿಒ) ವರ್ಷಕ್ಕೆ ವಿದೇಶದಿಂದ 16 ಸಾವಿರ ಕೋಟಿ ಬರುತ್ತಿದೆ. ಮತ್ತು ಕೇಂದ್ರ ಸರ್ಕಾರದಿಂದ 6 ಸಾವಿರ ಕೋಟಿ ರೂಗಳನ್ನು ಎನ್.ಜಿ.ಓ.ಗಳಿಗೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಒಂದು ಎಕರೆಗಿಂತ ಕಡಿಮೆ ಭೂಮಿಯಿರುವ 52,31,000 ಕುಟುಂಬಗಳಿವೆ, ಒಂದರಿಂದ ಎರಡು ಎಕರೆ ಭೂಮಿಯಿರುವ 4,22,000 ಕುಟುಂಬಗಳಿದ್ದು, ಭೂರಹಿತ ಕೃಷಿ ಕೂಲಿಕಾರರಿಗೆ ಸರ್ಕಾರಿ ಭೂಮಿಯನ್ನು ಹಂಚಿಕೆ ಮಾಡಿ ಅವರಿಗೆಲ್ಲ ನೀರಾವರಿ ಯೋಜನೆ ಮೂಲಕ ನೀರನ್ನು ಒದಗಿಸಿ ಕೃಷಿ ಚಟುವಟಿಕೆಗಳನ್ನು ಆರಂಭಿಸಿದರೆ ಬಡತನ ಕ್ರಮೇಣ ಕಡಿಮೆಯಾಗುತ್ತದೆ. 9 ಜಿಲ್ಲೆಗಳ 44 ತಾಲ್ಲೂಕುಗಳಿಗೆ ಸರ್ಕಾರ 33 ಯೋಜನೆಗಳ ಮೂಲಕ ಶೇಕಡಾ 30 ರಷ್ಟು ಪ್ರದೇಶಕ್ಕೆ ಮಾತ್ರ ನೀರೊದಗಿಸುತ್ತಿದೆ. ಆದರೆ ಪರಮಶಿವಯ್ಯ ವರದಿಯ ಕೇವಲ 5 ಯೋಜನೆಗಳ ಮೂಲಕ ಶೇಕಡಾ 70 ರಷ್ಟು ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಬಹುದು. ಇದಕ್ಕಾಗಿ ಪ್ರಬಲ ಹೋರಾಟಗಳನ್ನು ನಡೆಸಿದರೆ ಮಾತ್ರ ಶಾಶ್ವತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯ ಎಂದರು.

ಕಿರು ಹೊತ್ತಿಗೆ ಬಿಡುಗಡೆ

ಇದೇ ಸಂಧರ್ಭದಲ್ಲಿ ಜಿ.ವಿ. ಶ್ರೀರಾಮರೆಡ್ಡಿಯವರು ಬರೆದಿರುವ 'ಶಾಶ್ವತ ನೀರಾವರಿ ಯೋಜನೆಗಳು ಮಧ್ಯ ಕರ್ನಾಟಕ ಜನರ ಜೀವನ್ಮರಣದ ಪ್ರಶ್ನೆ' ಎಂಬ ಕಿರು ಹೊತ್ತಿಗೆಯನ್ನು ಡಾ|| ಪರಮಶಿವಯ್ಯ ಬಿಡುಗಡೆಮಾಡಿದರು.

ನೀರಾವರಿ ಯೋಜನೆಗಳಿಂದ ಹಸಿರು, ಅಂತರ್ಜಲ ಹೆಚ್ಚಿದರೆ ಅದು ಪರಿಸರ ರಕ್ಷಣೆ ಅಲ್ಲವೇ ?

ಸಮಾವೇಶದ ಮತ್ತೋರ್ವ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್ ಮಾತನಾಡಿ ಈ ನೀರಾವರಿ ಯೋಜನೆ ಭಾರತದಲ್ಲಿಯೇ ಅತ್ಯಂತ ವಿಶಿಷ್ಟ ಯೋಜನೆಯಾಗಿದ್ದು ಈ ಯೋಜನೆಯ ಕುರಿತು ಹಲವರಿಗೆ ಗೊಂದಲಗಳಿದ್ದು ಅವುಗಳನ್ನು ಹೋಗಲಾಡಿಸಲು ದೊಡ್ಡ ಪ್ರಯತ್ನದ ಅವಶ್ಯಕತೆಯಿದೆ. ಈ ಯೋಜನೆಯನ್ನು ಜಾರಿಗೆ ತಂದರೆ ಪಶ್ಚಿಮಘಟ್ಟದ ಪರಿಸರ ನಾಶವಾಗುತ್ತದ ಎಂಬ ಅಭಿಪ್ರಾಯ ಕೆಲವರಲ್ಲಿದೆ. ಪರಿಸರವಾದಿಗಳಿಗೆ ಎಲ್ಲ ಪ್ರದೇಶಗಳಲ್ಲೂ ಪರಿಸರವನ್ನು ಅಭಿವೃದ್ಧಿಗೊಳಿಸುವ ಸಮಗ್ರ ದೃಷ್ಟಿಕೋನವಿರಬೇಕು. ಮಧ್ಯ ಕರ್ನಾಟಕದ 10 ಜಿಲ್ಲೆಗಳಲ್ಲಿ ನೀರಾವರಿಯ ಕೊರತೆಯಿಂದ ಈ ಪ್ರದೇಶದಲ್ಲಿ ಅರಣ್ಯ-ಪರಿಸರ ಅಭಿವೃದ್ಧಿಯೇ ಆಗಿಲ್ಲ, ನೀರಾವರಿ ಯೋಜನೆ ಜಾರಿಯಾದರೆ ಅಲ್ಲಿ ಮರಗಿಡಗಳನ್ನು ಬೆಳೆಸಿದರೆ ಅದು ಪರಿಸರ ಅಭಿವೃದ್ಧಿಯಲ್ಲವೇ ಎಂದು ಪ್ರಶ್ನಿಸಿದರು. ಜೊತೆಗೆ ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಿಂದಲೂ (ಮಲೆನಾಡು-ಕರಾವಳಿ ಜಿಲ್ಲೆಗಳೂ ಸೇರಿದಂತೆ) ಜನರು ಬೆಂಗಳೂರಿಗೆ ವಲಸೆ ಬಂದು ನೆಲೆಸುತ್ತಿದ್ದಾರೆ ಇವರಿಗೆಲ್ಲಾ ಬಳಕೆಗೆ ಮತ್ತು ಕುಡಿಯುವ ನೀರನ್ನು ಒದಗಿಸುವುದು ಎಲ್ಲಿಂದ ಎಂದು ಕೇಳಿದ ಅವರು, ಈ ಎಲ್ಲಾ ಸಮಸ್ಯೆಗಳಿಗೂ ಪರಮಶಿವಯ್ಯನವರ ಶಾಶ್ವತ ನೀರಾವರಿ ಯೋಜನೆಗಳ ಜಾರಿಯಿಂದ ಮಾತ್ರ ಸಾಧ್ಯ ಎಂದರು.

ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ್ದ ನೀರಾವರಿ ಹೋರಾಟಗಾರರು ಸಮಾವೇಶದಲ್ಲಿ ಮಾತನಾಡಿ ಈ ಹಿಂದೆ 2002 ರಲ್ಲಿ ಕೋಲಾರದಲ್ಲಿ ಪ್ರಾರಂಭವಾದ ಹೋರಾಟವನ್ನು ಎಲ್ಲ ಹತ್ತು ಜಿಲ್ಲೆಗಳಲ್ಲೂ ವ್ಯಾಪಕವಾಗಿ ವಿಸ್ತರಿಸಲು ದೃಢ ನಿರ್ಧಾರ ಕೈಗೊಂಡರು. ಮುಂದಿನ ದಿನಗಳಲ್ಲಿ ಶಾಶ್ವತ ನೀರಾವರಿ ಯೋಜನೆಗಳ ಜಾರಿಗೆ ಪ್ರಬಲ ಹೋರಾಟವನ್ನು ಪಕ್ಷಬೇಧ ಮರೆತು ಎಲ್ಲರನ್ನೂ ಒಂದುಗೂಡಿಸಿ ನಡೆಸಬೇಕು. ಅದಕ್ಕೆ ಪೂರ್ವಭಾವಿಯಾಗಿ ಎಲ್ಲ ಜಿಲ್ಲೆಗಳ ಹಳ್ಳಿ ಹಳ್ಳಿಗಳಲ್ಲೂ ಈ ಯೋಜನೆ ಮತ್ತು ನೀರಾವರಿಯ ಸಮಸ್ಯೆಗಳ ಕುರಿತು ಜನ ಜಾಗೃತಿ ಮೂಡಿಸಬೇಕೆಂದು ತೀರ್ಮಾನಿಸಲಾಯಿತು.

ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಜಿ.ಸಿ.ಬಯ್ಯಾರೆಡ್ಡಿ, ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಸಿಐಟಿಯುವಿನ ಸೈಯದ್ ಮುಜೀಬ್ ಭಾಗವಹಿಸಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಕೆಪಿಆರ್‌ಎಸ್ ನ ತುಮಕೂರು ಜಿಲ್ಲಾ ಅಧ್ಯಕ್ಷರಾದ ಬಿ.ಉಮೇಶ್ ವಹಿಸಿದ್ದರು.

ಎಣೆ ಇಲ್ಲದ ಕಿತ್ತಾಟಕ್ಕೆ ಕೊನೆ ಎಂತು?

ಪುಟ 3 ರಿಂದ

ಸದಾನಂದಗೌಡ ಮಾಡಬೇಕಾದದ್ದು

ಹೀಗಾಗಿ ಇದೀಗ ಪುನಃ ದೆಹಲಿಯಾತ್ರೆ ಆರಂಭಗೊಂಡಿದೆ. ಅಲ್ಲಿ ಸಿಗುವ ಪರಿಹಾರದಿಂದ ಮೂರು ಕಾಸಿನ ಪ್ರಯೋಜನದ ನಿರೀಕ್ಷೆ ಜನರಿಗೆ ಇಲ್ಲವೇ ಇಲ್ಲ. ಹೋಗಲಿ ಯಡಿಯೂರಪ್ಪ ಸದಾನಂದಗೌಡರಿಗೇ ಇಲ್ಲ.!

ಅಂದ ಮೇಲೆ......

ಇದಾದ ನಂತರವೂ ಕದನ, ಕಿತ್ತಾಟ ಒಟ್ಟು ಪರಿಣಾಮ ಸರಕಾರವೇ ಇಲ್ಲದ ಸ್ಥಿತಿ.ಅಂದ ಮೇಲೆ ಈ ಸರಕಾರ ಇದ್ದರೆಷ್ಟು ಬಿಟ್ಟರೆಷ್ಟು?. ಹೀಗಾಗಿ ಜನದ್ರೋಹಿ ಈ ಸರ್ಕಾರ ರಾಜೀನಾಮೆ ಕೊಟ್ಟು ಹೊಸ ಜನಾದೇಶಕ್ಕೆ ಹೋಗಲೇ ಬೇಕಾದದ್ದು ಅನಿವಾರ್ಯ. ದೆಹಲಿಯಿಂದ ಹಿಂತಿರುಗಿದ ಕೂಡಲೇ ಸದಾನಂದಗೌಡರು ಮಾಡಬೇಕಾದದ್ದು ರಾಜ್ಯಪಾಲರಿಗೆ ರಾಜೀನಾಮೆ ರವಾನೆ ಅಷ್ಟೇ!

* * * * *

ಉಡುಪಿ ಲೋಕಸಭೆ ಚುನಾವಣೆ:
ಬಿಜೆಪಿ ಸೋಲು ಸ್ವಾಗತಾರ್ಹ

ಉಡುಪಿ-ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಫಲಿತಾಂಶ ಹಲವು ಸಂಗತಿಗಳಿಂದ ಗಮನಾರ್ಹ. ಮತದಾನದಲ್ಲಿ ಬಿಜೆಪಿ ಅಲ್ಲಿ ಸೋತಿದೆ. ಕಾಂಗ್ರೆಸ್ ಗೆದ್ದಿದೆ. ಜೆಡಿ(ಎಸ್) ಮೂರನೇಯ ಸ್ಥಾನಕ್ಕೆ. ಒಂದರ್ಥದಲ್ಲಿ ಕೋಮುವಾದಿ, ಭ್ರಷ್ಟ ಬಿಜೆಪಿ ಪಕ್ಷ ಅಲ್ಲಿ ಸೋತಿರುವುದು ಸ್ವಾಗತಾರ್ಹವಾದ ಜನತೆಯ ತೀರ್ಪು. ಇದಕ್ಕೆದುರಾಗಿ ಬಿಜೆಪಿ ಸೋಲಿಸಬಲ್ಲ ಶಕ್ತಿ ಎಂದು ಜನತೆ ಕಂಡುಕೊಂಡಿದ್ದು ಕಾಂಗ್ರೆಸ್‌ನನ್ನು, ಬೆಂಬಲಿತ ಸಿ.ಪಿ.ಐ(ಎಂ) ಪಕ್ಷ ಬೆಂಬಲಿಸಿದ ಜೆಡಿ(ಎಸ್) ಪಕ್ಷದ ಬಲವೂ ಸೀಮಿತ ಎಂಬುದು ಜನ ಕಾಂಗ್ರೆಸ್‌ನ್ನೇ ಬದಲಿಯಾಗಿ ಆಯ್ಕೆ ಮಾಡಿಕೊಳ್ಳಲು ಒಂದು ಕಾರಣ. ಇಲ್ಲವಾದರೆ ಕಾಂಗ್ರೆಸ್‌ನ ಕೇಂದ್ರ ಸರ್ಕಾರ ಜನತೆಯ ಮೇಲೆ ನಡೆಸುತ್ತಿರುವ ಧಾಳಿಗಳು, ಜನವಿರೋಧಿ, ಭ್ರಷ್ಟ ನೀತಿಗಳಲ್ಲಿ ಅದು ಕ್ಷಮಾರ್ಹವೂ ಅಲ್ಲ. ಆದರೆ ಬಿಜೆಪಿಯ ಕೋಮುವಾದಿ ಧಾಳಿಗಳು, ರಾಜ್ಯದಲ್ಲಿನ ದುರಾಡಳಿತಗಳಿಂದ ಬೇಸತ್ತು ನೀಡಿದ ಪ್ರಹಾರದ ಫಲ ಕಾಂಗ್ರೆಸ್‌ಗೆ. ಮೇಲಾಗಿ ಅಭ್ಯರ್ಥಿ ಜಯಪ್ರಕಾಶ ಹೆಗ್ಡೆಯವರ ವ್ಯಕ್ತಿಗತ ಸದಾಭಿಪ್ರಾಯವೂ ಸಹಾಯಕ.

ಈ ಚುನಾವಣೆ ಬಿಜೆಪಿಗಂತೂ ಮಹಾ ಪ್ರತಿಷ್ಠೆಯಾಗಿತ್ತು. ಮುಖ್ಯಮಂತ್ರಿ ಸದಾನಂದ ಗೌಡರು ಸಂಸದನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಳಿಕ ನಡೆದ ಉಪಚುನಾವಣೆ. ಗುಂಪುಗಾರಿಕೆ-ಕಿತ್ತಾಟದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಯಡಿಯೂರಪ್ಪ ಬಣ 'ಮುಷ್ಕರ' ಆರಂಭಿಸಿರುವಾಗ ಅಲ್ಲಿ ಅಭ್ಯರ್ಥಿ ಗೆದ್ದು ಗೌಡರ ಬಲ ತೋರಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಯಡಿಯೂರಪ್ಪ ಬಣ ಇಲ್ಲೂ ಹಾಕಿದ "ಚುನಾವಣಾ ಬಹಿಷ್ಕಾರ" ಸದಾನಂದರ ಬೆನ್ನಿಗೆ ಗುದ್ದು ಹಾಕಿರುವುದರಲ್ಲಿ ಅನುಮಾನವಿಲ್ಲ. ಬೇರೆಲ್ಲಾ ಪ್ರಶ್ನೆಗಳಿಗಿಂತ ಇಲ್ಲಿ 'ಜಾತಿ ಮತ' ಕ್ರೋಡೀಕರಣವು ದಟ್ಟವಾಗಿ ಪ್ರಭಾವಿಸಿದೆ. ಗುಂಪುಗಾರಿಕೆ ಹಿಂದೆಂದೂ ಜಾತಿ ಕ್ರೋಡೀಕರಣ ಅಪಾಯಕಾರಿಯಾಗಿ ಬೆಳೆಯುತ್ತಿದೆ. ಈಗೀಗ ಸೋಲು-ಗೆಲುವಿನ ಕಾರಣಗಳನ್ನು ಅವರವರು ಅವರದ್ದೇ ಮೂಗಿನ ನೇರಕ್ಕೆ ವ್ಯಾಖ್ಯಾನಿಸುತ್ತಿದ್ದಾರೆ. ಆದರೆ ಒಂದಂತೂ ಖಚಿತ. ಜನತೆ ಬಿಜೆಪಿ ದುರಾಡಳಿತಕ್ಕೆ ಬೇಸತ್ತಿದ್ದಾರೆ. ಅದರ ಅಭಿವ್ಯಕ್ತಿಯೂ ಇದಾಗಿದೆ. ಜನತೆ ಬಿಜೆಪಿಗೆ ಪರ್ಯಾಯ ಬಯಸುತ್ತಿದ್ದಾರೆ. ರಾಜ್ಯದಲ್ಲಿ ದೀನ ಸ್ಥಿತಿಯಲ್ಲಿರುವ ಕಾಂಗ್ರೆಸ್‌ನ್ನು ಅದಕ್ಕಾಗಿ ಗೆಲ್ಲಿಸಿದ್ದಾರೆ. ಮೂರನೆಯ ಸೆಕ್ಯುಲರ್ ಶಕ್ತಿಗಳು ರಾಜಕೀಯವಾಗಿ ಸಂಘಟನಾತ್ಮಕವಾಗಿ ಮಾಡಬೇಕಾದದ್ದು ಬಹಳವಿದೆ. ಯಾಕೆಂದರೆ ಕೋಮುವಾದಿ ಬಿಜೆಪಿ, ಜನವಿರೋಧಿ, ಕಾಂಗ್ರೆಸ್‌ಗಳನ್ನು ನಿರಂತರ ಎದುರಿಸಿ ಹೋರಾಡಬೇಕಾದ ಸವಾಲು ಸ್ಥಿತಿಇದ್ದೇ ಇದೆ.

....ಸೊರಗುತ್ತಿವೆ ಇಲ್ಲಿ ಜಾನುವಾರುಗಳು!

-ಪುಟ 2ರಿಂದ

ಕೇಳುತ್ತಿದ್ದು, ಅಷ್ಟನ್ನು ಕೊಡಲು ಒಪ್ಪದ ಕಾರಣ ಮೇವು ಹಾಗೇ ಬಿದ್ದು ಹಾಳಾಗಿ ಹೋಗುತ್ತಿದೆ. ಬಣವಿ ಒಟ್ಟಿಸಿ ಮೇವು ರಕ್ಷಿಸುವ ಕಾರ್ಯಕ್ಕೆ ಆಡಳಿತ ವರ್ಗ ಮೀನಾಮೇಷ ಎಣಿಸುತ್ತಿದೆ.

'ಮಾದರಿ ಗೋಶಾಲೆ'ಯಲ್ಲಿ ಮೂಲಭೂತ ಸೌಲಭ್ಯಗಳಿಲ್ಲ

ಹಿಂದಿನ ತಹಶೀಲ್ದಾರ ಅಶೋಕ ಬದಾಮಿ ಅವರು ಗೋಶಾಲೆಗೆ ಜನವರಿ 17 ರಂದು ಭೇಟಿ ಕೊಟ್ಟು, ನಾಗೇಂದ್ರಗಡ ಗೋಶಾಲೆಯನ್ನು ಮಾದರಿ ಗೋಶಾಲೆಯನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತೆ ಎಂದು ಹೇಳಿಕೆ ನೀಡಿದ್ದರು. ಪ್ರಾರಂಭವಾಗಿ 2 1/2 ತಿಂಗಳು ಕಳೆದರೂ ಇಲ್ಲಿ ಮೂಲ ಸೌಲಭ್ಯಗಳ ಪೂರೈಕೆ ಆಗಿಲ್ಲ. ಮಾದರಿ ಗೋಶಾಲೆಯನ್ನಾಗಿ ಮಾಡುವ ಅವರ ಮಾತು ಜಾರಿಯಾಗದೇ ಹಾಗೇ ಉಳಿದಿದೆ. ಇದೀಗ ಹೊಸದಾಗಿ ವರ್ಗವಾಗಿ ಬಂದಿರುವ ತಹಶೀಲ್ದಾರ ಎ.ಟಿ. ನರೇಗಲ್ಲ ಅವರು ಗೋಶಾಲೆಗೆ ಭೇಟಿ ಕೊಟ್ಟು ಹೋಗಿದ್ದಾರೆ. 15 ದಿನಗಳಾದರೂ ಅಭಿವೃದ್ಧಿಪಡಿಸುವ ಯಾವುದೇ ಕಾರ್ಯಗಳು ನಡೆಯುತ್ತಿಲ್ಲ.

ಜನಪ್ರತಿನಿಧಿಗಳು, ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಮೇಲಿಂದ ಮೇಲೆ ಗೋಶಾಲೆಗೆ ಭೇಟಿ ಕೊಡಬೇಕು. ಕೊರತೆಗಳ ನೀಗಿಸಿ ಅದನ್ನು ಅಭಿವೃದ್ಧಿಪಡಿಸುವ ಮೂಲಕ ರೈತಾಪಿ ಜನರ ಮಿತ್ರ ಜಾನುವಾರುಗಳನ್ನು ರಕ್ಷಿಸುವ ಕಾರ್ಯ ಆಗಬೇಕಿದೆ.

ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಒಟ್ಟು 36 ಗೋಶಾಲೆಗಳನ್ನು ಸರ್ಕಾರ ತಡವಾಗಿ ಆರಂಭಿಸಿದೆ. ಆದರೆ ಬಹುತೇಕ ನಾಗೇಂದ್ರಗಡ ಗೋಶಾಲೆಯ ಪರಿಸ್ಥಿತಿಯನ್ನು ರಾಜ್ಯದಾದ್ಯಂತ ಕಾಣಬಹುದಾಗಿದೆ. ರೈತರು, ಕೃಷಿ ಕೂಲಿಕಾರರು, ಜಾನುವಾರುಗಳು ದಯನೀಯವಾಗಿ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾದರೂ ರಾಜ್ಯ ಸರ್ಕಾರ ಇದ್ದೂ ಇಲ್ಲದಂತಾಗಿದೆ.

ಮೈಸೂರಿನಲ್ಲಿ ಅಮಾನುಷ ಮರ್ಯಾದ ಹತ್ಯೆ

ಜಾತೀಯತೆ ಬಲವಾಗಿ ಬೇರೂರಿರುವ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ನಡೆಯುತ್ತಿರುವ ಅಮಾನುಷ ಮರ್ಯಾದ ಹತ್ಯೆಗಳು ಕರ್ನಾಟಕ, ರಾಮನಗರ, ಮಂಡ್ಯ, ಮೈಸೂರಿನಲ್ಲೂ ನಡೆದಿರುವುದು ಇತ್ತೀಚಿನ ದಿನಗಳಲ್ಲಿ ಜಾತಿ ವ್ಯವಸ್ಥೆ ಉಗ್ರ ರೂಪ ಅನಾವರಣಗೊಳ್ಳುತ್ತಿರುವುದು ತೀವ್ರ ಆತಂಕಕಾರಿ ಬೆಳವಣಿಗೆಯಾಗಿದೆ.

ಮನೆಯವರ ಇಷ್ಟಕ್ಕೆ ವಿರುದ್ಧವಾಗಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ಅಂತರ್ಜಾತಿ ವಿವಾಹವಾಗಿದ್ದ ಯುವತಿಯನ್ನು ಆಕೆಯ ಅಣ್ಣನೇ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಪಿರಿಯಾಪಟ್ಟಣ ತಾಲ್ಲೂಕಿನ ಲಿಂಗಾಯಿತ ಸಮುದಾಯದ ಸ್ಮೃತಿ ಚಾಮರಾಜನಗರ ಜಿಲ್ಲೆಯ ಕುದೇರು ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ದೈಹಿಕ ಶಿಕ್ಷಣ ವಿಭಾಗದಲ್ಲಿ ಉಪನಿರ್ದೇಶಕರಾಗಿ ಕೆಲಸ ಮಾಡುತ್ತಿರುವ ದಲಿತ ಸಂದೀಪ್ ಕುಮಾರ್ ಪರಸ್ಪರ ಪ್ರೀತಿಸುತ್ತಿದ್ದು, ಸ್ಮೃತಿ ಮನೆಯವರಿಗೆ ಹೆದರಿ ನವೆಂಬರ್ ನಲ್ಲಿ ಸ್ನೇಹಿತರ ಸಹಾಯದಿಂದ ನೊಂದಣಿ ವಿವಾಹವಾಗಿದ್ದಾರೆ. ಮನೆಯವರು ಒಪ್ಪಿದ ನಂತರ ಬಹಿರಂಗವಾಗಿ ಮದುವೆಯಾಗುವ ಎಂದು ಆಕೆ ಮೈಸೂರಿನ ಲಾಲನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ಅಜ್ಜಿ ಜೊತೆ ವಾಸವಿದ್ದರು. ಮೊದಲು ತಂಗಿಯ ಜೊತೆ ಹಾಗೂ ಆಕೆಯ ಪತಿ ಸುದೀಪ್ ಜೊತೆ ಅನ್ಯೋನ್ಯವಾಗಿದ್ದ ಅಣ್ಣ ಮಹದೇವ ನಂತರ ಅವರ ಮದುವೆ ವಿಷಯ ತಿಳಿದು ಸ್ಮೃತಿಯೊಡನೆ ಒಂದು ತಿಂಗಳಿಂದ ಜಗಳ ತೆಗೆಯುತ್ತಿದ್ದ. ದಿನಾಂಕ:13-03-12 ರಂದು ಆಕೆಯ ಅಣ್ಣ ಮಹದೇವ ಕುಡಿದು ಜಗಳ ತೆಗೆದು ಅಜ್ಜಿಯ ಎದುರಿನಲ್ಲೆ ಸ್ಮೃತಿಯನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ.

ಈ ಅಮಾನವೀಯ ಕೃತ್ಯವನ್ನು ಖಂಡಿಸಿ ಸಿ.ಪಿ.ಐ.(ಎಂ.) (ಜಿಲ್ಲಾ ಸಮಿತಿ) ದಿನಾಂಕ: 14-03-2012 ರಂದು ಮೈಸೂರು ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿತು. ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕಾಂ:ಗೌರಮ್ಮ, ಮಂಡ್ಯ ಜಿಲ್ಲಾಧ್ಯಕ್ಷೆ ಗೌರಿ, ದೇವಿ ಸೇರಿದಂತೆ ದಲಿತ ಸಂಘಟನೆಯ ಮುಖಂಡರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಸಿ.ಪಿ.ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾಂ: ಕೆ. ಬಸವರಾಜು ಅಂತರ್ಜಾತಿ ವಿವಾಹ ಮಾಡಿಕೊಂಡಿರುವ ಉಪನ್ಯಾಸಕಿ ಸ್ಮೃತಿಯ ಹತ್ಯೆಯು ಅಸ್ಪೃಶ್ಯತೆಯ ಉಗ್ರ ಆಚರಣೆಯಾಗಿದ್ದು ಈ ಹತ್ಯೆಗೆ ಕಾರಣರಾಗಿರುವ ಆಕೆಯ ಅಣ್ಣನಿಗೆ ಕಠಿಣ ಶಿಕ್ಷೆ ಆಗಬೇಕೆಂದು ಒತ್ತಾಯಿಸಿದರು. ದಲಿತರನ್ನು ವಿವಾಹ ಮಾಡಿಕೊಳ್ಳುವ ಮನಸ್ಥಿತಿಯನ್ನು ಹೊಂದಿರುವ ಸ್ಮೃತಿಯಂತಹ ಯುವತಿಯರ ಹತ್ಯೆಗಳು ಹೆಚ್ಚಾಗುತ್ತಿದ್ದು ಇದು ಆತಂಕಕಾರಿ ಬೆಳವಣಿಗೆ ಎಂದ ಅವರು ಅಂತರ್ಜಾತಿ ವಿವಾಹ ಮಾಡಿಕೊಳ್ಳುವ ಯುವಕ-ಯುವತಿಯರ ರಕ್ಷಣೆಗೆ ಸರ್ಕಾರ ಬಿಗಿಯಾದ ಕಾನೂನು ಜಾರಿಗೆ ತರಬೇಕೆಂದರು. ಕೆಲವು ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ಸಾಧನೆಗೋಸ್ಕರ ಮತ ರಾಜಕಾರಣಕ್ಕಾಗಿ ಜಾತಿ ಸಮಾವೇಶಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜಾತಿ ಪ್ರಜ್ಞೆ ಹುಟ್ಟುಹಾಕುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಕೆಳ ಜಾತಿಯವರನ್ನು ಅಂತರ್ಜಾತಿ ವಿವಾಹ ಮಾಡಿಕೊಳ್ಳುವವರ ಮೇಲೆ ದಾಳಿಗಳು ಹೆಚ್ಚಾಗುತ್ತಿವೆ. ಮರ್ಯಾದಾ ಹತ್ಯೆಯಂತಹ ಅನಾಗರೀಕ ಕೃತ್ಯಗಳು ಸಂಭವಿಸುತ್ತಿವೆ. ಇದರ ಸಂಪೂರ್ಣ ಹೊಣೆಯನ್ನು ಸಂಬಂಧಪಟ್ಟ ರಾಜಕೀಯ ಮುಖಂಡರುಗಳು ಹೊರಬೇಕೆಂದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕಾಂ: ಗೌರಮ್ಮ ಮಾತನಾಡಿ ಕೇವಲ ಜಾತಿಯ ಹೆಸರಿನಲ್ಲಿ ಅಮಾಯಕ ಯುವತಿಯರನ್ನು ಹತ್ಯೆಗೈಯುವ ಮೂಲಕ ಯುವಕ-ಯುವತಿಯರ ಸ್ವಾತಂತ್ರ್ಯವನ್ನು ಕಸಿಯುವ ಪ್ರಯತ್ನ ಮಾಡಲಾಗುತ್ತಿದೆ. ವಿವಾಹವಾದಂತಹ ವಿಚಾರಗಳಲ್ಲಿ ಯುವಕ-ಯುವತಿಯರಿಗೆ ಸ್ವಾತಂತ್ರ್ಯ ನೀಡಬೇಕೆಂದರು.

ಈ ಪ್ರತಿಭಟನೆಯಲ್ಲಿ ಕಾಂ: ಲ. ಜಗನ್ನಾಥ್, ಕಾಂ: ವಿಜಯಕುಮಾರ್, ಕಾಂ: ಬಾಲಾಜಿರಾವ್, ಕಾಂ: ಜಗದೀಶ್‌ಸೂರ್ಯ, ಕಾಂ: ಸುಬ್ರಹ್ಮಣ್ಯ, ಕಾಂ: ಅಣ್ಣಪ್ಪ, ಪ್ರಗತಿಪರ ಸಂಘಟನೆಯ ಮುದ್ದುಕೃಷ್ಣ, ಎಸ್.ಆರ್. ಗೋಪಿನಾಥ್, ಸೇರಿದಂತೆ ಹಲವರು ಭಾಗವಹಿಸಿದ್ದರು.

ವರದಿ :ಜಗದೀಶ್ ಸೂರ್ಯ
ಮೈಸೂರು.

ಬಡತನದ ಅಂಕಿ-ಅಂಶದಲ್ಲಿ ಮೋಸ......

ಪುಟ 13 ರಿಂದ

ಪ್ರಧಾನ ಮಂತ್ರಿಗಳು ದೃಢಪಡಿಸಬೇಕು ಎಂದು ಆಗ್ರಹಿಸಿದೆ. ಇದು 'ಆಮ್ ಆದ್ಮಿ'ಯ ಮಂತ್ರ ಜಪಿಸುವ ಪ್ರಧಾನ ಮಂತ್ರಿಗಳಿಗೆ ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳ ಆಗ್ರಹ ಕೂಡ.

ಅಮೇರಿಕಾವನ್ನು ಮೆಚ್ಚಿಸಲು
ಇರಾನಿನಿಂದ ತೈಲ ಆಮದು ಕಡಿತ

ಇರಾನ್ ನಮ್ಮ ಪ್ರಾಚೀನ ಮಿತ್ರ ಅದರೊಂದಿಗೆ ನಮ್ಮ ಸಂಬಂಧಗಳ ಬಗ್ಗೆ ಯಾರ ಒತ್ತಡವನ್ನೂ ಲೆಕ್ಕಿಸುವುದಿಲ್ಲ ಎಂದು ಯುಪಿಎ-2 ಸರಕಾರದ ವಕ್ತಾರರು ಎಷ್ಟೇ ಹೇಳಲಿ, ಭಾರತ ಸರಕಾರ 'ಸರಿಯಾದ ದಿಕ್ಕಿನಲ್ಲಿಯೇ ಕ್ರಮಗಳನ್ನು ಕೈಗೊಳ್ಳುತ್ತಿದೆ', ಅಂದರೆ ಅಮೆರಿಕಾದ ಆಳರಸರು ಬಯಸಿದಂತೆ ಇರಾನಿನ ವಿರುದ್ಧ ಅವರು ಹೇರಿರುವ ನಿರ್ಬಂಧಗಳಿಗೆ ಅನುಸಾರವಾದ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸ್ವತಃ ಅಮೆರಿಕಾದ ವಿದೇಶಾಂಗ ಸಚಿವರೇ ಹೇಳಿದ್ದು ನಮ್ಮ ಓದುಗರಿಗೆ ನೆನಪಿರಬಹುದು.

ಇರಾನಿನಿಂದ ತೈಲ ಆಮದನ್ನು ಕಡಿತ ಮಾಡುವುದಿಲ್ಲ ಎಂಬ ಯುಪಿಎ-2 ಸರಕಾರದ ಹೇಳಿಕೆಗಳೆಲ್ಲ ದೇಶದ ಜನತೆಗೆ ಅಮೆರಿಕಾದ ಆಳರಸರನ್ನು ಮೆಚ್ಚಿಸಲಿಕ್ಕಾಗಿ ಮಾಡಿರುವ ಮತ್ತೊಂದು ಮೋಸ ಎಂಬುದು ಈಗ ಎಲ್ಲರ ಅರಿವಿಗೆ ಬರುತ್ತಿದೆ. ಅಮೆರಿಕಾದ ರಾಯ್ಟರ್ ಸುದ್ದಿ ಸಂಸ್ಥೆಯ ಪ್ರಕಾರ ಇರಾನಿನಿಂದ ಕಚ್ಚಾತೈಲದ ಆಮದಿನಲ್ಲಿ ಕಡಿತ ಮಾಡಲು ಭಾರತ ಸರಕಾರ ದೇಶದ ತೈಲ ಸಂಸ್ಕರಣ ಕಂಪನಿಗಳಿಗೆ ಗುಪ್ತ ಆದೇಶ ನೀಡಿದೆ. ಇರಾನಿನಿಂದ ಕಚ್ಚಾತೈಲ ಆಮದಿನಲ್ಲಿ ಸಿಂಹಪಾಲು ಹೊಂದಿರುವ ಎಂಆರ್‌ಪಿಎಲ್ ತನ್ನ ಆಮದಿನಲ್ಲಿ 44ಶೇ.ದಷ್ಟು ಕಡಿತ ಮಾಡಲಿದೆ ಎಂದು ಆ ವರದಿ ತಿಳಿಸಿದೆ. ಒಟ್ಟಾರೆಯಾಗಿ 20ಶೇ.ದಷ್ಟು ಆಮದು ಕಡಿತವಾಗಲಿದ್ದು ಇದನ್ನು ಸೌದಿ ಅರೇಬಿಯಾ ಮತ್ತು ಇರಾಕಿನಿಂದ ಆಮದುಗಳ ಮೂಲಕ ಭರಿಸಲಾಗುವುದಂತೆ. ವಿಶೇಷವೆಂದರೆ ಇವನ್ನೆಲ್ಲ ಅತ್ಯಂತ ಗುಟ್ಟಿನಿಂದ ಮಾಡಲು ತೈಲ ಸಂಸ್ಕರಣ ಕಂಪನಿಗಳಿಗೆ ಹೇಳಲಾಗಿದೆಯಂತೆ. ಬ್ರಿಟಿಶರು ಭಾರತವನ್ನು ಆಳುತ್ತಿದ್ದ ಸಮಯದಲ್ಲಿನ ಗುಪ್ತ ಆಡಳಿತದ ಮಾದರಿಯಲ್ಲಿ ದಾಖಲೆಗಳಿಲ್ಲದ ರೀತಿಯಲ್ಲಿ ಇವೆಲ್ಲ ನಡೆಯುತ್ತಿವೆ ಎಂದು ಒಬ್ಬ ಸರಕಾರೀ ಅಧಿಕಾರಿ ಹೇಳಿರುವುದಾಗಿ ಆ ರಾಯ್ಟರ್ ವರದಿ ತಿಳಿಸುತ್ತದೆ.

ಅಮೆರಿಕಾ ಈ ವಾರ ಜಪಾನ್ ಮತ್ತು 10 ಯುರೋಪಿಯನ್ ಸಂಘದ ದೇಶಗಳು ಇರಾನಿನೊಂದಿಗೆ ವ್ಯವಹಾರಗಳಲ್ಲಿ ಕಡಿತ ಮಾಡಿರುವುದರಿಂದ ಅವುಗಳಿಗೆ ಹಣಕಾಸು ನಿರ್ಬಂಧಗಳಿಂದ ವಿನಾಯ್ತಿ ನೀಡಿದೆ, ಆದರೆ ಭಾರತ ಮತ್ತು ಚೀನಾಕ್ಕೆ ಇದುವರೆಗೂ ನೀಡಿಲ್ಲ. ಭಾರತ ಪ್ರತಿ ಹಂತದಲ್ಲೂ ಈ ವಿಷಯದಲ್ಲಿ ಅಮೆರಿಕಾದ ಆಳರಸರೊಂದಿಗೆ ಸಂಪರ್ಕದಲ್ಲಿದ್ದು, ಯುಪಿಎ-2 ಸರಕಾರ ಅಮೆರಿಕಾವನ್ನು ಮೆಚ್ಚಿಸಲು, ಅದು ಕುಣಿಸಿದಂತೆ ಕುಣಿಯಲು ಸಕಲ ಪ್ರಯತ್ನ ನಡೆಸಿದೆ, ವಾಸ್ತವವಾಗಿ ಯುಪಿಎ-2 ಸರಕಾರ ಅತ್ಯಂತ ಅಮೆರಿಕಾ-ಪರ ಸರಕಾರ ಎಂಬುದು ಖಂಡಿತಾ ನಿಜ ಎಂದು ಪರಂಜೊಯ್ ಗುಹಾ ಠಾಕುರ್ತಾ ಎಂಬ ರಾಜಕೀಯ ವಿಶ್ಲೇಷಕರು ಹೇಳಿರುವುದಾಗಿ ರಾಯ್ಟರ್ ವರದಿ ಉಲ್ಲೇಖಿಸಿದೆ.

ಫೆಬ್ರವರಿ 28 ಮಹಾ ಮುಷ್ಕರ......

ಪುಟ 10 ರಿಂದ

ಉದ್ಯಮಗಳ ಗುತ್ತಿಗೆ ಕಾರ್ಮಿಕರು ಪೂರ್ಣವಾಗಿ ಮುಷ್ಕರದಲ್ಲಿ ಭಾಗವಹಿಸಿದ್ದರು. ವಿಶಾಗ್ ಉಕ್ಕು ಸ್ಥಾವರದ ಶೇ.90 ಖಾಯಂ ಕಾರ್ಮಿಕರು, ಸಾಲೇಮ್ ಉಕ್ಕು ಸ್ಥಾವರದ, ಶೇ.85 ಹಾಗೂ ದುರ್ಗಾಪುರದ ಅಲ್ಲೋಯ್ ಉಕ್ಕು ಸ್ಥಾವರದ ಶೇ.70 ಕಾರ್ಮಿಕರು, ದುರ್ಗಾಪುರದ ಐಐಎಸ್‌ಸಿಒ ಮತ್ತು ರೂರ್‌ಕೆಲಾ, ಬಕಾರೊ ಮತ್ತು ಭಿಲಾಯಿ ಉಕ್ಕು ಸ್ಥಾವರದಲ್ಲಿ ಮುಷ್ಕರ ನಡೆದಿದೆ.

* ಸಾರ್ವಜನಿಕ ವಲಯದ ಸಾರಿಗೆ ವಲಯದ ಕಾರ್ಮಿಕರು, ಅದರಲ್ಲೂ ಜಮ್ಮು-ಕಾಶ್ಮೀರ, ಹರಿಯಾಣ, ರಾಜಸ್ಥಾನ, ಪಂಜಾಬ್, ಚಂಡೀಗಢ ಮುಂತಾದ ರಾಜ್ಯಗಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಪೂರ್ಣವಾಗಿ ಸಂಚಾರವನ್ನು ನಿಲ್ಲಿಸಿದ್ದರಿಂದ ಸಾರ್ವಜನಿಕ ಸಂಚಾರ ವ್ಯವಸ್ಥೆ ಸ್ಥಗಿತಗೊಂಡಿತ್ತು. ಹಲವು ರಾಜ್ಯಗಳ ಖಾಸಗಿ ಸಾರಿಗೆ ಸಂಸ್ಥೆಗಳ ನೌಕರರು ಮುಷ್ಕರವನ್ನು ಬೆಂಬಲಿಸಿದ್ದರು.
* ವಿದ್ಯುತ್ ವಲಯದ ಗುತ್ತಿಗೆ ಕಾರ್ಮಿಕರು, ದಿನಗೂಲಿ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
* ಪಶ್ಚಿಮ ಬಂಗಾಳ, ತ್ರಿಪುರ, ಕೇರಳದಲ್ಲಿ ಪೂರ್ಣ ಪ್ರಮಾಣದಲ್ಲಿ ತೋಟ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರೆ, ಕರ್ನಾಟಕ, ತಮಿಳುನಾಡು,ಅಸ್ಸೋಮ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
* ಇಟ್ಟಿಗೆ ಗಣಿ, ಕಟ್ಟಡ ನಿರ್ಮಾಣ, ಹಮಾಲಿಗಳು, ಬೀಡಿ, ಮಂಡಿ, ಆಟೋ ರಿಕ್ಷಾ ಚಾಲಕರು ಮುಷ್ಕರದಲ್ಲಿ ಭಾಗವಹಿಸಿದ್ದರಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆ, ಧರಣಿ ಮತ್ತು ರೈಲು ರಸ್ತೆ ತಡೆಗಳಲ್ಲಿಯೂ ಕೂಡ ಭಾಗವಹಿಸಿದ್ದರು.
* ಹಿಮಾಚಲ ಪ್ರದೇಶದ ಜಲವಿದ್ಯುದಾಗಾರದ ಕಾರ್ಮಿಕರೊಂದಿಗೆ ನಿರ್ಮಾಣ ಕಾರ್ಮಿಕರು ಕೂಡ ಮುಷ್ಕರದಲ್ಲಿ ಭಾಗವಹಿಸಿದ್ದರು.
* 15 ಲಕ್ಷ ಅಂಗನವಾಡಿ, ನೌಕರರು, ಆಶಾ, ಬಿಸಿಯೂಟ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು.ಹಲವು ರಾಜ್ಯಗಳಲ್ಲಿ ಧರಣಿ ನಡೆಸಿರುವ ಅವರು,ರಾಜ್ಯ ಸರ್ಕಾರಗಳ ಪ್ರತಿಕೃತಿಗಳನ್ನು ದಹಿಸಿದ್ದಾರೆ.
* 1.5 ಲಕ್ಷಕ್ಕೂ ಅಧಿಕ ಔಷಧ ಮತ್ತು ವ್ಯಾಪಾರ ಪ್ರತಿನಿಧಿಗಳು ಮುಷ್ಕರದಲ್ಲಿ ಭಾಗವಹಿಸಿದ್ದಾರೆ.
* ಒಂದು ಲಕ್ಷಕ್ಕೂ ಅಧಿಕ ಮೀನುಗಾರರು ಹಾಗೂ ಮೀನುಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಮುಷ್ಕರದಲ್ಲಿ ದುಡಿವ ಜನಸಮೂಹ ಭಾಗವಹಿಸಿದ್ದನ್ನು ಗಮನಿಸಿದರೆ ಅವರ ಕೆಲಸ ಹಾಗೂ ಜೀವನ ಪರಿಸ್ಥಿತಿಯ ಮೇಲೆ ಆಗುತ್ತಿರುವ ದಾಳಿಯ ವಿರುದ್ಧ ದುಡಿವ ಜನರು ಆಕ್ರೋಶಗೊಂಡಿದ್ದು, ಅವುಗಳನ್ನು ಪ್ರತಿರೋಧಿಸುವ ಅಂತಿಮ ಮಾರ್ಗ ಹೋರಾಟ ಎಂಬುದನ್ನು ಅರಿತಿದ್ದಾರೆ ಎಂದು ತಿಳಿಯಬಹುದಾಗಿದೆ. ಈ ಅರ್ಥಸುವಿಕೆಯು ಸಾಮಾನ್ಯ ಜನರ ಹಾಗೂ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ ಮತ್ತು ಸ್ವಾಗತಿಸಿದ ರೀತಿಯಲ್ಲಿ ಪ್ರತಿಫಲನಗೊಂಡಿದೆ.

ಎಡಪಕ್ಷಗಳು ಈ ಮುಷ್ಕರಕ್ಕೆ ಸ್ಥಿರ ಬೆಂಬಲ ನೀಡಿವೆ. ಕೆಲವು ರಾಜ್ಯಗಳಲ್ಲಿ ಸ್ಥಳೀಯ ಪಕ್ಷಗಳು ಬೆಂಬಲ ನೀಡಿದ್ದವು. ಈ ಬೆಂಬಲವನ್ನು ಪಡೆದು ಮುಷ್ಕರವನ್ನು ಇನ್ನಷ್ಟು ವ್ಯಾಪಕವಾಗಿ ವಿಸ್ತರಿಸಲಾಗಿತ್ತು.

RNI No. KARKAN/2006/17926 Posted on every Satuarday
JANASHAKTHI KANNADA VARA PATRIKE APRIL 01, 2012 Price : Rs. 5/- Postal Reg. No. RNP/KA/BGS/2078/2010-12 Posted at MBC Bangalore GPO

ಶರಣರೇ ನೀವೇಕೆ ಹೀಗಾದಿರಿ?

ಸೀನು

"ಯಡಿಯೂರಪ್ಪನವರ ಬಳಿ ಅರವತ್ತಕ್ಕೂ ಹೆಚ್ಚು ಶಾಸಕರಿದ್ದರೂ ಸರ್ಕಾರ ನಡೆಯಲು ಬಿಟ್ಟಿದ್ದಾರೆ. ಅದೇ ಅವರ ದೊಡ್ಡತನ, ಅವರ ಸಹನೆಯನ್ನು ಪರೀಕ್ಷಿಸದೇ ಸಹನೆ ಕೋಡಿ ಒಡೆಯುವ ಮುನ್ನ ಸಮಸ್ಯೆಗೆ ಪರಿಹಾರ ಹುಡುಕುವುದು ಸೂಕ್ತ " ಎಂದು ಚಿತ್ರದುರ್ಗದ ಮುರುಘಾ ಶರಣರು ನುಡಿದಿರುವುದಾಗಿ ನಾಡಿನ ಪ್ರತಿಕೆಗಳಲ್ಲಿ ಪ್ರಕಟವಾಗಿದೆ. ಪ್ರಗತಿಪರ ಚಿಂತನೆಗಳ ಮಠವೆಂದೇ ಬಿಂಬಿತವಾದ ಮಠವೊಂದರ ಶರಣರೊಬ್ಬರು ಅಧಿಕಾರ-ಅಹಂಕಾರ-ದರ್ಪ-ಜಾತೀಯತೆಯನ್ನೇ ಪ್ರಧಾನವಾಗಿಟ್ಟುಕೊಂಡು ರಾಜಕಾರಣ ಮಾಡುವವರ 'ಬರ್ತಡೇ' ಪಾರ್ಟಿಯಲ್ಲಿ ಆಡಿದ ಮಾತುಗಳನ್ನು ಕೇಳಿ ನನಗೆ ಅಘಾತವಾಯಿತು.

ಒಂದು ತುತ್ತು ಅನ್ನ, ಕುಡಿಯುವ ನೀರು, ಇರಲು ನವಾಬರು ಕೊಟ್ಟಿದ್ದ ಜಾಗೆಯನ್ನು ಕಸಿದುಕೊಂಡ ಆಡಳಿತಶಾಹಿಯ ವಿರುದ್ಧ ದನಿಯೆತ್ತಿ ಅದೂ ಕೈಗೂಡದಿದ್ದಾಗ ಅಸಹಾಯಕರಾಗಿ ಮೈ ಮೇಲೆ ಮಲ ಸುರುವಿಕೊಂಡು ಪ್ರತಿಭಟಿಸಿದ ಸವಣೂರು ಭಂಗಿಗಳ ಪ್ರಕರಣದಿಂದ ಇಡೀ ದೇಶವೇ ಬೆಚ್ಚಿ ಬಿದ್ದಿತ್ತು. ಮೈ ಮೇಲೆ ಸುರುವಿಕೊಂಡ ಮಲದ ಚಿತ್ರವನ್ನು ನೋಡಿಯೇ ಎಷ್ಟೋ ಜನ ವಾಂತಿ ಮಾಡಿಕೊಂಡರು. ಇನ್ನೆಷ್ಟೋ ಜನ ಮೂಗು ಮುಚ್ಚಿಕೊಂಡರು. ಸರ್ಕಾರ ಕೊಟ್ಟ ಭರವಸೆಗಳೆಲ್ಲವೂ ಹುಸಿಯಾದವು. ಭಂಗಿ ಕುಟುಂಬವರ್ಗ ಕುಡಿಯಲು ನೀರಿಲ್ಲದೇ, ಇರಲು ಜಾಗೆಯಿಲ್ಲದೆ ಅನಾಥರಾಗಿ, ಸಮಾಜದ ಕೊಂಕು ಮಾತುಗಳಿಗೆ ತತ್ತರಿಸಿ-ಕೊನೆಯ ಅಸ್ತ್ರವೆಂಬಂತೆ ಆಗಸ್ಟ್ 15 ರೊಳಗಾಗಿ ಸರ್ಕಾರ ಸ್ಪಂದಿಸದಿದ್ದರೆ, ಮತ್ತೊಮ್ಮೆ ಕುಟುಂಬದ ಮಕ್ಕಳಾದಿಯಾಗಿ ಮಲ ಸುರುವಿಕೊಳ್ಳುವುದಾಗಿ ಹೇಳಿದರು. ಸರ್ಕಾರದ ವಿರುದ್ಧ ಜನರು ಆಕ್ರೋಶಭರಿತರಾಗುವ ಮುನ್ನವೇ ತಾವು ಸವಣೂರು ಭಂಗಿಗಳ ಮನೆ ಮುಂದೆ ಆ ಹೊತ್ತುಬಂದು ನಿಂತಿರಿ. 'ನಡೆದಾಡುವ ದೇವರು' ತಮ್ಮ ಮನೆ ಬಾಗಿಲಿಗೆ ಬಂದರೆಂದು ಅವರು ಅಂದು ಸಂತೋಷಪಟ್ಟರು. ಅಂದು ತಾವು ಮಾಡಿದ್ದಾದರೂ ಏನು? ಎಲ್ಲಾ ಸರ್ಕಾರಗಳಂತೆ ತಾವೂ ಭರವಸೆ ಕೊಟ್ಟು ಹೋಗಿದ್ದರೆ ಅಷ್ಟೇ ಸಾಕಿತ್ತು. ಆದರೆ ತಾವು ಆ ಭಂಗಿಗಳ ಕುಟುಂಬದ ಮುಗ್ಧ ಸದಸ್ಯರಿಂದ ಇನ್ನೊಂದು ಬಾರಿ ಈ ರೀತಿ ಮಲ ಸುರುವಿಕೊಂಡು ಪ್ರತಿಭಟಿಸದಿರುವಂತೆ ಆಣೆ ಪ್ರಮಾಣ ಮಾಡಿಸಿಕೊಂಡಿರಿ. ಭರವಸೆಗಳು ಕನಸಾಗಿಯೇ ಉಳಿದವು. ಅದೆಷ್ಟೋ ದಿನಗಳ ನಂತರ ಸವಣೂರಿನ ಭಂಗಿಗಳ ಸಮುದಾಯ ತಮ್ಮ ಮಠಕ್ಕೆ ಬಂದು ನಿಂತಾಗ ತಾವು ಗುರುತು ಪರಿಚಯವಿಲ್ಲದವರಂತೆ ನಡೆದುಕೊಂಡಿರಿ. ಅಲ್ಲಿಯವರೆಗೂ ಅದೆಷ್ಟು ಸಾವಿರ ಮಂದಿ ಹಾಗೆ ನಡೆದುಕೊಂಡಿದ್ದರೋ ಅದು ಅವರಿಗೆ



ನೋವಾಗಿರಲಿಲ್ಲ. ಆದರೆ ತಾವು ನಡಕೊಂಡ ರೀತಿಗೆ ಅವರು ತೀವ್ರ ಅಘಾತಕ್ಕೊಳಗಾಗಿ ಸವಣೂರಿಗೆ ಮರಳಿ ದೇವರ ಮೇಲಿನ ನಂಬಿಕೆಯನ್ನೇ ಕಳೆದುಕೊಂಡುಬಿಟ್ಟರು.

ಇವೆಲ್ಲ ಈ ಹೊತ್ತು ನೆನಪಾಗಲಿಕ್ಕೆ ಕಾರಣಗಳಿವೆ.

ಪಾಪ! ಹತ್ತಾರು ಕೇಸುಗಳನ್ನೆಲ್ಲ ಯಾರೋ ಆಗದವರು ಅವರ ಮೇಲೆ ಜಡಿದಿದ್ದಾರೆಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಆತನನ್ನು 'ಆಧುನಿಕ ಬಸವಣ್ಣ' ನೆಂದು ಕರೆದಾಗಲೂ ತಾವು ಅಲ್ಲಿಯೇ ಇದ್ದೀರೆಂದು ತಿಳಿದೆ.

ಬೇಸಿಗೆ ಬರುತ್ತಿದೆ. ಉತ್ತರ ಕರ್ನಾಟಕ-ಹೈದ್ರಾಬಾದ್ ಕರ್ನಾಟಕದ ಜನತೆ ಬಿಸಿಲ ಬವಣೆಗೆ ತತ್ತರಿಸಿ ಹೋಗಿದ್ದಾರೆ. ನೀರಿಲ್ಲದೆ, ಬೆಳೆಯಿಲ್ಲದೆ ರೈತರು ಕಂಗಾಲಾಗಿದ್ದಾರೆ. ದಿನ ನಿತ್ಯದ ಆಹಾರವಾದ ರೊಟ್ಟಿ ಮಾಡುವ ಜ್ವಾಳದ ಬೆಲೆ ಕೆ.ಜಿ.ಗೆ ರೂ. 40 ರಿಂದ 50 ರೂಪಾಯಿಗಳವರೆಗೆ ಏರಿದೆ. ಬಿಜಾಪುರದ ಜ್ವಾಳ ಬೆಳೆವ ಹಳ್ಳಿಗಳಲ್ಲಿ ಈ ಬಾರಿ ಒಂದೇ ಒಂದು ಕಾಳೂ ಬೆಳೆದಿಲ್ಲ. ಹಳ್ಳಿಹಳ್ಳಿಗಳಲ್ಲಿ ಕಿಲೋಮೀಟರ್ ದೂರದವರೆಗೂ ಹಬ್ಬಿರುವ ಖಾಲಿ ಕೊಡ ಪಾತ್ರೆಗಳ ಸಾಲುಸಾಲುಗಳ ಜೊತೆಗೆ ಒಂದು ಬಿಂದಿಗೆ ನೀರಿಗೆ ಜಗಳವಾಡುತ್ತಿರುವ ಜನರನ್ನು ನೋಡಿದರೆ ಸಂಕಟವಾಗುತ್ತದೆ.

ಹೊಲ ಮಾರುವುದಿಲ್ಲವೆಂದರೂ ರೈತರನ್ನು 'ಟೂರ್' ನೆಪದಲ್ಲಿ ಊರೂರು ಸುತ್ತಿಸಿ ಜಮೀನುಗಳನ್ನು ಕಾರ್ಖಾನೆಗಳಿಗಾಗಿ ವಶಪಡಿಸಿಕೊಳ್ಳುವ ಹುನ್ನಾರ ಹಾವೇರಿಯಲ್ಲಿ ನಡೆಯುತ್ತಿದೆ.

ಗಣಿ ಸದ್ದಡಗಿ ಹೋದರೂ ಸುಮಾರು ಎರಡು ಲಕ್ಷಕ್ಕೂ ಅಧಿಕ ಕಾರ್ಮಿಕರು ಸಂಡೂರಿನಲ್ಲಿ ಬೀದಿ ಪಾಲಾಗಿದ್ದಾರೆ.

ಇಂತಹವುಗಳ ಬಗ್ಗೆ ತಲೆಕೆಡಿಸಿಕೊಳ್ಳಲಿಕ್ಕೆ ಯಾರಿಗೂ ಸಮಯವಿಲ್ಲ.

'ಚಿಂತನ-ಮಂಥನ' 'ಬರ್ತಡೇ' ಗಳೆಂದೋ ಆಯ್ಕೆಯಾದ ಶಾಸಕರೆಲ್ಲ ಎಸಿ ರೂಮ್‌ಗಳಲ್ಲಿ ರೆಸಾರ್ಟುಗಳಲ್ಲಿ ಬ್ಯೂಸಿಯಾಗಿದ್ದಾರೆ. ಜನರೂ ಸಹ ಅವರನ್ನು ನೆನೆಯಲಿಕ್ಕಿಲ್ಲ.

ಆದರೆ ನಿಮ್ಮ ನೆನಪಂತೂ ಜನರಿಗೆ ಬಂದೇ ಬರುತ್ತದೆ.

'ಬರ್ತಡೇ ಬಾಯ್' ರಾಜಕಾರಣಿಯೊಬ್ಬರ ಕಾರ್ಯಕ್ರಮದಲ್ಲಿ ಭಾಗವಹಿಸುವ ತಾವುಗಳು ನುಡಿದ ಪ್ರತಿಯೊಂದು ಮಾತಿಗೂ ಜನತೆಯ ದೃಷ್ಟಿಯಲ್ಲಿ ಬಹಳವೇ 'ತೂಕ' ವಿರುತ್ತದೆ.

'ಪವಿತ್ರ ಸದನದಲ್ಲಿ-ರೈತರ ಬವಣೆಗಳ ಬಗ್ಗೆ ಚರ್ಚಿಸುತ್ತಿರುವಾಗ ನೀಲಿ ಚಿತ್ರ ವೀಕ್ಷಿಸಿದ, ಹೆಣ್ಣು ಮಕ್ಕಳಿಗೆ ಮೋಸವೆಸಗಿದ ಜನರ ನಡುವೆ ತಾವುಗಳು ನಿಂತು ಮಾತನಾಡಿದ್ದುದು ನೋವು ತರಿಸಿತು.

ಯಾಕೋ ಜೇಡರ ದಾಸಿಮಯ್ಯನ ವಚನ ನೆನಪಾಗುತ್ತಿದೆ.

'ಮಠದೊಳಗಣ ಬೆಕ್ಕು/ಇಲಿಯ ಕಂಡು
ಪುಟನೆಗೆದಂತಾಯ್ತು ಕಾಣಾ
ರಾಮನಾಥಾ'.

ಹೇಳಿ ಶರಣರೆ ನೀವೇಕೆ ಹೀಗಿದಿರಿ ?

ಕವನ

ಹದ್ದು ಹಾರುತ್ತಿದೆ

ಹದ್ದು ಹಾರುತ್ತಿದೆ ಗೆಳೆಯಾ
ಯುದ್ಧ ಭೂಮಿಯ ಮೇಲೆ
ಬಿದ್ದ ಹೆಣಗಳ ಕಡೆಗೆ
ರೆಕ್ಕೆ ಬಡಿದು ॥೧॥
ಹಸಿಮಾಂಸ, ಬಿಸಿರಕ್ತ
ಆಹಾರ ಅರಸುತ್ತ
ಹಾರುತ್ತಿದೆ ಗೆಳೆಯಾ
ಕ್ರೂರ ಕೊಕ್ಕಿನ ಹದ್ದು ॥೨॥
ಸತ್ತವರ ಮೇಲೆರಗಿ
ಕಣ್ಣುಗುಡ್ಡೆಯ ಕುಕ್ಕಿ
ಎದೆಯ ಗುಂಡಿಗೆ, ಕರುಳು
ಬಗೆ ಬಗೆದು ತಿಂದು ॥೩॥
ಶ್ವೇತ ಭವನದ ದೊರೆಯು
ಸಾಕಿದಾ ಹದ್ದು!
ಯುದ್ಧದಾಹದ ಕ್ರೂರ
ಕಣ್ಣಿನಾ ಹದ್ದು
ಹಾರುತ್ತಿದೆ ಗೆಳೆಯಾ ಹದ್ದುಮೀರಿ ॥೪॥
ಇರಾಕ್, ಲೆಬನಾನ್, ಸಿರಿಯಾ
ನೆತ್ತಿಯಾ ಮೇಲೆ
ಆಫ್ಘಾನ್, ಇಸ್ರೇಲ್, ಕುವೈತ್
ಸರಹದ್ದಿನೊಳಗೆ
ಹಾರುತ್ತಿದೆ ಹದ್ದು ರೆಕ್ಕೆಬಿಚ್ಚಿ ॥೫॥
ಯುದ್ಧ ನಡೆಯಲೇ ಬೇಕು
ಹದ್ದು ಬದುಕಲು ಗೆಳೆಯಾ
ಬಾಂಬು ಸಿಡಿಯಲೇ ಬೇಕು
ಜಗದ ತುಂಬ ॥೬॥
ಏಸು, ಪೈಗಂಬರರ
ಶಾಂತಿಯ ಹೃದಯದ
ಮೇಲೆರಗಿದೆ ಹದ್ದು
ಬುದ್ಧನ ಕನಸುಗಳ
ಕುಕ್ಕಿ ತಿನ್ನುತ್ತಿದೆ ಹದ್ದು
ರೆಕ್ಕೆ ಮುರಿಯಲೇ ಬೇಕು
ಏಳು ಗೆಳೆಯಾ ॥೭॥

– ಹುಲಿಕಟ್ಟೆ ಚನ್ನಬಸಪ್ಪ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH